[MR DEPUTY SPEAKER in the Chair]

Mysore Excise (Second Amendment) Bill, 1970

(i) Statutory Resolution to disapprove Ordinance 4 of 1970

(ii) Motion to Consider

(*Debete Continued*)

†ಶ್ರೀ ಪಿ. ವಿ. ಐತಾಳ್ (ಸೂರತ್ಕಲ್).—ಮಾನ್ಯ ಅಧ್ಯಕ್ಷರೇ, ಮೊನ್ನೆ ನಾನು ಈ ಅಬ್ಕಾರಿ ಆಫೀಸರ್ ಹಾಗೂ ಅಬ್ಕಾರಿ ಕಂಟ್ರಾಕ್ಟರ್‌ಗಳು ನೇಮಕ ಮಾಡುವಂತಹ ಗೂಂಡಾಗಳು ಜನರಿಗೆ ಕೊಡುತ್ತಿರುವ ಹಿಂಸೆಯ ಬಗ್ಗೆ ಮಾತನಾಡುತ್ತಿದ್ದೆ. ಆ ಸಮಯದಲ್ಲಿ ಮಾನ್ಯ ರಾಮಕೃಷ್ಣ ಹೆಗಡೆ ಯವರು ಏನು ಯಕ್ಷಗಾನ ಮಾಡುತ್ತಿದ್ದೀರಾ ಎಂದು ಪರಿಹಾಸ್ಯ ಮಾಡಿದರು.

ಶ್ರೀ ರಾಮಕೃಷ್ಣ ಹೆಗಡೆ.—ನಾನು ತಮ್ಮನ್ನು ಪರಿಹಾಸ್ಯ ಮಾಡಲಿಲ್ಲ. ತಮ್ಮ ಮಾತಿನ ಶೈಲಿಯನ್ನು ಹೊಗಳಿದೆ.

ಶ್ರೀ ಪಿ. ವಿ. ಐತಾಳ.—ಬಹಳ ಸಂತೋಷ. ಆದರೆ ಇವತ್ತು ನಾನು ಯಕ್ಷಗಾನ ಮಾಡುವು ದಿಲ್ಲ. ಆ ದಿನ ಪ್ರಾರಂಭ ಮಾಡಿದ ಭಾಷಣವನ್ನು ಇವತ್ತು ಅಂತ್ಯ ಮಾಡಬೇಕಾಗಿದೆ. ಆ ದಿನ ನಾನು ಈ ತಿದ್ದುಪಡಿ ಮಸೂದೆಯ ಬಗ್ಗೆ ಮಾತನಾಡುತ್ತಿದ್ದಾಗ ಮಂಗಳೂರಿನ ಶ್ರೀಮಾನ್ ಇದಿನಬ್ಬನವರ ಕ್ಷೇತ್ರದಲ್ಲಿ ಜಪ್ಪಿನಮೊಗರುವಿನ ಎಕ್ಸೈಜ್ ಆಫೀಸರ್ ಅವರು ಮತ್ತು ಮೂರ ಜನ ಗೂಂಡಾಗಳು ಸೇರಿಕೊಂಡು ಬ್ರೆಸಿಲ್‌ಡಿಸೋಜ ಎಂಬಾತನನ್ನು ಕೊಲೆಮಾಡಿದ್ದಾರೆ. ಈ ಬಗ್ಗೆ ಒಂದು ಕಾಲ್‌ಅಟೆನ್‌ಷನ್ ನೋಟೀಸ್ ಕೂಡ ಅಧ್ಯಕ್ಷರ ಬಳಿ ಬಂದಿರಬಹುದು. ಮತ್ತು ಅಲ್ಲಿಯವರು ಮಾನ್ಯಮಂತ್ರಿಗಳಿಗೆ ಟೆಲಿಗ್ರಾಂ ಕೂಡ ಕೊಟ್ಟಿದ್ದಾರೆ. ನನಗೂ ಕೂಡ ಒಂದು ಟೆಲಿಗ್ರಾಂ ಬಂದಿದೆ. ಈ ವಿಚಾರವನ್ನು ಅಸೆಂಬ್ಲಿಯಲ್ಲಿ ಪ್ರಸ್ತಾಪ ಮಾಡಬೇಕೆಂದು ಮತ್ತು ಈ ವಿಚಾರದ ಬಗ್ಗೆ ಸ್ಪೆಷಲ್ ಎನ್‌ಕ್ವೈರಿ ಮಾಡುವಂತೆ ಸರ್ಕಾರವನ್ನು ಕೇಳಬೇಕೆಂದು ಅಲ್ಲಿಯವರು ಟೆಲಿಗ್ರಾಮ್‌ನಲ್ಲಿ ನನ್ನನ್ನು ಕೇಳಿದ್ದಾರೆ. ಇದು ಯಕ್ಷಗಾನವಲ್ಲ, ಅಥವಾ ಗಂಧರ್ವಗಾನವೂ ಸಹ ಅಲ್ಲ. ಇದು ಸ್ಮಶಾನ ಗಾನವಾಗಿದೆ. ಮಹಾಭಾರತದ ವಿರಾಟಪರ್ವ ಈಗ ಜ್ಞಾಪಕಕ್ಕೆ ಬರುತ್ತಿದೆ. ಮಂಗಳೂರಿನ ಜಿಲ್ಲಾಧಿಕಾರಿಯವರು ವಿರಾಟರಾಜನಂತೆ ಇದ್ದಾರೆ. ಅವರು ನ್ಯಾಯವಾದಿಗಳಾಗಿದ್ದರೂ ಕೂಡ ಈ ಗೂಂಡಾಗಳನ್ನು ಕಂಟ್ರೋಲ್ ಮಾಡುವುದಕ್ಕೆ ಅವರಿಗೆ ಸಾಧ್ಯವಾಗುತ್ತಿಲ್ಲ. ಎಕ್ಸೈಜ್ ಆಫೀಸರ್ ಅವರು ಕೀಚಕರಾಗಿದ್ದಾರೆ ಕಂಟ್ರಾಕ್ಟರುಗಳು ನೇಮಕ ಮಾಡಿದಂತಹ ಉಪಕೀಚಕರು ನೂರಾರು ಮಂದಿ ಇದ್ದಾರೆ. ಇವತ್ತು ಇಡೀ ರಾಜ್ಯದಲ್ಲಿ 200 ಅಥವಾ 300 ಜನ ಎಕ್ಸೈಜ್ ಗಾರ್ಡ್‌ಗಳು ಇದ್ದಾರೆ. ಇದು ಯಾತಕ್ಕೂ ಕೂಡ ಸಾಲದು. ಇವತ್ತು ಎಕ್ಸೈಜ್ ಕಂಟ್ರಾಕ್ಟರ್‌ಗಳು ತಮ್ಮ ಅನುಕೂಲಕ್ಕಾಗಿ ನೂರಾರು ಜನ ಗೂಂಡಾಗಳನ್ನು ನೇಮಕ ಮಾಡಿ ಕೊಂಡಿದ್ದಾರೆ. ಇವರಲ್ಲಿ ರಿಟೈರ್ ಆದಂಥ ಪೋಲೀಸ್ ಸಿಪಾಯಿಗಳು ಸಹ ಇದ್ದಾರೆ. ಈ ಎಕ್ಸೈಜ್ ಆಫೀಸರ್‌ಗಳು ಈ ಗೂಂಡಾಗಳ ಸಹಕಾರ ಪಡೆದು ಹೆಣ್ಣುಹುಡುಗಿಯರ ಮೇಲೆ ಕಣ್ಣೊಡೆಯುವು ದನ್ನು ಸಹ ಮಾಡುತ್ತಿದ್ದಾರೆ.

ಉಪಾಧ್ಯಕ್ಷರು.—ತಾವು ದಯವಿಟ್ಟು ಬಿಲ್ ಬಗ್ಗೆ ಮಾತನಾಡಬೇಕು.

ಶ್ರೀ ಪಿ. ವಿ. ಐತಾಳ್.—ಎಕ್ಸೈಜ್ ಅಧಿಕಾರಿಗಳಿಗೆ ಅರ್ಬಿಟ್ರರಿ ಪವರ್ ಕೊಟ್ಟಿರುವುದರಿಂದ ಇದೆಲ್ಲಾ ನಡೆಯುತ್ತಿದೆ. ಅದಕ್ಕೋಸ್ಕರ ನಾನು ಇದೆಲ್ಲವನ್ನು ಹೇಳಬೇಕಾಗಿದೆ. ನಾನೇನು ಇಲ್ಲಿ ಯಕ್ಷಗಾನ ಮಾಡುತ್ತಿಲ್ಲ. ಬ್ರಿಟೀಷರ್ ಕಾಲದ ಆಡಳಿತದಿಂದ ಹಿಡಿದು ಇಲ್ಲಿಯವರೆವಿಗೂ ಕೂಡ ಯಾರನ್ನಾದರೂ ಕೂಡ ಅರೆಸ್ಟ್ ಮಾಡಬೇಕಾಗಿದ್ದರೆ The accused must have been found committing offence ಎಂದು ಕಾನೂನು ಇತ್ತು. In murder cases, the arrest could be made without warrant ಎಂದು ನಿಯಮವಿದೆ. ಈಗಿನ ಅಮೆಂಡ್ ಮೆಂಟ್ ಪ್ರಕಾರ 'found committing offence' ಎಂದು ಇದ್ದುದನ್ನು 'for offence' ಎಂದು ಸಬ್ಸ್ಟಿಟ್ಯೂಟ್ ಮಾಡಿದ್ದಾರೆ. ಇದು ಮಂಗನಿಗೆ ಮದ್ಯ ಕುಡಿಸಿ ಅದಕ್ಕೆ ಚೇಳಿನ ಕೈಯಿಂದ ಕಡಿಸಿದರೆ ಅದು ಏನು ಮಾಡುತ್ತದೋ ಅದರಂತೆ ಈ ಅಧಿಕಾರಿಗಳು ವರ್ತಿಸುತ್ತಿದ್ದಾರೆ. ಈ ಎಕ್ಸೈಜ್ ಅಧಿಕಾರಿಗಳು ಯಾವಾಗಲೂ ತಮ್ಮ ರಾಜಮಹಾರಾಜರಂತೆ ತಮ್ಮ ಸಿಬ್ಬಂದಿಗಳೊಡನೆ

ಹಾಗೂ ಕಂಟ್ರಾಕ್ಟರುಗಳು ನೇಮಿಸಿಕೊಂಡಿರುವ ಗೂಂಡಾಗಳ ಜೊತೆಯಲ್ಲಿ ಕಳ್ಳಭಟ್ಟಿ ತಯಾರಿಕೆಯ ಪತ್ತೆ ಮಾಡಲು ಹೊರಡುತ್ತಾರೆ. ನಾನು ಮೊದಲೇ ಹೇಳಿದಂತೆ ಮೊನ್ನೆಯದಿನ ನಾನು ಇಲ್ಲಿ ಇದೇ ವಿಷಯ ಮಾತನಾಡುತ್ತಿದ್ದಾಗ ಮಾನ್ಯ ಇದಿನಬ್ಬನವರ ಕ್ಷೇತ್ರದಲ್ಲಿ ಎಕ್ಸೈಜ್ ಅಧಿಕಾರಿಗಳು ತಮ್ಮ ಸಿಬ್ಬಂದಿ ಮತ್ತು ಗೂಂಡಾಗಳ ಜೊತೆಯಲ್ಲಿ ತನಿಖೆಗಾಗಿ ಹೋಗುತ್ತಿದ್ದಾಗ ಅವರ ಕ್ರೂರ ದೃಷ್ಟಿ ಆದೇತಾನೆ ಮೀನು ಹಿಡಿದು ದೋಣಿಯಲ್ಲಿ ಇಡುತ್ತಿದ್ದ ಬ್ರಿಸಿಲ್ ಡಿಸೋಜ ಮತ್ತು ಜೋಕಿಂ ಡಿಸೋಜ ಎಂಬುವರ ಮೇಲೆ ಬಿತ್ತು. ಇವರಿಬ್ಬರೂ ಕೂಡ ಕ್ರಿಶ್ಚಿಯನ್ ಜಾತಿಗೆ ಸೇರಿದ ಬಡ ಜನರು. ಇಂತಹವರ ಮೇಲೆ ಅವರ ವಕ್ರ ದೃಷ್ಟಿ ಬಿತ್ತು. ನಂತರ ಇವರಿಬ್ಬರನ್ನು ಕೂಡ ಆ ಎಕ್ಸೈಜ್ ಗಾರ್ಡ್‌ಗಳು ಮತ್ತು ಉಪಕೀಚಕರು ಓಡಿಸಿಕೊಂಡು ಹೋದರು. ಆದರೆ ಅವರನ್ನು ಹಿಡಿಯುವುದಕ್ಕಾಗಲಿಲ್ಲ. ಏಕೆಂದರೆ ಒಬ್ಬನು ಪ್ರಾಣಭಯದಿಂದ ಹೊಳೆಗೆ ಹಾರಿದ, ಮತ್ತೊಬ್ಬನು ಕಬ್ಬಿನ ಗದ್ದೆಯೊಳಕ್ಕೆ ಓಡಿಹೋಗಿ ಅವಿತುಕೊಂಡ. ಇದು ಮಹಾಭಾರತದ ಕೀಚಕ ಯುಗವಲ್ಲ, ಕಲಿಯುಗದ ಕೀಚಕಯುಗವಾಗಿದೆ. ಆಟಂಬಾಂಬಿನ ಕೀಚಕಯುಗವಾಗಿದೆ ಎಂದು ಹೇಳಬಹುದು. ಕಬ್ಬಿನ ಗದ್ದೆಯಲ್ಲಿ ಅವಿತು ಕೊಂಡಿದ್ದವನು ಮೂರು ಗಂಟೆಯ ನಂತರ ಓಡಿಸಿಕೊಂಡು ಬಂದವರು ಹೊರಟುಹೋಗಿರಬಹುದೆಂಬ ಊಹೆಯ ಮೇಲೆ ಹೊರಗೆ ಬಂದ. ಆದರೆ ಆತನು ಹೊರಗೆ ಬರುವುದನ್ನೇ ಕಾಯುತ್ತಿದ್ದ ನಿಮ್ಮ ಗಾರ್ಡ್‌ಗಳು ಮತ್ತು ಉಪಕೀಚಕರು ಆತನನ್ನು ಹಿಡಿದುಕೊಂಡು ಕೆನ್ನೆಗೆ ಹೊಡೆದು ಮರ್ಡರ್ ಮಾಡಿದ್ದಾರೆ. ಜೋಕಿಂ ಡಿಸೋಜ ಎಂಬಾತನು ಹೊಳೆಗೆ ಹಾರಿ ಇನ್ನೊಂದು ದಡವನ್ನು ಸೇರಿದ. ಈ ಮರ್ಡರ್ ವಿಷಯ ತಿಳಿದ ನಂತರ ಊರಿನವರು ನಿಮ್ಮ ಗಾರ್ಡ್‌ಗಳನ್ನು ಉಪಕೀಚಕರನ್ನು ಹಾಗೂ ನಿಮ್ಮ ಆಫೀಸರನ್ನು ಒಂದು ಮೈಲಿಯವರೆಗೆ ಓಡಿಸಿಕೊಂಡು ಹೋಗಿ ಹೊಡೆದಿದ್ದಾರೆ. ಈಗ ಸಂಬಂಧಪಟ್ಟವರನ್ನೆಲ್ಲಾ ಅರೆಸ್ಟ್ ಮಾಡಿದ್ದಾರೆ.

ಎಕ್ಸೈಜ್ ಆಫೀಸರನ್ನೂ, ಉಪಕೀಚಕರನ್ನೂ ಎಂದರೆ ಗೂಂಡಾಗಳನ್ನು ಅರೆಸ್ಟ್ ಮಾಡಿದ ಮೇಲೆ ಡೆಪ್ಯುಟಿ ಕಮಿಷನರ್ ಇನ್‌ಸ್ಪೆಕ್ಷನ್ನಿಗೆ ಹೋಗಿದ್ದರಾ? ಬಡ ಜನವಾದ ಬ್ರೆಸಿಲ್ ಡಿಸೋಜನ ಮರಣದ ಒಂದು ಮೆರವಣಿಗೆಗೆ ಸುಮಾರು 3 ಸಾವಿರ ಜನ ಹಿಂದೂ ಮುಸ್ಲಿಮರು ಮತ್ತು ಕ್ರಿಶ್ಚಿಯನರು ಹೋಗಿದ್ದರು. ಎಕ್ಸೈಜ್ ಆಫೀಸರ ಅತ್ಯಾಚಾರ ಅನಾಚಾರ ಆದ ಮೇಲೆ ಅದನ್ನು ಪ್ರತಿಭಟಿಸುವುದಕ್ಕೆ ಎರಡು ಮೂರು ಸಾವಿರ ಜನಗಳು ಮೆರವಣಿಗೆ ಹೋಗಿದ್ದರು. ನಮ್ಮ ಕಾಂಗ್ರೆಸ್ ಪಕ್ಷದ ಸದಸ್ಯರಾದ ಶ್ರೀ ಇದಿನಬ್ಬ ಅವರ ಕ್ಷೇತ್ರದಲ್ಲಿ ಈ ರೀತಿ ಮೆರವಣಿಗೆ ನಡೆದಿದೆ. ಈಗ ಎಕ್ಸೈಜ್ ಆಫೀಸರುಗಳಿಗೆ ಈ ಕಾನೂನಿನ ಮುಖಾಂತರ ವಿತೌಟ್ ವಾರಂಟ್ ತಪ್ಪಿತಸ್ಥರನ್ನು ಅರೆಸ್ಟ್ ಮಾಡತಕ್ಕಂಥ ಪವರನ್ನು ಕೊಡುತ್ತಿದ್ದೀರಿ, ಇಂಥಾ ಅಧಿಕಾರ ಪೋಲೀಸಿನವರಿಗೂ ಇಲ್ಲ. ಈಗ ತಾವು ಮಾಡತಕ್ಕಂಥ ಕಾನೂನು ಏನಿದೆ ಇದು ಬ್ರಿಟೀಷರ ಕಾಲದಲ್ಲಿಯಾದರೂ ಇತ್ತೇ ? ಎಕ್ಸೈಜ್ ಅಫೆನ್ಸಿಗೆ ವಾರಂಟ್ ಇಲ್ಲದೆ ಅರೆಸ್ಟ್ ಮಾಡತಕ್ಕ ಅಧಿಕಾರ ಪೋಲೀಸಿನವರಿಗೆ ಇಷ್ಟರವರೆಗೆ ಇತ್ತೇ ? ಅಂಥಾ ಒಂದು ಅಧಿಕಾರವನ್ನು ಈವೊತ್ತು ಎಕ್ಸೈಜ್ ಆಫೀಸರಿಗೆ ಕೊಟ್ಟಿದ್ದೀರಿ. ಎಕ್ಸೈಜ್ ಅಫೆನ್ಸಿಗೆ ಸಂಬಂಧಪಟ್ಟ ಹಾಗೆ ಮರ್ಡರ್ ಮಾಡಿದ್ದರೂ ಕೂಡ ಸರ್ಕಾರದವರು ಪರ್ಮಿಷನ್ ಕೊಡದ ಹೊರತು ಅವರು ಕೇಸು ರಿಜಿಸ್ಟರ್ ಮಾಡುವ ಹಾಗಿಲ್ಲ. ಇಂಥಾ ಒಂದು ಅಧಿಕಾರವನ್ನು ಇವೊತ್ತು ತಾವು ಎಕ್ಸೈಜ್ ಇಲಾಖೆಯ ಆಫೀಸರಿಗೆ ಕೊಡುತ್ತಿದ್ದೀರಿ. ಪೋಲೀಸಿನವರು ಮಾಡುವಂಥಾ ಅತ್ಯಾಚಾರ 3–4 ಕಡೆಗಳಲ್ಲಿ ಕೇಳಿ ಬರುತ್ತಿದೆ. ಅಂಥಾ ಅತ್ಯಾಚಾರಗಳು ನಮ್ಮ ಸ್ಟೇಟಿನಲ್ಲಿ 10–12 ಇರಬಹುದು. ಕೀಚಕರು ಮತ್ತು ಉಪಕೀಚಕರು ನಾವು ಅನ್ಯಾಯ ಮಾಡುವುದಿಲ್ಲ ಎಂದು ಹೇಳಿ ಕುಡಿಯುವ ಮತ್ತು ಹೆಂಗಸರ ಹವ್ಯಾಸದಲ್ಲಿ ತೊಡಗಿದ್ದಾರೆ. ಕಂಟ್ರಾಕ್ಟರ ದುಡ್ಡನ್ನು ನಾನಾ ರೀತಿಯಲ್ಲಿ ಇವರು ಉಪಯೋಗ ಮಾಡಿಕೊಳ್ಳುತ್ತಿದ್ದಾರೆ. ಈಗ ಎಕ್ಸೈಜ್ ಬಿಲ್ಲಿನಲ್ಲಿರುವಂತಹ ಕಾನೂನುಗಳನ್ನು ನೋಡಿದರೆ ಇವುಗಳೇನಾದರೂ ಜಾರಿಗೆ ಬಂದದ್ದೇ ಆದರೆ ರಾಮರಾಜ್ಯವಲ್ಲ ಕೀಚಕನ ರಾಜ್ಯವಾಗುತ್ತದೆಂದು ನಾನು ಸರ್ಕಾರಕ್ಕೆ ಎಚ್ಚರಿಕೆಯನ್ನು ಕೊಡುತ್ತಿದ್ದೇನೆ. ನನಗೆ ಬಂದಿರತಕ್ಕ ಟೆಲಿಗ್ರಾಮ್ ಅನ್ನು ಮಾನ್ಯ ಅಧ್ಯಕ್ಷರ ಮುಖಾಂತರ ಮಾನ್ಯ ಮಂತ್ರಿಗಳಿಗೆ ಕೊಡುತ್ತೇನೆ. ವಿರಾಟರಾಯರಾದ ಧರ್ಮಾತ್ಮರಾದ ಎಕ್ಸೈಜ್ ಕಮಿಷನರಿಗೆ ನಾನು ಹೇಳಿದೆ, ಸ್ವಾಮಿ, ಉಪಕೀಚಕರು ಮಧ್ಯ ರಾತ್ರಿಯಲ್ಲಿ ಬಂದು ಬಾಗಿಲನ್ನು ಒಡೆದು ಕೆಲವು ಜನಗಳ ಮನೆಗಳಿಗೆ ನುಗ್ಗಿ ಹೆಂಗಸರ ಮೇಲೆ ಕೈ ಮಾಡಿದ್ದಾರೆ. ಈ ವಿಚಾರದಲ್ಲಿ ಒಂದು ಸಾವಿರ ಜನರು ಎಕ್ಸೈಜ್ ಕಮಿಷನರಿಗೆ ಒಂದು ಪಿಟಿಷನ್ ಕೊಟ್ಟಿದ್ದಾರೆ. ಈ ಅತ್ಯಾಚಾರಗಳನ್ನೆಲ್ಲಾ ಮಾಡುತ್ತಾ ಇರುವವರು ಯಾರು ಎಂದರೆ ಎಕ್ಸೈಜ್ ಆಫೀಸರು, ಕಂಟ್ರಾಕ್ಟರು ಮತ್ತು ಉಪಕೀಚಕರು. ಒಂದು ಸಾವಿರ ಜನ ಈ ಅನ್ಯಾಯದ ಬಗ್ಗೆ ಪಿಟಿಷನ್ನಿಗೆ ದಸ್ಕತ್ತು ಹಾಕಿ ನಿಮ್ಮ ಡೆಪ್ಯುಟಿ ಕಮಿಷನರ್ ಟಿ. ಜಿ. ರಾಮಕೃಷ್ಣ ಅವರಿಗೆ ಕೊಟ್ಟಿದ್ದು ಏನಾಯಿತು ? ನೀರ್ ಮಾರ್ಗ ಗ್ರಾಮದಲ್ಲಿ 6 ಕಡೆ ಲೈಸೆನ್ಸ್ ಇಲ್ಲದೆ ಕಂಟ್ರಾಕ್ಟರ ಬಲಾತ್ಕಾರದಿಂದ ಅಂಗಡಿಗಳಲ್ಲಿ ಮತ್ತು ಹೊಟೇಲುಗಳಲ್ಲಿ ಷರಾಬ್, ಅರಕ್ ಮಾರುತ್ತಿದ್ದಾರೆ. ಕಂಟ್ರಾಕ್ಟರುಗಳು ಸಬ್ ಕಂಟ್ರಾಕ್ಟರುಗಳು ಹತ್ತು ಕಡೆಗಳಲ್ಲಿ ಲೈಸೆನ್ಸ್

(ಶ್ರೀ ಪಿ. ಎ. ಐತಾಳ್)

ಇಲ್ಲದೆ ಹೆಂಡ, ಸಾರಾಯಿಯನ್ನು ಮಾರಿಸುತ್ತಿದ್ದಾರೆ. ಸುಂದರ್ ಕೊಠಾರಿ, ಹೊನ್ನೆ ಕೊಠಾರಿ ಎನ್ನುವವರು ಒಂದು ಗ್ರಾಮದಲ್ಲಿ ಲೈಸೆನ್ಸ್ ಇಲ್ಲದೆ ಹೆಂಡ ಸಾರಾಯನ್ನು ಮಾರುವುದಿಲ್ಲ ಎಂಥು ಹೇಳಿದ್ದಕ್ಕೆ ಸಬ್ ಕಂಟ್ರಾಕ್ಟರ್ ನಾರಾಯಣಪ್ಪ ಮತ್ತು 20 ಜನ ಉಪಕೀಚಕರು ಮಧ್ಯರಾತ್ರಿಯಲ್ಲಿ ಹೋಟೇಲಿನ ಬಾಗಿಲನ್ನು ಮುರಿದು ಹೋಟೆಲಿನ ಮಾಲೀಕರಿಗೆ ದೊಡ್ಡ ಕತ್ತಿಯನ್ನು ತೋರಿಸಿದ್ದಾರೆ! ಈ ರೀತಿಯಾಗಿ ಸರ್ಕಾರಿ ಲೈಸೆನ್ಸ್ ಇಲ್ಲದೆ 6 ಕಡೆ ನಿಮ್ಮ ಕಂಟ್ರಾಕ್ಟರು ಹೆಂಡಾ ಸಾರಾಯನ್ನು ಮಾರುತ್ತಿದ್ದಾರೆ, ಇದನ್ನು ನನ್ನ ಜೊತೆಯಲ್ಲಿ ಬನ್ನಿ ತೋರಿಸುತ್ತೇನೆ. ನಿಮ್ಮ ಎಕ್ಸೈಜ್ ಆಫೀಸರನ್ನು ನಂಬಬೇಡಿ ಜನರನ್ನು ನಂಬಿ ಎಂದು ನಿಮ್ಮ ಡೆಪ್ಯುಟಿ ಕಮಿಷನರಾದ ಟಿ. ಜೆ. ರಾಮಕೃಷ್ಣ ಅವರನ್ನು ನಾನು ಕರೆದೆ. ಅದಕ್ಕೆ ನಿಮ್ಮ ರಾಮಕೃಷ್ಣ ಅವರು ಹೆದರಿದರು. ಇಂಥಾ ಆಫೀಸರು ಇದ್ದಾರೆ. ಇವರ ಮೇಲೆ ನನ್ನ ಅಲಿಗೇಷನ್ ಏನೂ ಇಲ್ಲ. ಆದರೆ ಇವರಿಗೆ ಬ್ಯಾಟರಿ ಇಲ್ಲ. ಕಡೆಗೆ ಅಸೆಂಬ್ಲಿ ಪ್ರಾರಂಭವಾಗುವುದಕ್ಕೆ ಮುಂಚೆ ಶನಿವಾರದ ದಿವಸ 4 ಗಂಟೆಗೆ ನಾನು ಸಾವಿರಾರು ಜನಗಳೊಂದಿಗೆ ಡಿಸ್ಟ್ರಿಕ್ಟ್ ಎಕ್ಸೈಜ್ ಆಫೀಸರ ಹತ್ತಿರ ಹೋಗಿ ಇದನ್ನು ಎನ್‌ಕ್ವೈರಿ ಮಾಡಿಸಬೇಕೆಂದು ಹೇಳಿದ್ದೇವೆ ಆ ನಂತರ ಒಂದು ವಿರೇಜಿಗೆ ಹೋಗಿ ಎನ್‌ಕ್ವೈರಿ ಮಾಡಬೇಕು ಎಂದು ನೋಟೀಸು ಬಂತು ನೀರ್‌ಮಾರ್ಗ ಊರಿನಲ್ಲಿ ಮೂರು ಕಡೆಗಳಲ್ಲಿ ಹೊಟೇಲುಗಳಲ್ಲಿ ಬಲಾತ್ಕಾರವಾಗಿ ಹೆಂಡ ಮತ್ತು ಸಾರಾಯನ್ನು ಮಾರಾಟ ಮಾಡುತ್ತಿದ್ದಾರೆ ಬನ್ನಿ ಹೋಗುವ ಎಂದು ಡಿಸ್ಟ್ರಿಕ್ಟ್ ಎಕ್ಸೈಜ್ ಆಫೀಸರನ್ನು ನಾವು ಕರೆದೆವು. ಆದರೆ, Mr. Naidu had no battery to accompany me from the city to place where offences were being committed. ಇಂಥಾ ಆಫೀಸರು ಇದ್ದಾರೆ. ಕದ್ದು ಕಳ್ಳಭಟ್ಟಿ ಸಾರಾಯನ್ನು ಮಾರುತ್ತಾರೆಂದು ಕೆಲವು ಜನಗಳ ಮನೆಗಳಿಗೆ ಕಂಟ್ರಾಕ್ಟರು ಮಧ್ಯರಾತ್ರಿಯಲ್ಲಿ ಬಾಗಿಲನ್ನು ಒಡೆದು ನುಗ್ಗಿ ಹೆಂಗಸರನ್ನು ಎಬ್ಬಿಸಿ ಅವರ ಮೇಲೆ ಕೈ ಮಾಡಿದ್ದಾರೆ. ಇದರಲ್ಲೇನಾದರೂ ಹೆಚ್ಚು ಕಡಿಮೆ ಇದ್ದರೆ ಇವೊತ್ತು ಡಿಸ್ಟ್ರಿಕ್ಟ್ ಎಕ್ಸೈಜ್ ಆಫೀಸರು ನಾಯ್ಡು ಅವರಿಗೆ ಟ್ರಂಕಾಲ್ ಮಾಡಿ ಏನು ಐತಾಳರು ಈ ರೀತಿ ಹೇಳುತ್ತಿದ್ದಾರಲ್ಲಾ ಇದೇನು ನಿಜವೋ ಸುಳ್ಳೋ ಎಂದು ಕೇಳಿರಿ. ನಾನು ಹೇಳುವಂತಹ ಮಾತಿನಲ್ಲಿ ಹೆಚ್ಚು ಕಡಿಮೆ ಇದ್ದರೆ ನಾನು ರಾಜೀನಾಮೆಯನ್ನು ಕೊಡುತ್ತೇನೆ. ನನ್ನ ಕ್ಷೇತ್ರದಲ್ಲಿ ಕಂಟ್ರಾಕ್ಟರುಗಳ ಉಪಕೀಚಕರು 8 ಗಂಟೆಯವೇಳೆಗೆ ಹೊಟೇಲಿನಲ್ಲಿ ಸೇರಿ ಬೇಕಾದಂತಹ ಊಟವನ್ನು ತೆಗೆದುಕೊಳ್ಳುತ್ತಾರೆ. ಭೂತಗಳಿಗೆ ಸಂತೃಪ್ತಿಯಾಗಬೇಕು. ಕಂಟ್ರಾಕ್ಟರುಗಳು ಉಪಕೀಚಕರಿಗೆ ಕೋಳಿ ಕುರಿಗಳನ್ನು ತಿನ್ನಿಸಿದ್ದಾರೆ. 20 ಜನ ಗೂಂಡಾಗಳು ಕಾರಿನಲ್ಲಿ ಲಾರಿಯಲ್ಲಿ ರಾತ್ರಿಕಾಲದಲ್ಲಿ ಹಳ್ಳಿಗಳಿಗೆ ಹೋಗಿ ಜನಗಳನ್ನು ಹಿಂಸೆ ಮಾಡಿದ್ದನ್ನು ನಾನು ಹೇಳಬೇಕಾಗಿದೆ. ಮಿಸ್ಟರ್ ನಾಯ್ಡು ಅವರ ಎದುರಿಗೆ 22 ವರ್ಷದ ಒಬ್ಬ ಮಹಿಳೆ ಹೀಗೆ ಹೇಳಿದಳು : ''ಆಗ ಅಲ್ಲಿ 400–500 ಜನರ ಸಭೆ ಸೇರಿತ್ತು. ಅಲ್ಲಿದ್ದ ಒಂದು ಕೋಣೆಯಲ್ಲಿ ಆ ಎಕ್ಸೈಜ್ ಅಧಿಕಾರಿಗಳು ಕೆಲವು ಹತ್ತಿಪ್ಪತ್ತು ಜನರನ್ನಿಟ್ಟುಕೊಂಡು ಮಾಟಂಗನ್ನು ನಡೆಸುತ್ತಿದ್ದರು. ಅಂಥ ವೇಳೆಯಲ್ಲಿ ಒಬ್ಬ ಹೆಂಗಸು ಒಳಗೆ ಬಂದು ಏನು ಜಿಲ್ಲಾಧಿಕಾರಿಗಳೇ ನಿಮ್ಮ ಆಡಳಿತದಲ್ಲಿ ಆ ನಾರಣಪ್ಪ ಮತ್ತು ಆತನ ಜೊತೆಯಲ್ಲಿ 20 ಜನ ಕೀಚಕರೂ ಮತ್ತು ಉಪಕೀಚಕರೂ ನನ್ನ ಮನೆಗೆ ನುಗ್ಗಿ ನನ್ನ ಸೀರೆಯನ್ನು ಎಳೆದರು'' ಎಂದು ಆ 22 ವರ್ಷದ ಒಬ್ಬ ಕ್ರಿಶ್ಚಿಯನ್ ಹೆಣ್ಣುಮಗಳು ಹೇಳಿದಳು. ಹೇಗೆ ಆ ದ್ರೌಪದಿಯ ಸೀರೆಯನ್ನು ಹಿಂದೆ ಆ ಕೀಚಕನಾದ ದುಶ್ಯಾಸನ ಎಳೆದನೋ ಹಾಗೆ ಈ ನಿಮ್ಮ ಕೀಚಕರೂ ಉಪಕೀಚಕರೂ ಆ ಹೆಂಗಸಿನ ಸೀರೆಯನ್ನು ಎಳೆದರು. ಅನಂತರ ಒಳಗಡೆ ಇದ್ದ ಲಂಗವನ್ನು ಸೆಳೆಯುವುದಕ್ಕೆ ಪ್ರಯತ್ನ ಮಾಡಿದರು. ಸ್ವಾಮಿ, ನಮ್ಮ ಕಡೆ ಹೆಣ್ಣುಮಕ್ಕಳು ಸೀರೆಯ ಒಳಗಡೆ ಲಂಗ ಎಂಬುದನ್ನು ಹಾಕತಕ್ಕ ಪದ್ಧತಿಯುಂಟು. ಆ ಲಂಗವನ್ನು ಕೀಳುವುದಕ್ಕೆ ಈ ಕೀಚಕ ಉಪಕೀಚಕರು ಕೈ ಹಾಕಿದರೆಂದು ಆ ಹೆಣ್ಣುಮಗಳು ಹೇಳಿದಳು. ಆದರೆ ಆ ದ್ರೌಪದಿ ಸೀರೆಯನ್ನು ಸೆಳೆಯುವುದಕ್ಕೆ ಕೈಹಾಕಿದಾಗ ಆ ಹೆಣ್ಣುಮಗಳ ಮರ್ಯಾದೆಯನ್ನು ಉಳಿಸುವುದಕ್ಕಾಗಿ ಅಲ್ಲಿದ್ದ ಕಷ್ಣನು ದ್ರೌಪದಿಯ ಸೀರೆಯನ್ನು ಅಕ್ಷಯವಾಗುವಂತೆ ಮಾಡಿದ. ಆದರೆ ಇಲ್ಲಿ ಅಂಥ ಕೃಷ್ಣರು ಯಾರು ಇಲ್ಲ. ಅಲ್ಲಿ ದ್ರೌಪದಿಯ ಸೀರೆ ಸೆಳೆಯುವುದಕ್ಕೆ ಕೈಹಾಕಿ ತಲೆಯನ್ನು ಭೀಮನಿಂದ ಕಳೆದುಕೊಂಡ ಆ ದುಶ್ಯಾಸನ. ಅದೇ ರೀತಿ ಇಲ್ಲಿ ಹಳ್ಳಿ ಹಳ್ಳಿಯಲ್ಲಿ ಹೆಣ್ಣುಮಕ್ಕಳ ಮಾನಭಂಗ ಮಾಡತಕ್ಕ ಈ ಎಕ್ಸೈಜ್ ಬ್ಲಾಕ್‌ಮಾರ್ಕೆಟಿಯರುಗಳ ಕೀಚಕರನ್ನು ಉಪಕೀಚಕರನ್ನು ತರೆತೆಗೆಯುವುದಕ್ಕಾಗಿ ನಾವು ಹಳ್ಳಿ ಹಳ್ಳಿಯಲ್ಲೂ ಭೀಮಸೇನೆಯನ್ನು ಕಟ್ಟುತ್ತೇವೆ. ಆ ಕೀಚಕರು ಮತ್ತು ಉಪಕೀಚಕರು ಆ 22 ವರ್ಷದ ಹೆಣ್ಣುಮಗಳ ಮನೆಯಲ್ಲಿದ್ದ ಎಲ್ಲಾ ತಾಮ್ರದ ಸಾಮಾನುಗಳನ್ನೂ ಹೊತ್ತುಕೊಂಡು ಹೋದರು ಎಂಬುದಾಗಿ ಆಕೆ ಹೇಳಿದಳು. ಈ ಮಾತುಗಳನ್ನು ಆ ನಾಯ್ಡು ಎದುರಿಗೆ ಹೇಳಿದಳು. ಸಾಧಾರಣವಾಗಿ ಇಂಥ ದೂರುಗಳನ್ನು ಪೋಲೀಸರಿಗೆ ಕೊಟ್ಟರೆ ಅವರು ಯಾರೂ ಸ್ಥಳಕ್ಕೆ

ಬಂದು ವಿಚಾರಮಾಡುವುದಿಲ್ಲ. ಅವರೂ ಕೂಡ ಎಲ್ಲಿ ಅವರ ಪ್ರಾಣಕ್ಕೆ ಸಂಚಕಾರ ಬರುತ್ತದೋ ಎಂದು ಅವರೂ ಕೂಡ ಹೆದರುತ್ತಾರೆ. ಇಂಥ ಗೂಂಡಾಜನರನ್ನು ವಿಚಾರಣೆ ಮಾಡಲು ಯಾರಿಗೂ ಅಲ್ಲಿ ಧೈರ್ಯವಿಲ್ಲ. ಆದಾಗ್ಯೂ ಆ ಹೆಣ್ಣುಮಗಳು ನೀರಾಮಾರ್ಗವಾಗಿ ಕಂಕನಾಡಿ ಪೋಲೀಸ್ ಸ್ಟೇಷನ್ನಿಗೆ ಹೋಗಿ ದೂರನ್ನು ಕೊಟ್ಟಳು. ನಾಲ್ಕು ಮೈಲದೂರ ಓಡಿಹೋಗಿ ಪೋಲೀಸರಿಗೆ ದೂರಿತ್ತರೆ ಅಲ್ಲಿದ್ದ ಸಬ್‌ಇನ್‌ಸ್ಪೆಕ್ಟರು 'ಏತಕ್ಕಾಗಿ ಇಂಥ ಕಂಪ್ಲೇಂಟುಗಳನ್ನು ತರುತ್ತೀರಮ್ಮ? ಇಂಥ ವಿಚಾರಗಳ ಬಗ್ಗೆ ಕಂಪ್ಲೇಂಟನ್ನು ಕೊಡಬಾರದಮ್ಮ' ಎಂದು ಹೇಳುತ್ತಾರಲ್ಲ, ಹೀಗೆ ಹೇಳುಬಹುದೇ ಎಂದು ಆ ನಾಯ್ಡು ಅವರನ್ನು ಆ ಹೆಣ್ಣುಮಗಳು ಕೇಳಿದ್ದಕ್ಕೆ ಅವರು ಹಾಗೆ ಹೇಳಿದರೇನಮ್ಮಾ, ಎಂದು ಕೇಳಿ ಸುಮ್ಮನಾದರಂತೆ.

ಶ್ರೀಮತಿ ವಿನ್ನಿಫ್ರೆಡ್ ಎಫ್. ಫರ್ನಾಂಡೀಸ್.—ಆ ನಾಯ್ಡು ಮಗಳ ಸೀರೆಯನ್ನು ಆ ಗೂಂಡಾಗಳು ಕಿತ್ತಿದ್ದರೆ ಆಗ ಪೋಲೀಸರು ಏನು ಹೇಳಬೇಕಾಗಿತ್ತೆಂಬುದು ಆತನಿಗೆ ಗೊತ್ತಾಗುತ್ತಿತ್ತು.

ಶ್ರೀ ಪಿ. ವಿ. ಐತಾಳ್.—ಇಂಥ ಅತ್ಯಾಚಾರಗಳನ್ನು ತಡೆಗಟ್ಟದಿದ್ದರೆ ಈ ದಿವಸ ಆ ಹೆಣ್ಣುಮಗಳ ಮನೆಗೆ ನುಗ್ಗಿದ್ದರೆ ನಾಳೆ ನಮ್ಮ ಮನೆ, ಇನ್ನೊಂದು ದಿನ ಮಂತ್ರಿಗಳ ಮನೆಗೂ ಆ ಕೀಚಕ ಉಪಕೀಚಕರು ನುಗ್ಗಬಹುದು. ಆದ್ದರಿಂದ ಇದನ್ನು ಈಗಲೇ ಮಟ್ಟಹಾಕಬೇಕೆಂದು ಹೇಳುತ್ತಿದ್ದೇನೆ.

ಇದಾದಮೇಲೆ ಇನ್ನೊಂದು ಪ್ರಕರಣ ಇಂಥದ್ದೇ ನಡೆದಿದೆ. ಒಬ್ಬ ಗೌಡ ಸಾರಸ್ವತರ ಮನೆಗೆ ನುಗ್ಗಿದ್ದಾರೆ. ಅವರು ಬ್ರಾಹ್ಮಣರು ದ್ವಾರಕಾ ಹೊಟೇಲಿನ ಮಾಲೀಕರು. ಅವರು ಕುಡಿಯತಕ್ಕ ಬ್ರಾಹ್ಮಣರಲ್ಲ. ಆದಾಗ್ಯೂ ಅವರ ಮನೆಗೆ ಅರ್ಧರಾತ್ರಿಯಲ್ಲಿ ನುಗ್ಗಿ ಅವರ ಮನೆಯನ್ನು ಸರ್ಚ್ ಮಾಡುವುದಕ್ಕೆ ಹೋಗಿದ್ದಾರೆ. ಆಗ ಅಲ್ಲಿ ಎರಡೂ ಕಡೆಯ ಪಾರ್ಟಿಗಳಿಗೆ ಬಲವಾದ ಹೊಡೆದಾಟವಾಗಿದೆ. ಎರಡೂ ಕಡೆಯ ಪಕ್ಷಗಳಿಗೂ ಏಟುಗಳು ಬಿದ್ದಿವೆ. ಈ ವಿಚಾರದಲ್ಲಿ ಈಗಾಗಲೇ ಸರ್ಕಾರಕ್ಕೂ ಅರ್ಜಿಗಳು ಬಂದಿರಬಹುದು. ನಾನು ಎಲ್ಲೋ ಇಂಥ ಸಂಗತಿಗಳು ಒಂದೆರಡು ಕಡೆ ಆಗಿದ್ದರೆ ಇಷ್ಟು ಮಾತನಾಡುವುದಕ್ಕೆ ಹೋಗುತ್ತಿರಲಿಲ್ಲ. ಇಂಥ ಕೀಚಕ ಉಪಕೀಚಕರ ಉಪಟಳ ಅಲ್ಲಿ ಬಹಳ ಜಾಸ್ತಿಯಾಗಿದೆ. ಇಂಥ ಘೋರ ಪ್ರಸಂಗಗಳು ನಡೆಯುತ್ತಿರುವಾಗ ಮತ್ತೆ ಇಲ್ಲಿ ಈ ತಿದ್ದುಪಡಿ ಮಸೂದೆಗೆ ನಮ್ಮ ಒಪ್ಪಿಗೆಯನ್ನು ಕೊಟ್ಟರೆ ನಾಗರೀಕರಿಗೆ ಉಳಿವಿಲ್ಲ. ಸರ್ಕಾರದವರಿಗೆ ಅವರು ಯಾರಮೇಲೆ ಏನು ಗ್ರಡ್ಜ್ ಇದ್ದರೂ ತೀರಿಸಿಕೊಳ್ಳುವುದಕ್ಕೆ ಇದೊಂದು ಒಳ್ಳೆಯ ಅಸ್ತ್ರವಾಗುತ್ತದೆ.

ಇನ್ನು ಮೂರನೆಯದಾಗಿ ಈ ಕೀಚಕ ಉಪಕೀಚಕರು ಇನ್ನೊಂದು ಕಡೆ ಒಬ್ಬ ಹೆಂಗಸಿನ ಮನೆಗೆ ರಾತ್ರಿವೇಳೆಯಲ್ಲಿ ನುಗ್ಗಿದ್ದಾರೆ. ಅದಕ್ಕೆ ವಾರಂಟಿಲ್ಲ ಏನೂ ಇಲ್ಲ. ಆಗ ಆಕೆ ಊಟಮಾಡುತ್ತಿದ್ದಳಂತೆ. ಈ ಗೂಂಡಾಗಳು ಮನೆಯ ಬಾಗಿಲನ್ನು ತಟ್ಟಿ ಬಾಗಿಲನ್ನು ತೆಗೆಯಬೇಕೆಂದು ಕೇಳಿದಾಗ ಆಕೆ ಊಟಮಾಡುತ್ತಿದ್ದೇವೆಂದು ಹೇಳಿದಳಂತೆ. ಯಮಧೂತರೂ ಕೂಡ ಊಟಮಾಡುತ್ತಿರುವವರ ಮೇಲೆ ಕೈ ಮಾಡುವುದಿಲ್ಲ ಎಂದು ಹೇಳುತ್ತಾರೆ. ಹಾಗೇ ಈ ಯಮದೂತರೂ ಅವರ ಊಟವಾಗುವತನಕ ಕಾದಿದ್ದಾರೆ. ಒಳಗಡೆ ಊಟಮಾಡುತ್ತಿದ್ದ ಮುದಕ ಒಳಗಡೆಯಿಂದ ಈ ಗೂಂಡಾಜನರನ್ನು ನೋಡಿ ಹೆದರಿ ಪ್ರಾಣಭಯದಿಂದ ಹಿತ್ತಲಬಾಗಿಲಿಂದ ಓಡಿಹೋದನಂತೆ. ಆಕೆ ಊಟವಾದ ನಂತರ ಬಾಗಿಲನ್ನು ತೆಗೆದ ನಂತರ ಎಲ್ಲಿ ಆ ಮುದುಕ ಎಂದು ಗೂಂಡಾಗಳು ಕೇಳಿದರು! ಆದಕ್ಕೆ ಆ ಹೆಣ್ಣುಮಗಳು ಆತನು ನಿಮ್ಮನ್ನು ನೋಡಿ ಪ್ರಾಣಭಯದಿಂದ ಎಲ್ಲೋ ಓಡಿಹೋಗಿರಬಹುದು, ನಾನು ಕಾಣೆ ಎಂದು ಹೇಳಿದಳಂತೆ. ಓಹೋ, ಹಾಗೋ? ಹಾಗಾದರೆ ಆ ಮುದುಕನನ್ನು ನೀನು ಹಾಜರ್ಮಾಡುವವರೆಗೂ ಸುಮಾರು 150-200 ರೂಪಾಯಿಗಳ ಬೆಲೆಬಾಳತಕ್ಕ ನಿಮ್ಮ ತಾಮ್ರದ ಹಂಡೆಯನ್ನು ನಾವು ಇಟ್ಟುಕೊಂಡಿರುತ್ತೇವೆಂದು ಹೇಳಿ ಅವರು ಹೊತ್ತುಕೊಂಡು ಹೋದರಂತೆ...

• Sri RAMAKRISHNA HEGDE.—May I very earnestly appeal to the hon. Member not to get too much exercised on this subject? Let him say whatever he wants to say calmly. I came to know that he is suffering from blood pressure.

Sri P. V. AITHAL.—Sir, I do not have any illness. It is on account of this amending Bill that I have some temperature.

Sri RAMAKRISHNA HEGDE.—Which is the clause that the hon. Member is referring to?

Sri P. V. AITHAL.—Amendment to Section 58. ಇಂಥ ಅವಕಾಶಗಳನ್ನು ಬಲಮಾಡಿಕೊಂಡರೆ ಯಾರು ಯಾರ ಮೇಲೆ ಬೇಕಾದರೂ ಹಗೆತನವನ್ನು ಸಾಧಿಸಿಕೊಳ್ಳುವುದಕ್ಕೆ ಅವಕಾಶವಾಗುವುದು. ಇಂಥ ಸರ್ಚ್ ಮಾಡತಕ್ಕ ಕಾಲದಲ್ಲಿ, ಅದಕ್ಕೆ ಪೋಲೀಸರ ಮಹಜರ್ ನಡೆಸತಕ್ಕ ಕಾಲಕ್ಕೆ ಎಕ್ಸೈಜ್‌ನವರು ನಡೆಸತಕ್ಕ ಸರ್ಚ್ ವಗೈರೆಗಳಿಗೆ ಪಟೇಲ್ ಶ್ಯಾನುಭೋಗರುಗಳಂಥ ಮುಖ್ಯಸ್ಥರ, ಊರಿನ ದೊಡ್ಡ ಮನುಷ್ಯರ ರುಜುವುಗಳು ಬೇಡವೇ? ಇಂಥ ಗೂಂಡಾಗಳ ಮೇಲೆ ಸಾಕ್ಷಿಹೇಳಲು ಯಾರು ಬರುತ್ತಾರೆ? ಹೀಗೆ 100 ಮಂದಿ ಕೀಚಕರೂ ಉಪಕೀಚಕರೂ ಮನೆಯನ್ನು ನುಗ್ಗಿ ಸರ್ಚ್ ಮಾಡುತ್ತೇವೆಂದಾಗ ಅದರಲ್ಲೂ ಮಧ್ಯರಾತ್ರಿಯಲ್ಲಿ ಆ ಬಗ್ಗೆ ಊರಿನ ಮುಖ್ಯ ಜನರ ಸಾಕ್ಷಿ ಇರಬೇಡವೇ?

ಶ್ರೀ ಇದಿನಬ್ಬ ಅವರ ಕ್ಷೇತ್ರದಲ್ಲಿ ಹಾಡುಹಗಲಲ್ಲೇ ಒಬ್ಬನನ್ನು ಹೊಡೆದು ಹಾಕಿದರು......

ಶ್ರೀ ಬಿ. ಎಂ. ಇದಿನಬ್ಬ.—ನನಗೂ ತಂತಿ ಬಂದಿದೆ. ನಾನೂ ಕೂಡ ಹೇಳುವುದಿದೆ.

ಶ್ರೀ ಪಿ. ವಿ. ಐತಾಳ್.—ಆ ಹೆಣ್ಣುಮಗಳ ಮನೆಯಿಂದ ಆ ಯಮದೂತರು ತಾಮ್ರದ ಹಂಡೆಯನ್ನು ರಾತ್ರಿವೇಳೆಯಲ್ಲಿ ಹೊತ್ತುಕೊಂಡು ಹೋಗುತ್ತಿದ್ದುದನ್ನು ಕಂಡ ಒಬ್ಬ ವಿಲೇಜ್ ಅಕೌಂಟೆಂಟ್ ಏನು ಇಷ್ಟು ಹೊತ್ತಿನಲ್ಲಿ ಏಕೆ ಹೀಗೆ ಹಂಡೆಯನ್ನು ಎತ್ತಿಕೊಂಡು ಹೋಗುತ್ತಿದ್ದೀರಿ ಎಂದು ಕೇಳಿದಾಗ ಅವರು, ಇಂಥ 'ಬಾಯಮ್ಮನ' ಮನೆಯಲ್ಲಿ ಆ ಮುದುಕ ತಲೆತಪ್ಪಿಸಿಕೊಂಡಿದ್ದಾನೆ, ಆತ ಬರುವ ತನಕ ಈ ಹಂಡೆಯನ್ನು ಕೊಡುವುದಿಲ್ಲವೆಂದು ತೆಗೆದುಕೊಂಡು ಬಂದಿದ್ದೇವೆಂದು ಹೇಳಿದಾಗ ಆ ವಿಲೇಜ್ ಅಕೌಂಟೆಂಟ್ ಪಂಚಾಯಿತಿ ಮಾಡಿ ಆ ಹಂಡೆಯನ್ನು ಆ ಹೆಣ್ಣುಮಗಳಿಗೆ ಕೊಡಿಸಿದ್ದಾರೆ. ಹೀಗೆ ಆ ಜನರಿಗೆ ಹೆಂಗಸರ ಸೀರೆಯನ್ನು ಎಳೆಯುವುದಕ್ಕೆ, ಅವರನ್ನು ಹೊಡೆಯುವುದಕ್ಕೆ ಅವರ ಮನೆಯಲ್ಲಿದ್ದ ಹಂಡೆಗಳನ್ನು ದರೋಡೆ ಮಾಡುವುದಕ್ಕೆ ಕಾನೂನಿನಲ್ಲಿ ಅವಕಾಶ ಉಂಟೇ?

3-0 P. M.

You can write to the Shanbhogue and ascertain whether it is a fact or not. The price of Copper has come down because these people are selling the copper vessels in thousands. These copper vessels are taken away by these officials from the poor people. But 99 per cent of the cases are concocted and false and the Court will dismiss them. ಇದು ಬಹಳ ಅನ್ಯಾಯ? ತಾವು ಇದನ್ನು ಎನ್‌ಕ್ವೈರಿ ಮಾಡಬೇಕು.

ಇನ್ನು ಕಳ್ಳಭಟ್ಟಿಯನ್ನು ಪತ್ತೆಹಚ್ಚಲು ಹೋಗುವ ವಿಚಾರದಲ್ಲಿ ಹೇಳುವುದಾದರೆ ಅಬ್ಕಾರಿ ಅಧಿಕಾರಿಗಳು ಕೀಚಕರಂತೆ ವರ್ತಿಸಿ ಕೆಲವು ಗೂಂಡಾಗಳನ್ನು ಉಪಕೀಚಕರಂತೆ ನೇಮಿಸಿದ್ದಾರೆ. ಈ ಉಪಕೀಚಕರ ನೆರವಿನಿಂದ ಮನೆಗಳ ಸ್ವತ್ತುಗಳನ್ನು ಲೂಟಿ ಮಾಡಿ ಎಲ್ಲೆಲ್ಲಿ ಸಣ್ಣ ಸಣ್ಣ ಯುವಕಿಯರು ಇದ್ದಾರೋ ಅಲ್ಲೇ ಹೋಗಿ ಇವರುಗಳು ರೇಡ್ ಮಾಡುತ್ತಾರೆ. ಹೀಗಾಗಿ ಹೆಂಗಸರಿಗೂ ಸಹ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸೇಫ್ಟಿ ಇಲ್ಲ. ಇದು ಬಹಳ ಅನ್ಯಾಯ. ಆದುದರಿಂದ ಈ ಒಂದು ಅಮೆಂಡ್‌ಮೆಂಟನ್ನು ಒಪ್ಪಲಿಕ್ಕೆ ಸಾಧ್ಯವಿಲ್ಲ. ಒಪ್ಪಿದರೆ ಇದು ಆಫ್ರಿಕಾದ ಜಂಗಲ್ ಲಾ ಗಿಂತ ಕಡೆ ಆಗುತ್ತೆ. ಜನರಿಗೆ ರಕ್ಷಣೆ ಇಲ್ಲದಂತಾಗುತ್ತದೆ. ಕೆಲವು ಎಕ್ಸೈಜು ಕಂಟ್ರಾಕ್ಟರ್ ಅಡಲ್ಟ್ರೇಷನ್ ಮಾಡಿಸುತ್ತಿದ್ದಾರೆ. ಈ ಅಡಲ್ಟ್ರೇಷನ್ ಮಾಡಿರುವುದು ಪ್ರೂವ್ ಆಗಬೇಕಾದರೆ ಸರಿಯಾದ ಕೆಮಿಕಲ್ ಎಕ್ಸಾಮಿನರ್‌ನಿಂದ ಪರೀಕ್ಷೆ ಮಾಡಿಸಬೇಕು. There were chemical examiners to whom the articles were to be sent. But you have deleted that provision and made the Excise Inspector an expert. He may take one or two months training which is very insufficient. ಒಬ್ಬ ಕೆಮಿಕಲ್ ಎಕ್ಸಾಮಿನರ್ ಆಗಬೇಕಾದರೆ ಬಿ. ಎಸ್. ಸಿ. ಅಥವಾ ಎಂ. ಎಸ್. ಸಿ. ಪಾಸು ಮಾಡಬೇಕು. ಇಲ್ಲಿ ಆ ಪ್ರಾವಿಷನ್ಸ್ ಬಿಟ್ಟು ಬಿಟ್ಟು ನಿಮ್ಮಲ್ಲಿರುವ ಎಕ್ಸೈಜ್ ಇನ್‌ಸ್ಪೆಕ್ಟರೇ ಎಕ್ಸ್‌ಪರ್ಟ್ ಎಂದು ಮಾಡಿದ್ದೀರಿ. ಇವರಿಗೆ ತರಪೇತಿ ಕೊಡುವವರು ನೀವೇ, ಸಾಕ್ಷಿ ಒದಗಿಸುವವರೇ ನೀವೇ. ನೆರೆ ರಾಷ್ಟ್ರಗಳಲ್ಲಿ ಹೀಗೆ ಮಾಡುತ್ತಿದ್ದಾರೆಯೇ? No bar is there for the Executive authority under this provision and he can send anybody to Jail. ಹೀಗೆ ಎಲ್ಲವನ್ನೂ ನಿಮ್ಮ ಕೈಯ್ಯಲ್ಲಿ ಇಟ್ಟುಕೊಂಡಿದ್ದೀರಿ. ಯಾವರೀತಿಯಾಗಿ ವಿರಾಟರಾಜನು ಕೀಚಕರಿಗೆ ಉಪಕೀಚಕರಿಗೆ ಹೆದರುತ್ತಿದ್ದನೋ ಅದೇರೀತಿ ಈ ಅಧಿಕಾರಿಗಳಿಗೆ ಜನಗಳು ಹೆದರಬೇಕಾಗಿದೆ. ಕೀಚಕರು ಹೇಳಿದ ಹಾಗೆ ವಿರಾಟರಾಜನು

ಕುಣಿಯುತ್ತಾ ಇದ್ದನು. ಹಾಗೆಯೇ ಅಧಿಕಾರಿಗಳು ಕೀಚಕರಂತೆ ವರ್ತಿಸುತ್ತಿದ್ದಾರೆ. ನಾವು ಎಕ್ಸೈಜ್ ಅಧಿಕಾರಿಗಳ ಹಾಗೂ ಆ ಸಿಬ್ಬಂದಿ ವರ್ಗದವರ ದಬ್ಬಾಳಿಕೆಯ ವಿರುದ್ಧವಾಗಿ ನಮ್ಮ ಕ್ಷೇತ್ರದಲ್ಲಿ ಅವರನ್ನು ಸದೆ ಬಡಿಯುವುದಕ್ಕೆ ಭೀಮಸೇನೆಯನ್ನು ಕಟ್ಟುತ್ತೇವೆ. ಆದುದರಿಂದ ಈ ಆಕ್ಟನ್ನು ಪಾಸು ಮಾಡಬೇಕಾದರೆ ಬಹಳ ಜಾಗರೂಕತೆಯಿಂದ ಪಾಸು ಮಾಡಬೇಕು.

ಇನ್ನು ಸರ್ಕಾರಕ್ಕೆ - ನಷ್ಟವಾಗುತ್ತಿರುವ ಪ್ರಾವಿಷನ್ ಮಾಡಿದ್ದಾರೆ. ನೀವೆಲ್ಲಾ ಸೋಷಲಿಸ್ಟ್ ಎಂದು ಹೇಳುತ್ತಿದ್ದೀರಿ. ಆದರೆ ಇಡೀ ಜಿಲ್ಲೆಗೆ ಒಬ್ಬನಿಗೆ ಲೀಸ್ ಕೊಟ್ಟರೆ. ಆ ಕಂಟ್ರಾಕ್ಟ್ ತೆಗೆದುಕೊಳ್ಳುವಂಥಾವನು ಇನ್ನೊಬ್ಬನಿಗೆ ಸಬ್‌ಲೀಸ್ ಕೊಡತಕ್ಕಂಥ ಅವಕಾಶ ಮಾಡಿದ್ದೀರಿ. ಇದರಿಂದ ಸರ್ಕಾರಕ್ಕೆ ಅಪಾರ ಹಾನಿಯಾಗುತ್ತದೆ. ಇದೆಲ್ಲಾ ನನ್ನ ಕೈಯಲ್ಲಿ ಇದೆಯೆಂದು ಮಾಡಿದ್ದೀರಿ. ಯಾರಾದರೂ ಬಿಡ್ ಮಾಡುವುದಕ್ಕೆ ಬಂದರೆ ಅವರಿಗೆ ಬಿಡ್ ಮಾಡದಂತೆ ಮಾಡಿ ಆ ಕಂಟ್ರಾಕ್ಟನ್ನು ತಮಗೆ ಬೇಕಾದವರಿಗೆ ಕೊಡುವ ಹಾಗೆ ಮಾಡುತ್ತೀರಿ. ಇದರಿಂದ ಕಟ್ಟಕಡೆಯಲ್ಲಿ ಸರ್ಕಾರಕ್ಕೆ ನಷ್ಟವಾಗುತ್ತದೆ. ಬಡವರ ಯೋಚನೆ ಏನು ಎಂದು ತಮ್ಮ ಗಮನದಲ್ಲಿದೆಯೇ ! ಇದುವರೆಗೆ ಅಂತ ಅನ್ಯಾಯ ಏನೂ ಆಗಿಲ್ಲ, ಆದರೆ ಈಗ ನಿಮ್ಮ ಬಿಲ್ ಪ್ರಕಾರ ಅನ್ಯಾಯವಾಗುತ್ತದೆ. ಇಂತಹ ಶಾಸನ ಮಾಡಿದ್ದೀರಿ. ಈ ತರಹ ಎಕ್ಸೈಜ್ ಆಕ್ಟ್ ಬ್ರಿಟಿಷರ ಕಾಲದಲ್ಲೂ ಇರಲಿಲ್ಲ. ತಮ್ಮ ಕಾಲದಲ್ಲೇ ಈ ರೀತಿ ಆಕ್ಟ್ಸ್ ಹೊಸದಾಗಿ ಬಂದಿದೆ. Unless one month's notice is given, no eviction will be made ಅಂತ ಮಾಡಿದ್ದೀರಿ. ಒಂದು ತಿಂಗಳು ನೋಟೀಸ್ ಕೊಡಬೇಕು ಎಂದರೆ ಅಷ್ಟರಲ್ಲೇ ಅಧಿಕಾರಿಗಳು ಹೋಗಿ ಅವನ ಮನೆ ಸಾಮಾನುಗಳನ್ನು ದೋಚಿಕೊಂಡು ಹೋಗಬಹುದು. ಈ ಉಪಕೀಚಕರ ಹಾವಳಿಯಿಂದ ಮನೆಮಠಗಳನ್ನು ಕಳೆದುಕೊಂಡು ಅವರ ಪ್ರಾಣಕ್ಕೆ ಸಂಚಕಾರ ಆಗುವ ಸನ್ನಿವೇಶ ಇರುತ್ತೆ. ಅವರು ವ್ಯಾಜ್ಯ ಮಾಡಬಹುದಂತೆ. ಇದು ಎಲ್ಲಾದರೂ ಉಂಟೇ ! ಜಪಾನ್‌ಗೆ ಹೋಗಿ ಮಂತ್ರಿವರ್ಯರಿಗೆ ಅನುಭವ ಬಂದಿದೆ. ಒಬ್ಬ ಎಕ್ಸೈಜ್ ಆಫಿಷಿಯಲ್ ಒಬ್ಬ ಅಪರಾಧಿಯನ್ನು ಹಿಡಿದ, 'ಅವನನ್ನು 12 ಗಂಟೆಗೆ ಬಿಡುತ್ತೇವೆ ಎಂದು ಹೇಳಿದರು. ಎಕ್ಸೈಜ್ ಇನ್‌ಸ್ಪೆಕ್ಟರು ಬಿಡಲಿಲ್ಲ. ಅವನು ಅಲ್ಲಿ 24 ಗಂಟೆ ಉಪವಾಸ ಸತ್ಯಾಗ್ರಹ ಮಾಡಿದನು. ಅಲ್ಲಿಗೆ ಎಕ್ಸೈಜ್ ಆಫೀಸರ್ಸ್ ಬಂದಾಗ ಒಬ್ಬ ಎಂ. ಎಲ್. ಎ. ಸಹ ಹೋಗಿದ್ದರು. ಅವರು, ಎಕ್ಸೈಜ್ ಇನ್‌ಸ್ಪೆಕ್ಟರಿಗೆ ಕಾನೂನು ಗೊತ್ತಿಲ್ಲ, ಇಲ್ಲದೇ ಹೋದರೆ ಮೊದಲೇ ಬಿಡಬಹುದಾಗಿತ್ತು ಎಂದು ಎಂ. ಎಲ್. ಎ. ಗೆ ಹೇಳಿದರು. ಒಬ್ಬ ಎಕ್ಸೈಜ್ ಇನ್‌ಸ್ಪೆಕ್ಟರು ಈ ರೀತಿ ಅರೆಸ್ಟ್ ಮಾಡಿದವರನ್ನು ಬಿಡಬೇಕಾದರೆ 200-250 ರೂಪಾಯಿ ಕೊಡಬೇಕು. ನನ್ನ ಕಡೆ ಈ ತರಹ ಅರ್ಜಿಗಳು ಬಂದಿವೆ. ಅದನ್ನು ಎಕ್ಸೈಜ್ ಕಮಿಷನರಿಗೂ ಕಳುಹಿಸಿದ್ದೇನೆ. ಶ್ರೀಮತಿ ಫೆರ್ನಾಂಡಿಸ್ ಅವರ ಏರಿಯಾದಲ್ಲೂ ಕೂಡ ಒಂದು ಕಡೆ ಕೀಚಕರು, ಉಪಕೀಚಕರು ಲೂಟಿ ಮಾಡಿದಾಗ ಆ ಊರಿನವರು ಅವರಿಗೆ ಎದುರಾಗಿ ನಿಂತು ಹೋರಾಡಿ ಎರಡು ಪಾರ್ಟಿಗೂ ಪೆಟ್ಟಾಗಿದೆ. ನಿಮ್ಮ ಕಾನೂನಿಂದ ಈ ರೀತಿ ಆಗಿದೆ. ಈ ತಿದ್ದುಪಡಿಯಿಂದ ಹೆಂಗಸರ ಮಾನ, ಆಸ್ತಿ ರಕ್ಷಣೆ ಕಾಪಾಡುವುದಕ್ಕೆ ಸಾಧ್ಯವಿಲ್ಲ. ಮನೆಯಲ್ಲಿ ಶಾಂತಿ ಕಾಪಾಡುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ಈ ಬಿಲ್ಲನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸಬೇಕು ಇಲ್ಲದೇ ಇದ್ದ ಪಕ್ಷದಲ್ಲಿ ಇನ್ನು 6 ತಿಂಗಳೊಳಗೆ ಎಲ್ಲಾ ಕೊಚ್ಚಿಕೊಂಡು ಹೋಗುತ್ತದೆ ಎಂದು ಹೇಳುತ್ತೇನೆ.

† ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ (ಚಿಕ್ಕನಾಯಕನಹಳ್ಳಿ).—ಮಾನ್ಯ ಅಧ್ಯಕ್ಷರೇ ಈ ಸರ್ಕಾರ ಈಚೆಗೆ ಪ್ರತಿಯೊಂದು ವಿಚಾರದಲ್ಲಿಯೂ ಆರ್ಡಿನೆನ್ಸ್ ತರುವುದನ್ನು ನೋಡಿದರೆ ರಾಜ್ಯಾಂಗದಲ್ಲಿ ಆರ್ಡಿನೆನ್ಸ್‌ಗೆ ಇರುವ ಬೆಲೆ ಏನೂ ಇಲ್ಲದ ಹಾಗೆ ಆಗುತ್ತದೆ ಎನ್ನುವ ಭಯ ನನಗೆ ಬರುತ್ತದೆ. ಮುಖ್ಯವಾಗಿ ವಿವಾದಾತ್ಮಕವಾದ ಈ ಕಾಯದೆಯಲ್ಲಿ ಕೆಲವು ಮುಖ್ಯವಾದ ಅಂಶಗಳನ್ನು ಮಾತ್ರ ನಾನು ಈಗ ಹೇಳಬೇಕಾಗಿದೆ.

ಇದರಲ್ಲಿ ಕ್ಲಾಜ್ 11 (ಎ) ಹೊಸದಾಗಿ ಸೇರಿಸಿದ್ದಾರೆ. ತೆಂಗಿನಕಾಯಿ ಬೆಲೆ ಈಗ ಜಾಸ್ತಿಯಾಗಿರುವುದಕ್ಕೆ ಮುಖ್ಯವಾದ ಕಾರಣ ತೆಂಗಿನ ಮರದಲ್ಲಿ ಹೆಂಡವನ್ನು ಇಳಿಸುವುದೇ ಆಗಿದೆ. ಬಡವನಾದವನು ಒಟ್ಟಿಗೆ ಸಾವಿರಾರು ರೂಪಾಯಿ ಪಡೆಯುವ ಸಂದರ್ಭ ಒದಗಿದಾಗ ತನ್ನ ಮರದಲ್ಲಿ ಹೆಂಡ ಇಳಿಸುವುದಕ್ಕೆ ಅವಕಾಶ ಕೊಡುತ್ತಾನೆ. ತೆಂಗಿನ ಮರದಲ್ಲಿ ಹೆಂಡ ಇಳಿಸುವುದರಿಂದ ತೆಂಗಿನಕಾಯಿ ಬೆಲೆ ಜಾಸ್ತಿಯಾಗಿ ಜನಸಾಮಾನ್ಯರಿಗೆ ಬಹಳ ತೊಂದರೆಯಾಗುತ್ತಿದೆ. ಚಿಕ್ಕನಾಯಕನಹಳ್ಳಿಯಿಂದ ಪ್ರತಿ ದಿವಸ ಒಂದು ಲಾರಿ ಲೋಡ್ ತೆಂಗಿನ ಹೆಂಡ ಬರುತ್ತಿರಬೇಕಾದರೆ, ತೆಂಗಿನಕಾಯಿ ಉತ್ಪತ್ತಿ ಎಷ್ಟು ಕಡಮೆಯಾಗಿದೆ, ಜನಸಾಮಾನ್ಯರ ಜೀವನ ಪರಿಸ್ಥಿತಿಯಲ್ಲಿ ಎಷ್ಟು ಮಾರ್ಪಾಟಾಗಬೇಕಾಯಿತು ಎನ್ನುವುದನ್ನು ಮಾನ್ಯ ಮಂತ್ರಿಗಳು ಮನಸ್ಸಿಗೆ ತಗೆದುಕೊಂಡು ಇನ್ನು ಮುಂದೆ ತೆಂಗಿನ ಮರದಲ್ಲಿ ಹೆಂಡವನ್ನು ಇಳಿಸುವುದಕ್ಕೆ ಅವಕಾಶ ಕೊಡಬಾರದೆಂದು ಒತ್ತಾಯಪೂರ್ವಕವಾಗಿ ಹೇಳುತ್ತೇನೆ.

(ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ)

[MR. SPEAKER in the Chair]

ಕಳ್ಳಭಟ್ಟಿ ಸಾರಾಯಿ ತಯಾರಿಕೆಯನ್ನು ತಡೆಗಟ್ಟಲು ಹೊಸದಾಗಿ ಇಂಟೆಲಿಜೆನ್ಸ್ ಬ್ಯೂರೋ ಮಾಡುವುದರಿಂದ ಅದನ್ನು ಹತೋಟಿಗೆ ತರಬಹುದು ಎನ್ನುವ ಭಾವನೆಯನ್ನು ಇಟ್ಟುಕೊಂಡಿದ್ದಾರೆ. ಅದು ಶುದ್ಧ ತಪ್ಪು. ಕಳ್ಳಭಟ್ಟಿ ಸಾರಾಯಿ ತಯಾರಿಕೆ ಇಲಾಖೆಯ ಅಧಿಕಾರಿಗಳ ಕೃಪಾಪೋಷಿತವಾಗಿ ಬೆಳೆಯುತ್ತಿದೆ ಎಂದರೆ ತಪ್ಪಾಗಲಾರದು. ಮಂಡ್ಯ ಡಿಸ್ಟಿಲರಿಯಿಂದ ಕೊಡತಕ್ಕ ರೆಕ್ಟಿಫೈಡ್ ಸ್ಪಿರಿಟ್, ಆಲ್ಕೋಹಾಲ್, ಇವು ನ್ಯಾಯವಾದ ರೀತಿಯಲ್ಲಿ ಯಾರು ನಿಜವಾಗಿ ಕೈಗಾರಿಕೆಯನ್ನು ನಡೆಸುತ್ತಿದ್ದಾರೆ ಅವರಿಗೆ ದೊರೆಯದೆ, ಕಳ್ಳಭಟ್ಟಿ ತಯಾರು ಮಾಡುವವರಿಗೇ ದೊರೆಯುತ್ತಿದೆ. ಯಾರು ನ್ಯಾಯವಾಗಿ ಕೈಗಾರಿಕೆಯನ್ನು ನಡೆಸುತ್ತಾರೆಯೋ ಅಂಥವರಿಗೆ ಮಾತ್ರ ಕೊಟ್ಟರೆ ಕಳ್ಳಭಟ್ಟಿ ತಯಾರಿಕೆ ಅರ್ಧದಷ್ಟು ಕಡಮೆಯಾಗುತ್ತದೆ. ಮಂಡ್ಯ ಡಿಸ್ಟಿಲರಿಯಿಂದ ಕೊಡುತ್ತಿರುವ ರೆಕ್ಟಿಫೈಡ್ ಸ್ಪಿರಿಟ್ ಮುಂತಾದವುಗಳಲ್ಲಿ ಸೇಕಡ 90 ಭಾಗ ಕಳ್ಳಭಟ್ಟಿ ತಯಾರಿಕೆಗೆ ಹೋಗುತ್ತಿದೆ. ಅದನ್ನು ಹತೋಟಿ ಮಾಡದೆ ಹೊಸದಾಗಿ ಸಿಬ್ಬಂದಿಯನ್ನು ಇಡುವುದರಿಂದ ಜನತೆಗೆ ಏನೂ ಉಪಯೋಗವಾಗುವುದಿಲ್ಲ. ಮಂಡ್ಯ ಡಿಸ್ಟಿಲರಿಯಿಂದ ಕೊಡುವ ರೆಕ್ಟಿಫೈಡ್ ಸ್ಪಿರಿಟ್ ಮುಂತಾದುವನ್ನು ಬ್ರಾಂದಿಯಾಗಿ ಕನ್‌ವರ್ಟ್ ಮಾಡಿದರೆ ಎಷ್ಟು ಲಕ್ಷ ರೂಪಾಯಿ ಎಕ್ಸೈಸ್ ಬರುತ್ತದೆ, ಅದನ್ನು ಅರೆಕ ಆಗಿ ಕನ್‌ವರ್ಟ್ ಮಾಡಿದರೆ ಎಷ್ಟು ಸಾವಿರ ರೂಪಾಯಿ ಬರುತ್ತದೆ ? ಇದನ್ನೆಲ್ಲ ಪರಿಶೀಲನೆ ಮಾಡಿ ಮಂಡ್ಯ ಡಿಸ್ಟಿಲರಿಯಿಂದ ಕೊಡತಕ್ಕ ಸ್ಪಿರಿಟ್ ಮುಂತಾದುವನ್ನು ಹತೋಟಿಗೆ ತರಬೇಕು. ಮೂರು ಸಾವಿರ ಲೀಟರ್ ಸ್ಪಿರಿಟ್ ದೊರೆಯುತ್ತಿದ್ದ ಒಂದು ಬ್ರೂಯರಿಗೆ ಇಂದು 20 ಸಾವಿರ ಲೀಟರ್ ಕೊಡುತ್ತಿದ್ದಾರೆ. ಇದನ್ನು ನೋಡಿದರೆ ಸರ್ಕಾರದ್ದು ಬಹಳ ಅಪರಾಧ. ಮಂಡ್ಯ ಡಿಸ್ಟಿಲರಿಯನ್ನು ಹಾಳುಮಾಡಿ ಬೇರೆ ಡಿಸ್ಟಿಲರಿಯನ್ನು ಬೆಳೆಸುತ್ತಿದ್ದಾರೆ ಎಂದರೆ ತಪ್ಪಾಗಲಾರದು. ಬ್ರಾಂದಿ ತಯಾರು ಮಾಡಿದರೆ ನೂರು ರೂಪಾಯಿ ಎಕ್ಸೈಸ್ ಡ್ಯೂಟಿ ಬರುವಾಗ, ರೆಕ್ಟಿಫೈಡ್ ಸ್ಪಿರಿಟ್‌ನಿಂದ 20–26 ಪೈಸೆ ಮಾತ್ರ ಬರುತ್ತದೆ. ಎಲ್ಲ ಡಿಸ್ಟಿಲರಿಗಳೂ ಕೂಡ ಬಹಳಮಟ್ಟಿಗೆ ಇದನ್ನು ದುರುಪಯೋಗ ಮಾಡುತ್ತಿವೆ ಮತ್ತು ಸರ್ಕಾರಕ್ಕೆ ಬರುವ ಲಕ್ಷಾಂತರ ರೂಪಾಯಿ ನಷ್ಟವಾಗುತ್ತಿದೆ. ಇದನ್ನು ಕೂಡಲೇ ತಡೆಗಟ್ಟಬೇಕು. ಹಳ್ಳಿಗಳಲ್ಲಿ ಮಡಕೆ ಇಟ್ಟುಕೊಂಡು, ಚಕ್ಕೆ ಇಟ್ಟುಕೊಂಡು ಕಳ್ಳಭಟ್ಟಿ ಮಾಡುವವರನ್ನು ಹಿಡಿದರೆ ಏನೂ ಪ್ರಯೋಜನವಾಗುವುದಿಲ್ಲ. ಸಾವಿರಾರು ಲೀಟರ್ ತಯಾರು ಮಾಡುವುದನ್ನು ತಡೆಗಟ್ಟದೆ ಹೋದರೆ ಸಣ್ಣ ಸಣ್ಣ ಜನರನ್ನು ಹಿಡಿಯುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಆದ್ದರಿಂದ ಹೆಚ್ಚು ಸಿಬ್ಬಂದಿಬೇಕು ಎನ್ನುವುದೂ, ಅದಕ್ಕಾಗಿ ಲಕ್ಷಾಂತರ ರೂಪಾಯಿ ಖರ್ಚು ಮಾಡುವುದೂ ಬಹಳ ಅನ್ಯಾಯ.

ಇವರಲ್ಲಿ ಇನ್ನೊಂದು ಸೆಕ್ಷನ್ ಸೇರಿಸಿದ್ದಾರೆ. ಇದು ಬಹಳ ದೊಡ್ಡ ಅಪರಾಧ. ಏನೆಂದರೆ ಯಾರಾದರೂ ಸಾಕ್ಷಿ ಬೇರೆ ಸ್ಥಳದವರು ಇದ್ದರೂ ಸಾಕು ಎಂದು. ಇವರಿಂದ ಏನಾಗುತ್ತದೆ ಎಂದರೆ ಎಕ್ಸೈಸ್ ಕಂಟ್ರಾಕ್ಟರು ಎಕ್ಸೈಸ್ ಇನ್‌ಸ್ಪೆಕ್ಟರ್ ಜೊತೆಯಲ್ಲಿ ಯಾರಾದರೂ ನಾಲ್ಕು ಜನರನ್ನು ಜೊತೆಯಲ್ಲಿ ಕರೆದುಕೊಂಡು ಹೋಗಿ ಯಾರ ಮೇಲೆ ಬೇಕಾದರೂ ಕಳ್ಳಭಟ್ಟಿ ತಯಾರಿಕೆ ಕೇಸನ್ನು ಹಾಕಿಸಬಹುದು. ಎಕ್ಸೈಸ್ ಕಂಟ್ರಾಕ್ಟರಿಗೆ ಯಾರ ಮೇಲಾದರೂ ದ್ವೇಷವಿದ್ದರೆ ಅದನ್ನು ಸಾಧಿಸಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಮಡಕೆ, ಚಕ್ಕೆಗಳನ್ನು ಇವರೇ ಬೇಕಾದರೂ ತೆಗೆದುಕೊಂಡು ಹೋಗಬಹುದು. ಎಕ್ಸೈಜ್ ಇಲಾಖೆಯ ಸಿಬ್ಬಂದಿಯನ್ನು ಸರಿ ಮಾಡಿಕೊಂಡು ಕಂಟ್ರಾಕ್ಟರು ಏನು ಬೇಕಾದರೂ ಮಾಡುವುದಕ್ಕೆ ಇದರಿಂದ ಅವಕಾಶವಾಗುತ್ತದೆ.

ಇಲಾಖೆಯಲ್ಲಿ ಕೆಲಸ ಮಾಡುವ ಅಧಿಕಾರಿಗಳು ತಮ್ಮ ಮಕ್ಕಳ ಹೆಸರಿನಲ್ಲಿ ಅಥವಾ ತಮ್ಮ ಸಂಬಂಧೀಕರ ಹೆಸರಿನಲ್ಲಿ ರೆಕ್ಟಿಫೈಡ್ ಸ್ಪಿರಿಟ್ ಮತ್ತು ಆಲ್ಕೊಹಾಲ್‌ಗೆ ಲೈಸೆನ್ಸ್ ತೆಗೆದುಕೊಂಡು ವ್ಯವಹಾರ ನಡೆಸುವುದಕ್ಕೆ ಪ್ರಾರಂಭ ಮಾಡಿದ್ದಾರೆ. ತುಮಕೂರು ಜಿಲ್ಲೆಯ ಒಬ್ಬ ಎಕ್ಸೈಸ್ ಇನ್‌ಸ್ಪೆಕ್ಟರು ಚಿಕ್ಕಮಗಳೂರು ಜಿಲ್ಲೆಗೆ ವರ್ಗವಾಗಿದ್ದಾನೆ. ಆತನ ಮಗನ ಹೆಸರಿನಲ್ಲಿ ಮೂರು ಸಾವಿರ ಲೀಟರ್ ಸ್ಪಿರಿಟ್ಟಿಗೆ ಲೈಸೆನ್ಸ್ ಇದೆ. ಇದನ್ನು ಅವರು ಕಾಳಸಂತೆಯಲ್ಲಿ ಮಾರಾಟ ಮಾಡುವುದಲ್ಲದೇ ತಾವೇ ಕಳ್ಳಭಟ್ಟಿ ತಯಾರಿಕೆಗೆ ಪ್ರೋತ್ಸಾಹ ನೀಡುತ್ತಿದ್ದಾರೆ. ಕೆಲವರು ತಾವೇ ತಮಗೆ ಬರುವ ಕೋಟಾ ಜೊತೆಗೆ ಬೇರೆಯವರಿಂದ ಪಡೆದು ಕಳ್ಳಭಟ್ಟಿ ತಯಾರಿಕೆಯಲ್ಲಿ ತೊಡಗಿದ್ದಾರೆ. ಹೀಗಿರುವಾಗ ಹೇಗೆ ಕಳ್ಳಭಟ್ಟಿ ತಯಾರಿಕೆಯನ್ನು ಹತೋಟಿಗೆ ಇಟ್ಟುಕೊಳ್ಳುತ್ತಾರೆನ್ನುವುದು ಅರ್ಥವಾಗುವುದಿಲ್ಲ. ಈ ಹೊತ್ತು ಇಲಾಖೆಯಲ್ಲಿ ಏನು ಲೋಪದೋಷಗಳಿವೆ,

ಅಧಿಕಾರಿಗಳು ಏನು ಅನ್ಯಾಯ ಮಾಡುತ್ತಿದ್ದಾರೆ ಅದನ್ನು ತಪ್ಪಿಸದೆ ಇದ್ದರೆ, ಹೆಚ್ಚಿನ ಸಿಬ್ಬಂದಿಯನ್ನು ನೇಮಿಸಿಕೊಳ್ಳುವುದರಿಂದ ಏನೂ ಪ್ರಯೋಜನವಾಗುವುದಿಲ್ಲ.

ಎಕ್ಸೈಜ್ ಇಲಾಖೆಯ ಜನ ತಮ್ಮ ಕೆಲಸವನ್ನು ಸರಿಯಾಗಿ ನಿರ್ವಹಿಸುತ್ತಿಲ್ಲ ಎಂದು ಹೇಳಬೇಕಾಗಿದೆ. ಬಸ್ಸಿನಲ್ಲಿ ಕೆಲವರು ಮಾತನಾಡಿಕೊಳ್ಳುತ್ತಿದ್ದುದನ್ನು ನಾನು ಹೇಳಿದೆ. 'ಏನು ಸ್ವಾಮಿ, ನಮ್ಮ ರಾಮಕೃಷ್ಣ ಹೆಗಡೆಯವರು ಯಾವತ್ತಿಗೂ ಸ್ವರ್ಗಲೋಕದಲ್ಲಿ ಇರುವಂಥ ಜನ. ಅವರಿಗೆ ಸ್ವರ್ಗಲೋಕದ ಪಾನೀಯ ಬೇಕು, ಅವರಿಗೆ ಗಂಧರ್ವಲೋಕದ ವ್ಯಾಮೋಹ ಬೇಕು, ಭೂಲೋಕದ ಆಡಳಿತ ಬೇಕು' ಎಂಬುದಾಗಿ ಮಾತನಾಡಿಕೊಳ್ಳುತ್ತಿದ್ದರು. ಇಲಾಖೆಯಲ್ಲಿ ಅನ್ಯಾಯವಾಗುತ್ತಿದೆ ಎಂದು ಬಹಳ ಜನ ಹೇಳುತ್ತಿದ್ದಾರೆ. ಈ ಇಲಾಖೆಯ ದೊಡ್ಡ ಅಧಿಕಾರಿಯಿಂದ ಹಿಡಿದು ಒಬ್ಬ ಸಾಮಾನ್ಯ ಅಧಿಕಾರಿಯವರೆಗೆ ಲಂಚ ತಿನ್ನುತ್ತಾರೆಂದರೆ ಖಂಡಿತ ತಪ್ಪಾಗಲಾರದು. ಇಲಾಖೆಯಲ್ಲಿ ಹೊಸದಾಗಿ ಸಿಬ್ಬಂದಿಯನ್ನು ನೇಮಕ ಮಾಡುವುದರಿಂದ ಲಂಚದ ಹಾವಳಿ ಇನ್ನೂ ಜಾಸ್ತಿಯಾಗುವುದಕ್ಕೆ ಕಾರಣವಾಗುತ್ತದೆ. ಇಲಾಖೆಯ ಎಕ್ಸೈಸ್ ಆಫೀಸರ್, ಎಕ್ಸೈಸ್ ಇನ್‌ಸ್ಪೆಕ್ಟರ್, ಇವರಿಗೆ ಮಾಮೂಲು ಕೊಡುವುದು ಅನೂಚಾನವಾಗಿ ನಡೆದುಕೊಂಡು ಬರುತ್ತಿದೆ. ಇಂಟೆಲಿಜೆನ್ಸ್ ಬ್ಯೂರೋ ಹೊಸದಾಗಿ ಮಾಡಿ, ಅಧಿಕಾರಿಗಳನ್ನು ಕ್ರಿಯೇಟ್ ಮಾಡಿದರೆ ಹಳೇ ಲಂಚದ ಜೊತೆಗೆ ಹೊಸ ಲಂಚ ಪ್ರಾರಂಭವಾಗುತ್ತದೆ. ಪ್ರತಿಯೊಬ್ಬ ಅಧಿಕಾರಿಯೂ ಯಾವ ಯಾವ ರೀತಿಯಲ್ಲಿ ಕೋಟಾ ಪಡೆದಿದ್ದಾನೆ, ಯಾವ ಯಾವ ರೀತಿಯಲ್ಲಿ ಅದನ್ನು ಉಪಯೋಗ ಮಾಡುತ್ತಿದ್ದಾನೆ ಎಂದು ನೋಡಬೇಕು. ನಾಲ್ಕಾರು ಅಧಿಕಾರಿಗಳು ಅವರ ಮಕ್ಕಳ ಹೆಸರಿನಲ್ಲಿ, ಅವರ ಸಂಬಂಧೀಕರ ಹೆಸರಿನಲ್ಲಿ ಕೋಟಾ ಪಡೆದು ಅದನ್ನು ದುರ್ವಿನಿಯೋಗ ಮಾಡುತ್ತಿದ್ದಾರೆ. ಬೇಲಿಯೇ ಎದ್ದು ಹೊಲ ಮೇಯುವಾಗ, ಬೇರೆ ಸಿಬ್ಬಂದಿಯನ್ನು ನೇಮಕಮಾಡುತ್ತೇವೆಂದು ಹೇಳುವುದರಲ್ಲಿ ಅರ್ಥವಿಲ್ಲ. ಮಂಡ್ಯ ಡಿಸ್ಟಿಲರಿಯಿಂದ ಯಾರು ಯಾರು ಕೋಟಾ ಪಡೆಯುತ್ತಿದ್ದಾರೆ ಅವರು ಅದನ್ನು ಸದುಪಯೋಗ ಮಾಡುತ್ತಿದ್ದಾರೆಯೇ ಇಲ್ಲವೇ ಎನ್ನುವುದನ್ನು ವಿಮರ್ಶೆ ಮಾಡಿ ಹತೋಟಿಯಲ್ಲಿಟ್ಟುಕೊಂಡರೆ ಇಲ್ಲಿಸಿಟ್ ಡಿಸ್ಟಿಲರಿಯಲ್ಲಿ ಮುಕ್ಕಾಲು ಭಾಗದಷ್ಟು ನಿಲ್ಲುತ್ತದೆ. ಹೊಸ ಸಿಬ್ಬಂದಿಯ ಬಗ್ಗೆ ಹಣ ಖರ್ಚು ಮಾಡುವ ಆವಶ್ಯಕತೆಯೇ ಇರುವುದಿಲ್ಲ. ಆದ್ದರಿಂದ ಈ ಖರ್ಚನ್ನು ಮಾಡಬೇಡಿ, ಈ ಮಸೂದೆಯನ್ನು ವಾಪಸು ತೆಗೆದುಕೊಳ್ಳಿ ಎಂದು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ.

Sri AZEEZ SAIT.—Sir, while opposing the Mysore Excise (Second Amendment) Bill, 1970 I wish to submit that in spite of the fact that prohibition has been scrapped, illicit distillation has increased, and the number of officials in the Department is increasing. The officials who are concerned with the implementation of this Act are not host; most of them are corrupt. If the proposed amendments are passed, they will give more power in the hands of these corrupt officials who will misuse them. In the Act there is a clause which provides where the toddy and arrack shops are to be located. It clearly says that they should not be located near educational institutions, markets, residential quarters and religious places, but unfortunately almost all the shops are located near these places. We have been agitating against it for the last two and a half years. This has resulted in unhappy incidents in Mysore City. On the first day of scrapping of prohibition there were tensions and untoward incidents occurred in Mysore City. Since then we have been representing to the Hon. Minister on this matter. He has given us an assurance but the officials in Mysore City have brushed aside the letters written by the Hon. Minister even the Deputy Commissioner has become helpless sometimes. Government should impose heavy fines on illicit manufactures and see that the illicit distilleries do not produce injurious liquors. This has become a cottage industry. Can the Government tell me how many cases they have detected upto this time ? They are taking undue advantage of the Act and harassing the respectable people.

(SRI AZIZ SAIT)

I have brought to the notice of the Deputy Commissioner and the Excise Officers in Mysore City a number of cases, but still nothing has been done. If you give more powers under this Act to these officers, it will be letting loose a second Police Raj. Now, only the police are wielding the lathi ; with the passing of this Bill the Excise officials or the Excise Department will also be doing the same thing. The people have become panicky ; they have neither peace nor honour. They have lost everything at the hands of these two Departments. Therefore I call upon the Hon. Minister to withdraw this Bill and bring it in a different form so as to suit democratic principles of this country.

An earlier speaker said that during the British regime all laws were respected by the people and people were also respected. Today after Independence, the people of this country are looked down upon by one class of people *viz.* the officials. They think they are supreme, and do not give respect to the people. At this rate I do not know what will happen to this country. Already we are hearing of naxalite movement and people taking to communism. If these things are resorted to by the officials, people have to take to radicalism and they will not have any respect for democratic values. The persons who draft laws sitting in glass houses, do not know what the people feel about a particular law. The people have the greatest disrespect to these draftsmen who are only anxious to augment the revenues to the Government. At this rate I do not know whether we are going, as I said. The toddy and arrack shops are licensed in places where they should not be. For instance, in Mysore City there is a shop located in a place where V. I. Ps come and there is sale of loose liquor also. When we agitated over this matter, they have closed the main entrance and started selling from the hind entrance along the conservancy lane. No respectable man or woman in Mysore City can move after 7 O' clock in that road. Let the Hon. Minister come and see all these things. It is his duty to know what the people feel about it. If he wants an agitation for its removal, people are ready for it. The Government have already so many headaches in the shape of Local Candidates, students, doctors, border problem and we do not want to add to them. With these words, I request the Hon. Minister at least to refer this Bill to Joint Select Committee if not withdrawn, so that it can emerge out of it in a better and acceptable form.

† ಶ್ರೀ ಬೋಳ ರಘುರಾಮಶೆಟ್ಟಿ (ಕಾರ್ಕಳ).—ಮಾನ್ಯ ಅಧ್ಯಕ್ಷರೇ, ಮಾನ್ಯ ಎಕ್ಸೈಜು ಮಂತ್ರಿಗಳು ಈ ಬಿಲ್ಲನ್ನು ಸಭೆಮುಂದೆ ಮಂಡಿಸುವಾಗ ಇದರಲ್ಲಿ ಹೆಚ್ಚಿನ ಬದಲಾವಣೆಯೇನಿಲ್ಲ, ಇರುವ ಕೆಲವು ಅಧಿಕಾರಿಗಳ ಹೆಸರನ್ನು ಬದಲಾಯಿಸಲು ಇದನ್ನು ತಂದಿದೆ ಎಂದು ಹೇಳಿದರು. ಆದರೆ ಈ ಬಿಲ್ಲನ್ನು ಪರಾಮರ್ಶಿಸಿದರೆ ಅವರು ಹೇಳಿದುದು ಸರಿಯಿಲ್ಲ ಎಂದು ಕಂಡುಬರುವುದು. ಇದರಲ್ಲಿ ಕೆಲವು ಪದಗಳ ಅರ್ಥವನ್ನು ಕೂಡ ತಿದ್ದುಪಡಿಮಾಡಿದ್ದಾರೆ, ಕೆಲವು ಹೊಸ ಅಧಿಕಾರಿಗಳ ನೇಮಕಕ್ಕೆ ಅವಕಾಶ ಮಾಡಿದ್ದಾರೆ, ಅಧಿಕಾರಿಗಳಿಗೆ ಹೊಸ ಅಧಿಕಾರ ಕೂಡ ಕೊಟ್ಟಿದ್ದಾರೆ, ಕೋರ್ಟುಗಳಿಗೆ ತೆಗೆದುಕೊಂಡುಹೋಗುವ ಕೇಸುಗಳ ಪ್ರೊಸೀಜರ್ ಕೂಡ ಬದಲಾಯಿಸಿದ್ದಾರೆ. ಮತ್ತು ಕೋರ್ಟುಗಳಲ್ಲಿದ್ದ ಕ್ರಮ ಬದಲಾಯಿಸಿದ್ದಾರೆ. ಹೀಗೆ ಆಮೂಲಾಗ್ರ ಬದಲಾವಣೆ ಮಾಡಿದ್ದಾರೆ. ಆದುದರಿಂದ ಈ ಸಭೆಯಲ್ಲಿ ಇದುವರೆಗೆ ಮಾತನಾಡಿದವರು ಕೊಟ್ಟ ಸಲಹೆ ಪ್ರಕಾರ ಇದನ್ನು

ಸೆಲೆಕ್ಟ್ ಕಮಿಟಿಗೆ ಕಳಿಸಿ ಇಂದು ಎಕ್ಸೈಜ್ ಆಕ್ಟಿನಿಂದ ಜನರಮೇಲೇನು ಪರಿಣಾಮವಾಗಿದೆ, ದುಷ್ಪರಿಣಾಮವೇನಾಗಿದೆ, ಈ ವಿಷಯದಲ್ಲಿ ಜನಸಾಮಾನ್ಯರೇನು ಹೇಳುವರು, ಜನರ ಪ್ರತಿನಿಧಿಗಳೇನು ಹೇಳುತ್ತಿದ್ದಾರೆ, ಈ ಎಲ್ಲಾ ವಿಷಯಗಳನ್ನೂ ತಿಳಿದು ಈ ಬಿಲ್ಲನ್ನು ತಿದ್ದುಪಡಿ ಮಾಡುವುದು ಅಗತ್ಯವುಂಟು ಎಂದು ಭಾವಿಸುತ್ತೇನೆ. ಈ ಬಿಲ್ಲನ್ನು ಹಿಂದಿನಿಂದಲೂ ಕೂಡ ಜಾರಿಗೆ ಕೊಡುವ ವಿಚಾರ ಕೂಡ ಉಂಟು. ತಾ. 7-8-1970ರಿಂದ ಈ ಬಿಲ್ಲು ಜಾರಿಗೆ ಬಂದಿದೆಯೆಂದು ತಿಳಿಯಬೇಕೆಂದು ಹೇಳಿದ್ದಾರೆ. ಅಂದರೆ ಇದರ ಪ್ರತಿಫಲ ಸರಕಾರ ಅನುಭವಿಸದೆ ಜನರ ಮೇಲೆ ಹಾಕುವುದಕ್ಕೆ ಪ್ರಯತ್ನವಿದೆ. ಈ ಬಿಲ್ಲಿನಲ್ಲಿ ಲೀಟರ್ ಧಾರಣೆ ವಿಚಾರ ಹೇಳಿದ್ದಾರೆ. ಈ ವಿಷಯದಲ್ಲಿ ಹೈಕೋರ್ಟಿಗೆ ಹೋಗಿ ರಿಟ್ ಹಾಕಿ ಆಗಿರುವ ಅನ್ಯಾಯವನ್ನು ಬದಲಾಯಿಸಬೇಕೆಂದು ಪ್ರಯತ್ನ ಮಾಡುತ್ತಿದ್ದಾಗ ಲೀಟರ್ ಧಾರಣೆ ವಿಷಯದಲ್ಲಿ ಸರಕಾರದ ಅಭಿಪ್ರಾಯವೇನಿತ್ತೋ ಅದೇರೀತಿ ಇನ್ನೂಮುಂದೂ ಕೂಡ ಆಗುವಹಾಗೆ ಒಂದು ಸೂಚನೆಯಿದೆ. ಇದು ನಿಜವಾಗಿಯೂ ಈ ಸರಕಾರದ ಧೋರಣೆಯನ್ನು ಮನೋಧರ್ಮವನ್ನು ತೋರಿಸುವುದು.

4-00 P.M.

ಯಾವುದಾದರೂ ಕಾನೂನು ಆದರೆ ಅದು ಜನರಿಗೆ ಸರಿಯಾಗಿ ಮನದಟ್ಟಾಗಬೇಕು. ಜನರಿಗೆ ತಿಳಿಯದ ರೀತಿಯಲ್ಲಿ ಕಾನೂನನ್ನು ತೊಡಕು ಮಾಡುತ್ತಾ ಹೋದರೆ ಅದರಿಂದ ನ್ಯಾಯಾಧೀಶರಿಗೂ ಕೂಡ ಕಷ್ಟವಾಗುತ್ತದೆ, ವಕೀಲರಿಗೂ ಸಹ ತಿಳಿದುಕೊಳ್ಳಲಿಕ್ಕೆ ಕಷ್ಟವಾಗುತ್ತದೆ ಮತ್ತು ಎಲ್ಲರಿಗೂ ಕಷ್ಟವಾಗುತ್ತದೆ. ಆಕ್ಟ್ ಪಾಸ್ ಆದ ಸ್ವಲ್ಪ ಸಮಯದಲ್ಲೇ ತಿದ್ದುಪಡಿಗಳು ಆಗಿ ಆಕ್ಟಿನ ಮೊದಲಿನ ಸ್ವರೂಪವೇ ಬದಲಾದರೆ ಅದರಿಂದ ಪ್ರಯೋಜನವೇನು? ಮೊದಲಿನ ಆಕ್ಟಿನ ಅವಶ್ಯಕತೆಯೇ ಇಲ್ಲದಂತಹ ಒಂದು ಬಿಲ್ಲನ್ನು ಇವತ್ತು ಈ ಸಭೆಯ ಮುಂದೆ ತಂದಿದ್ದೀರಿ. ಈ ಕಾರಣದಿಂದ ಕೂಡ ನಾನು ಈ ಬಿಲ್ಲನ್ನು ವಿರೋಧಿಸಬೇಕಾಗಿದೆ.

ಇನ್ನು ಈ ರಾಜ್ಯದಲ್ಲಿ ಅಕ್ರಮ ಶರಾಬು ತಯಾರು ಮಾಡುವವರ ಸಂಖ್ಯೆ ಬಹಳ ಉಂಟು. ಪಾನಪ್ರತಿಬಂಧಕ ಇದ್ದ ಸಮಯಕ್ಕಿಂತ ಇವತ್ತು ಬಹಳಮಟ್ಟಿಗೆ ಜಾಸ್ತಿಯಾಗಿದೆ ಎಂದರೂ ತಪ್ಪಾಗಲಿಕ್ಕಿಲ್ಲ. ಅಕ್ರಮ ರೀತಿಯಲ್ಲಿ ಶರಾಬು ತಯಾರು ಮಾಡುವವರ ಮೇಲೆ ಬೇಕಾದಂತಹ ಕಾರ್ಯಕ್ರಮ ತೆಗೆದುಕೊಳ್ಳಲಿಕ್ಕೆ ಕಾನೂನು ರೀತಿಯಲ್ಲಿ ಸರ್ಕಾರಕ್ಕೆ ಅವಕಾಶ ಇದೆ. ಮತ್ತು ಆಕ್ಟನ್ ಆದನಂತರ ಆ ಕಾರ್ಯಕ್ರಮ ಮಾಡಲಿಕ್ಕೆ ಕಂಟ್ರಾಕ್ಟರ ಸಹಾಯ ತೆಗೆದುಕೊಳ್ಳುತ್ತಾರೆ. ಸರ್ಕಾರ ತನ್ನ ಸಿಬ್ಬಂದಿ ಮೂಲಕ ಅಕ್ರಮ ಸಾಗಾಟ, ಅಕ್ರಮ ತಯಾರು ಮಾಡುವುದನ್ನು ನಿಲ್ಲಿಸಬೇಕು. ಅದುಬಿಟ್ಟು ಯಾರು ಕಂಟ್ರಾಕ್ಟರು ಆಗಿದ್ದಾರೋ ಅವರ ಮತ್ತು ಅವರ ಜನರ ಸಹಾಯದಿಂದ ನಿಲ್ಲಿಸುವಂತಹದು ಇವತ್ತು ಸರ್ಕಾರದ ಮತ್ತು ಡಿಪಾರ್ಟ್‌ಮೆಂಟಿನ ದೌರ್ಬಲ್ಯ ತೋರಿಸುತ್ತದೆ. ಇದರಿಂದ ಒಂದು ವಿಶೇಷ ಪರಿಸ್ಥಿತಿ ಏನಾಗಿದೆ ಎಂದರೆ ಇವತ್ತು ಜನಸಾಮಾನ್ಯರು ಈ ಅಕ್ರಮ ಸಾಗಾಟದ ವಿರುದ್ಧವಾಗಿ ಕಾರ್ಯಾಚರಣೆ ಮಾಡುವವರಿಗೆ ಅಕ್ರಮ ಸಾಗಾಟ ಮಾಡುವವರು ಯಾರು? ಸರ್ಕಾರದವರೇ, ಅಥವಾ ಕಂಟ್ರಾಕ್ಟದಾರರೇ ಅಥವಾ ಅವರ ಜನರೇ ಅಂತ ಅನ್ನುವುದು ಗೊತ್ತಾಗುವುದಿಲ್ಲ. ಈ ಕಾರ್ಯದಿಂದ ಇವತ್ತು ಎಲ್ಲಾ ಕಡೆಯಲ್ಲೂ ಬಹಳ ದೊಡ್ಡ ಅಶಾಂತಿಯುಂಟಾಗಿದೆ. ಅದರಲ್ಲೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಯಾವ ಯಾವ ಸ್ಥಳದಲ್ಲಿ ಯಾವ ಯಾವ ಅಕ್ರಮವಾಗುತ್ತಿದೆ ಎಂಬುದನ್ನು ಐತಾಳ್‌ರವರು ಬಹಳ ವಿಷದವಾಗಿ ಹೇಳಿದ್ದಾರೆ. ಅದರಲ್ಲಿ ಬಹಳ ಸತ್ಯಾಂಶ ಕೂಡ ಉಂಟು. ಇದನ್ನು ಮಾನ್ಯಮಂತ್ರಿಗಳು ಮತ್ತು ಡಿಪಾರ್ಟ್‌ಮೆಂಟಿನವರು ಸಾಮಾನ್ಯ ವಿಷಯ ಎಂದು ತಿಳಿಯದೆ ಸರಿಯಾಗಿ ವಿಚಾರ ಮಾಡಿ ತಪ್ಪಿತಸ್ಥರಿಗೆ ಶಿಕ್ಷೆ ಕೊಟ್ಟದ್ದೇ ಆದರೆ ಡಿಪಾರ್ಟ್‌ಮೆಂಟಿನವರ ಮತ್ತು ಸರ್ಕಾರದವರ ಮೇಲೆ ಗೌರವ ಬರುವಂತಹ ಪರಿಸ್ಥಿತಿ ಕೂಡ ಇರುತ್ತದೆ. ದಕ್ಷಿಣ ಕನ್ನಡ ಜಿಲ್ಲೆ ಕಂಟ್ರಾಕ್ಟರ ರಾಜ್ಯ, ಸರ್ಕಾರದ ರಾಜ್ಯವಲ್ಲ ಎಂಬ ಭಾವನೆ ಜನಸಾಮಾನ್ಯರಲ್ಲಿ ಬರುವಂತೆ ಆಗಿದೆ. ಈ ಬಿಲ್ಲಿನ ಪ್ರಕಾರ ಎಕ್ಸೈಜ್ ಅಧಿಕಾರಿಗಳು ಜನರ ಮೇಲೆ ಒಂದು ಎಕ್ಸೈಜ್ ಕೇಸು ಹಾಕಿದರೆ ಅದಕ್ಕೆ ಬೇಕಾದ ಪುರಾವೆ ಕೂಡ ಆ ಎಕ್ಸೈಜ್ ಅಧಿಕಾರಿಗಳ ಮುಖಾಂತರವೇ ಬರುವಂತಹದು ಆಗಿದೆ. ಇದು ಸರಿಯಲ್ಲ. ಇದಕ್ಕೆ ಕೆಮಿಕಲ್ ಎಕ್ಸಾಮಿನರ ಒಂದು ಡಿಪಾರ್ಟ್‌ಮೆಂಟೇ ಇದೆ. ಇಂಡಿಯನ್ ಪೀನಲ್ ಕೋಡ್ ಪ್ರಕಾರ ಕೇಸ್ ಆಗಲಿ ಅಥವಾ ಬೇರೆ ಯಾವ ತಕರಾರೇ ಆಗಲಿ ಅದಕ್ಕೆ ಸಂಬಂಧಪಟ್ಟ ಶೋಧನೆಯಾಗಬೇಕಾದರೆ ಅದನ್ನು ಕೆಮಿಕಲ್ ಎಕ್ಸಾಮಿನರ್ ಡಿಪಾರ್ಟ್‌ಮೆಂಟಿಗೆ ಕಳುಹಿಸುತ್ತಾರೆ. ಈಗ ಬಿಲ್‌ನಲ್ಲಿ ಸೂಚನೆ ಮಾಡಿರುವ ಪ್ರಕಾರ ಎಕ್ಸೈಜ್ ಸಬ್ ಇನ್‌ಸ್ಪೆಕ್ಟರಿಗೆ ಕೇವಲ ಎರಡು ಮೂರು ತಿಂಗಳು ತರಬೇತು ಕೊಟ್ಟು ಅನಲೈಸ್ ಮಾಡುವ ಹಕ್ಕನ್ನು ಅವರಿಗೆ ಕೊಟ್ಟಿದ್ದೀರಿ. ಅವರು ಅನಲೈಸ್ ಮಾಡಿ, ಅವರಿಂದ ಬಂದ ರಿಪೋರ್ಟನ್ನು ಎವಿಡೆನ್ಸ್ ಆಗಿ ತೆಗೆದುಕೊಳ್ಳಬೇಕೆಂದು ಕಾಣಿಸಿದ್ದೀರಿ, ಇದು ಬಹಳ

(ಶ್ರೀ ಬೋಳ ರಘುರಾಮ ಶೆಟ್ಟಿ)

ಅನ್ಯಾಯ ಮತ್ತು ಅಕ್ರಮ ಎಂದು ಎಲ್ಲರಿಗೂ ಕಾಣುತ್ತದೆ. ಏಕೆಂದರೆ ಕೋರ್ಟಿಗೆ ಹೋದಾಗ ಎಕ್ಸೈಸ್ ಅಧಿಕಾರಿ ಯಾರ ಮೇಲೆ ಕೇಸು ಮಾಡಿದ್ದಾನೋ ಅವನಿಗೆ ಸಂಬಂಧಪಟ್ಟಂತೆ ಆತನೇ ಬರೆದುಕೊಂಡು ಬಂದಂಥ ಸರ್ಟಿಫಿಕೇಟಿನ ಆಧಾರದ ಮೇಲೆ ಕೋರ್ಟು ಶಿಕ್ಷೆ ಕೊಡಬೇಕೆಂದು ಹೇಳುವುದು ನಿಜವಾಗಿಯೂ ಕ್ರಿಮಿನಲ್ ಜ್ಯೂರಿಸ್ ಪ್ರೂಡೆನ್ಸ್‌ಗೆ ಬಹಳ ವ್ಯತಿರಿಕ್ತವಾದ ವಿಷಯ, ಇದರಿಂದ ಬಹಳ ದುಷ್ಪರಿಣಾಮವಾಗುತ್ತದೆ. ಇದಕ್ಕೆ ಯಾರೂ ಹೆಚ್ಚು ಗಮನ ಕೊಟ್ಟಿಲ್ಲ. ಈ ಒಂದು ಪ್ರೊವಿಜನ್‌ನನ್ನು ಈ ಬಿಲ್‌ನಿಂದ ತೆಗೆದು ಹಾಕಬೇಕಾದ್ದು ಬಹಳ ಅಗತ್ಯವುಂಟು ಎಂದು ಆಗ್ರಹಪೂರ್ವಕವಾಗಿ ತಮ್ಮ ಮೂಲಕ ಒತ್ತಾಯ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಡೆಪ್ಯೂಟಿ ಕಮೀಷನರು ಮತ್ತು ಆ ಕೆಳಗಿನ ಅಧಿಕಾರಿಗಳಿಗೆ ಲೈಸೆನ್ಸ್ ಮತ್ತು ಪರ್ಮಿಟ್ ವಿಷಯದಲ್ಲಿ ಪೆನಲ್ಟಿ ಕೊಡುವಂತಹ ಒಂದು ಅಧಿಕಾರವನ್ನು ಕೊಟ್ಟಿದ್ದೀರಿ. ನಿಜವಾಗಿಯೂ ರಾಜಕೀಯ ದೃಷ್ಟಿಯಿಂದ ಕೂಡ ಈ ಪ್ರೊವಿಜನ್‌ನಿಂದ ಬಹಳ ದುರುಪಯೋಗವಾಗುವ ಸಂಭವ ಉಂಟು. ಏಕೆಂದರೆ ಅನೇಕ ಕೇಸುಗಳಲ್ಲಿ ದೊಡ್ಡ ದೊಡ್ಡವರು ಇದರಲ್ಲಿ ಆಸಕ್ತಿ ವಹಿಸುವವರು ಇರುತ್ತಾರೆ ಅವರು ತಮ್ಮ ಹಣದ ಆಶೆಯಿಂದ ಅಥವಾ ಇಡೀ ತಾಲ್ಲೂಕು ಅಥವಾ ಜಿಲ್ಲೆಯ ಕಂಟ್ರಾಕ್ಟ್ ತಾವೇ ಮಾಡಿಕೊಳ್ಳಬೇಕೆಂಬ ಆಶೆಯಿಂದ ಅಧಿಕಾರಿಗಳನ್ನು ದುರುಪಯೋಗ ಮಾಡಿಕೊಳ್ಳುವಂತಹ ಒಂದು ಸಂದರ್ಭ ಉಂಟು. ಮತ್ತು ರಾಜಕೀಯ ವ್ಯಕ್ತಿಗಳೂ ಕೂಡ ತಮ್ಮ ಪ್ರಭಾವವನ್ನು ಬೀರತಕ್ಕ ಒಂದು ಆಸ್ಪದ ಉಂಟು. ಆದ್ದರಿಂದ ಈ ಒಂದು ಅಧಿಕಾರವನ್ನು ಕೊಡುವಂತಹದು ಸರಿಯಲ್ಲ. ನಾವು ಯಾವಾಗ ನ್ಯಾಯಾಂಗವನ್ನೂ ರಾಜ್ಯಾಂಗವನ್ನೂ ಬೇರ್ಪಡಿಸಿದೆವೋ ಆಗ ಇಂತಹ ಒಂದು ಅಧಿಕಾರವನ್ನು ಕೊಡುವುದು ಸರಿಯಾಗುವುದಿಲ್ಲ ಮತ್ತು ಡೈರೆಕ್ಟೀವ್ ಪ್ರಿನ್ಸಿಪಲ್ಸ್‌ಗೂ ಸಹ ಇದು ವ್ಯತಿರಿಕ್ತವಾಗುತ್ತದೆ. ಆದ್ದರಿಂದ ಈ ಪ್ರೊವಿಜನ್‌ನನ್ನು ಕೈ ಬಿಡಬೇಕೆಂದು ಒತ್ತಾಯ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಹತ್ತಿರದ ಸಾಕ್ಷಿ ಇಲ್ಲದೇ ಇದ್ದಾಗ ಬೇರೆಯವರ ಸಾಕ್ಷಿ ಇದ್ದರೆ ಆ ಇನ್‌ಫರ್ಮೇಷನ್ನೂ ತೆಗೆದುಕೊಳ್ಳಬೇಕೆಂದು ಆದೇಶ ಬರುವಂತಹ ರೀತಿಯಲ್ಲಿ ಒಂದು ಪ್ರೊವಿಜನ್ ಹಾಕಿದ್ದೀರಿ. ಈ ಒಂದು ಪ್ರೊವಿಜನ್ ಇರುವಂತಹದು ಅನಾವಶ್ಯಕ ಎಂದು ಭಾವಿಸುತ್ತೇನೆ. ಇದು ಜ್ಯುಡೀಷಿಯರಿಯ ಇಂಡಿಫೆಂಡೆನ್ಸ್‌ನಲ್ಲಿ ಇನ್‌ಟರ್‌ಫಿಯರ್ ಮಾಡಿದ ಹಾಗಾಗುತ್ತದೆ, ಆದ್ದರಿಂದ ಇದನ್ನು ಕೈ ಬಿಡುವುದು ಬಹಳ ಅಗತ್ಯ ಎಂದು ಮಾನ್ಯ ಮಂತ್ರಿಗಳಲ್ಲಿ ಸ್ಪೀಕರ್‌ರವರ ಮುಖಾಂತರ ಕೇಳಿಕೊಳ್ಳುತ್ತೇನೆ.

ಇನ್ನು ತನಿಖೆ ವಿಷಯದಲ್ಲಿ ಸಮ್ಮರಿ ಟ್ರಯಲ್ ವಿಷಯ ಹೇಳಿದ್ದೀರಿ. "ಕೋರ್ಟಿಗೆ ಕೇಸು ತರುವವರು ಎಕ್ಸೈಜ್ ಆಫೀಸರು, ಅವರಿಗೆ ಬೇಕಾದ ರೀತಿಯಲ್ಲಿ ರೆಕಾರ್ಡ್ ಬಿಲ್ಡ್ ಅಫ್ ಮಾಡುತ್ತಾರೆ, ಇದು ನ್ಯಾಯದೃಷ್ಟಿಯಿಂದಾಗಲಿ, ಘಟನಾತ್ಮಕವಾಗಿಯಾಗಲಿ, ಜ್ಯುಡಿಷಿಯಲ್ ಇಂಡಿಪೆಂಡೆನ್ಸ್ ದೃಷ್ಟಿಯಿಂದಾಗಲಿ ನ್ಯಾಯವಾದುದಲ್ಲ ಎಂದು ನನ್ನ ಭಾವನೆ.

ಇನ್ನೊಂದು ಬಹಳ ವಿಶಿಷ್ಟವಾದ ಪರಿಸ್ಥಿತಿ ಎಂದರೆ ಏನೇ ತಕ್ಸೀರು ಮಾಡಲಿ, ಯಾರು ತಕ್ಸೀರಿಗೆ ಒಳಗಾಗಿದ್ದಾರೋ ಅಂತಹವರ ಮೇಲೆ ಕ್ರಿಮಿನಲ್ ಅಥವಾ ಸಿವಿಲ್ ಮೊಕದ್ದಮೆ ಮಾಡಬೇಕಾದರೆ ಸರ್ಕಾರದ ಒಪ್ಪಿಗೆ ಕೊಡಬೇಕೆಂದು ಇದೆ. ಆದರೆ ಉದ್ದೇಶಪೂರ್ವಕವಾಗಿ ಅನ್ಯಾಯವಾಗಿ ಅಥವಾ ಅಕ್ರಮವಾಗಿ ಆಸ್ತಿ ಅಪಹಾರ ಮಾಡಿದ್ದರೆ ಅಥವಾ ಪ್ರಾಣ ಅಪಹಾರ/ಮಾಡಿದ್ದರೆ ಸಿವಿಲ್ ಕೋರ್ಟಿಗೆ ಹೋಗುವುದಕ್ಕೆ ಸರಕಾರದ ಒಪ್ಪಿಗೆ ಬೇಕಾದರೆ, ಸರಕಾರದ ಒಪ್ಪಿಗೆ ಆರು ತಿಂಗಳು ಅಥವಾ ಒಂದು ವರ್ಷದ ನಂತರ ಬರಬಹುದು. ಆರು ತಿಂಗಳ ನಂತರ ಒಪ್ಪಿಗೆ ಬಂದರೆ ಕ್ರಿಮಿನಲ್ ಕೇಸ್ ಎಲ್ಲಿ ನಿಲ್ಲುತ್ತದೆ? ಕ್ರಿಮಿನಲ್ ಕೇಸ್ 24 ಅಥವಾ 48 ಗಂಟೆ ಒಳಗೆ ದಾಖಲು ಮಾಡಬೇಕು. ಸಾಮಾನ್ಯ ಮನುಷ್ಯನಿಗೆ ಅದಕ್ಕೆ ಬೇಕಾದಂತಹ ಎವಿಡೆನ್ಸ್ ತಯಾರು ಮಾಡುವುದಕ್ಕೆ ಅವರ ಹತ್ತಿರ ಸಿಬ್ಬಂದಿ ಇರುವುದಿಲ್ಲ. ಸರಕಾರದ ಹತ್ತಿರ ಕ್ರಿಮಿನಲ್ ಕಂಪ್ಲೆಂಟ್ ಮಾಡಬೇಕಾದರೆ ಸರಕಾರದ ಒಪ್ಪಿಗೆ ಬರಬೇಕಾದರೆ ಸಾಮಾನ್ಯ ವಿಷಯದಲ್ಲಿ ಸರಕಾರದ ಒಪ್ಪಿಗೆ ಸಿಕ್ಕದೆ ಇರುವುದು ಎಲ್ಲರ ಅನುಭವವಾಗಿದೆ. ಸಿವಿಲ್‌ಕೋರ್ಟಿಗೆ ಹೋಗುವಾಗ ಸರಕಾರದ ಒಪ್ಪಿಗೆ ಬೇಕಾದರೆ ಅದಕ್ಕೆ ಬಹಳ ಆಶ್ಚರ್ಯಕರವಾದ ಒಂದು ಪ್ರಾವಿಜನ್‌ನನ್ನು ಹಾಕಿದ್ದೀರಿ. ಅಂತಹ ಪ್ರಾವಿಜನ್‌ನನ್ನು ಈ ಬಿಲ್ಲಿನಲ್ಲಿ ಇಡುವುದು ಸರಕಾರಕ್ಕೆ ಗೌರವವನ್ನು ತರತಕ್ಕದ್ದಲ್ಲ ಎನ್ನುವುದು ನನ್ನ ಭಾವನೆ. ಮತ್ತು ಇವೊತ್ತು ಶ್ರೀಮಾನ್ ಅರಸರು ಕಾನೂನನ್ನು ಓದಿ ಹೇಳಿದರು. ಅರಕ್ ಷಾಪ್ ಮತ್ತು ಟಾಡಿ ಷಾಪುಗಳನ್ನು ಪ್ರಾರಂಭ ಮಾಡುವಾಗ ದೇವಸ್ಥಾನದ ಹತ್ತಿರ, ಪಾಠಶಾಲೆಗಳ ಹತ್ತಿರ, ಬಹುತೇಕ ಮಕ್ಕಳು, ವಿದ್ಯಾರ್ಥಿಗಳು, ಮಹಿಳೆಯರು ಹೋಗುವ ಸ್ಥಳಗಳಲ್ಲಿ ಇರಬಾರದು ಎಂದು ಒಂದು ಪ್ರಾವಿಜನ್

ಇದೆ, ಅದರ ಪ್ರಕಾರ ನಮ್ಮ ರಾಜ್ಯದಲ್ಲಿ ಎಲ್ಲಿ ದೇವಸ್ಥಾನ ಉಂಟು, ಶಾಲೆ ಉಂಟು, ಬಹುತೇಕ ಜನರು ಸ್ತ್ರೀಯರು ಉಂಟು ಅಂತಹ ಕಡೇ ಈ ಷಾಪುಗಳನ್ನು ಇಡಬಾರದೆಂದು ನನ್ನ ಅಭಿಪ್ರಾಯ. ಮಾನ್ಯ ಮಂತ್ರಿಗಳು ಏನೋ ಒಂದು ಆಶ್ವಾಸನೆಯನ್ನು ಕೊಡುತ್ತಾರೆ, ಆದರೆ ಅದು ಕಾರ್ಯಗತವಾಗುವುದಿಲ್ಲ. ಅದಕ್ಕೋಸ್ಕರ ಬೇಕಾದರೆ ಒಂದು ಕಮಿಟಿಯನ್ನು ಮಾಡಿ ಎಲ್ಲೆಲ್ಲಿ ಅಕ್ರಮ ಸ್ಥಳಗಳಲ್ಲಿ ಈ ಷಾಪುಗಳು ಇವೆ, ಇದಕ್ಕೆ ಕಾರಣರು ಯಾರು ಎಂದು ತಿಳಿದುಕೊಂಡು ಆ ರೀತಿ ದುರ್‌ವ್ಯವಹಾರ ಆಗದ ರೀತಿಯಲ್ಲಿ ಮಾಡಬೇಕೆಂದು ಹೇಳುತ್ತೇನೆ. ಸರಕಾರದ ಅರಕ್ ಮತ್ತು ಟಾಡಿ ಡ್ರಿಂಕ್ಸ್ ಅಲ್ಲದೆ ಕಳ್ಳಭಟ್ಟಿ ಸಾರಾಯಿ, ಕಳ್ಳು, ಇವನ್ನು ಬೇಕಾದಷ್ಟು ಮಾರಾಟ ಮಾಡುತ್ತಾರೆ. ಇಂತಹ ಕಳಮಟ್ಟದ ಪಾನೀಯಗಳನ್ನು ಮಾರಾಟಮಾಡಿ ಬೇಕಾದಷ್ಟು ಲಾಭ ಸಂಪಾದನೆ ಮಾಡಿದ್ದಾರೆ. ಅಂತಹ ಸಾರಾಯಿಯನ್ನು ಬಾಟಲ್‌ನಲ್ಲಿ ಹಾಕಿ ಅನ್ಯಾಯವಾಗಿ ಕ್ರಮಬದ್ಧವಾದ ಡ್ರಿಂಕ್ಸ್ ಎಂದು ಹೇಳಿ ಮಾರಾಟ ಮಾಡುತ್ತಿದ್ದಾರೆ. ಎಲ್ಲಾ ವಿಷಯ ತಿಳಿದಿದ್ದರೂ ಕೂಡ ಈ ಬಿಲ್ಲಿಗೆ ನಾವು ಮನ್ನಣೆ ಕೊಡುವ ಅಗತ್ಯವಾದರೂ ಏನು ಇದೆ ಎಂದು ಕೇಳುತ್ತೇನೆ. ಆದುದರಿಂದ ಒಂದು ಸೆಲೆಕ್ಟ್ ಕಮಿಟಿ ಮಾಡಿ, ಅದರ ಮುಖಾಂತರ ಬಿಲ್ಲನ್ನು ವಿಮರ್ಶೆ ಮಾಡಿ ಯಾವುದು ಅಗತ್ಯ ಉಂಟು ಎಂದು ತಿಳಿದುಕೊಂಡು ಅದರಂತೆ ಮಾಡುತ್ತೀರಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಬಿ. ಪಿ. ಗಂಗಾಧರ್ (ತುಮಕೂರು).— ಸ್ವಾಮಿ, ಈ ಬಿಲ್ಲನ್ನು ವಿರೋಧ ಮಾಡುತ್ತಾ ಕೇವಲ ಎರಡು ಮೂರು ವಿಷಯಗಳನ್ನು ಮಾತ್ರ ಹೇಳಲು ಇಚ್ಛೆಪಡುತ್ತೇನೆ. ಸಾಕ್ಷಿಗಳನ್ನು ಸಾರಾಯಿ ಮಾಡತಕ್ಕಂಥ ಜಾಗದಲ್ಲಿ ಇರುವವರನ್ನು ಕರೆದುಕೊಂಡ ಬರಬೇಕೆಂದು ಹೇಳುತ್ತೇನೆ. ಕ್ರಿಮಿನಲ್ ಪ್ರೊಸೀಜರ್ ಕೋಡ್ ಪ್ರಕಾರ ಸಾಕ್ಷಿಗಳು "respected persons of the locality" ಆಗಿರಬೇಕು. ಇಲ್ಲದಿದ್ದರೆ ತಮಗೆ ಬೇಕಾದಂತಹ ಜನರನ್ನು ಕರೆದ ಕೊಂಡು ಹೋಗಿ ರುಜು ಹಾಕಿಸಿ ಏನು ಬೇಕಾದರೂ ಮಾಡಲಿಕ್ಕೆ ಸಾಧ್ಯ ಇದೆ. ಹಿಂದೆ ಹೈಕೋರ್ಟಿನಲ್ಲಿ ತೀರ್ಮಾನವಾದಂತೆ they shall be respectable people of the locality. Imported people ಆಗಬಾರದು. ಆದರೆ ಈ ಬಿಲ್ಲಿನಲ್ಲಿ ಎಲ್ಲಿಂದ ಬೇಕಾದರೂ ಬರಬಹುದು ಎಂದು ಇದೆ. ಆದುದರಿಂದ ಟಾಡಿ ಮಾರುವವರು, ಲಿಕ್ಕರ್ ಮಾರುವವರು ಇವರೆಲ್ಲರೂ ಕಂಟ್ರಾಕ್ಟರ ಹಿಂದೆ ಓಡಾಡಿಕೊಂಡು ಇರುತ್ತಾರೆ. ಯಾಕೆಂದರೆ ಅವರಿಗೆ ಸಾಯಂಕಾಲ ಆದರೆ ಒಂದು ಬಾಟಲ್ ಪುಕಸಟ್ಟೆ ಸಿಕ್ಕುತ್ತದೆ ಎಂದು ಅವನ ಹಿಂದೆ ಬೇಕಾದಷ್ಟು ಜನ ಇರುತ್ತಾರೆ. ಆದುದರಿಂದ ಇಂತಹ ಒಂದು ಪ್ರಾವಿಷನ್ ಮಾಡುವುದು ಸಾಧುವಲ್ಲ ಅದರಿಂದ ಅನ್ಯಾಯವಾಗುತ್ತದೆ. ಯಾರನ್ನು ಬೇಕಾದರೂ ಹಿಡಿದುಕೊಳ್ಳಬೇಕೆಂದು ಮನಸ್ಸು ಮಾಡಿದರೆ, ಅವರಿಗೆ ತೊಂದರೆ ಮಾಡುವುದಕ್ಕೆ ಅವಕಾಶವಾಗುತ್ತದೆ. ಈ ತರಹದ ಪ್ರಾವಿಜನ್ ತಂದಿರುವುದು ಬಹಳ ದುರ್ದೈವ. ಆದುದರಿಂದ ಈ ಪ್ರಾವಿಜನ್ ತೆಗೆದು ಹಾಕುವುದು ಒಳ್ಳೆಯದು. ಈ ಪ್ರಾವಿಷನ್ನನ್ನು ತೆಗೆದು ಹಾಕುವುದರಿಂದ ಮರ್ಯಾದಸ್ಥರು ಮರ್ಯಾದೆಯಿಂದ ಬಾಳುವುದಕ್ಕೆ ಸಹಕಾರಿಯಾಗುತ್ತದೆ. ಇದನ್ನು ದಯವಿಟ್ಟು ಯೋಚನೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಸೆಕ್ಷನ್ 59ರ ಕೆಳಗೆ ಒಂದು ತಿದ್ದುಪಡಿ ತಂದಿದ್ದಾರೆ. ಇದು ನತದೃಷ್ಟ ತಿದ್ದುಪಡಿ ಎಂದು ತಿಳಿದುಕೊಂಡಿದ್ದೇನೆ. ಸೆಕ್ಷನ್ 5 (2)ರ ಪ್ರಕಾರ, ಒಬ್ಬ ಆಫೀಸರು, ಡಿಟೆಕ್ಷನ್, ಇನ್‌ವೆಸ್ಟಿಗೇಷನ್ ಮತ್ತು ಟ್ರಯಲ್ ಆಫ್ ಅಫೆನ್ಸಿಗೆ ಸಂಬಂಧಪಟ್ಟ ಅಧಿಕಾರಗಳನ್ನು ಚಲಾಯಿಸಬಹುದು. ಅಂದರೆ, ಆರೋಪ ಮಾಡುವವನೇ ಇನ್‌ವೆಸ್ಟಿಗೇಟ್ ಮಾಡುವುದಕ್ಕೆ ಮತ್ತು ಟ್ರಯಲ್ ಆಫ್ ಅಫೆನ್ಸ್ ಮಾಡುವುದಕ್ಕೂ ಮತ್ತು ತೀರ್ಪುಕೊಡುವುದಕ್ಕೂ ಈ ಸೆಕ್ಷನ್ ಪ್ರಕಾರ ಅವಕಾಶವಿದೆ. ಇದು ಹೀನವಾದ ಕಾನೂನು. ಇಂಥಹ ಕಾನೂನನ್ನು ತರುವುದಕ್ಕೆ ಇಂಥಹ ದುರ್ಬುದ್ಧಿ ದೇವರು ನಿಮಗೆ ಯಾಕೆ ಕೊಟ್ಟನೋ? ಕೇರಳದಲ್ಲಿ ಮಾಡಿದ್ದಾರೆ ಅಂತ ಇಲ್ಲಿಯೂ ಮಾಡಬೇಕೆಂದು ಹೊರಟಿದ್ದೀರಿ. ಬೇರೆ ಕಡೆ ಯಾವುದು ಒಳ್ಳೆಯದು ಮಾಡಿದ್ದಾರೋ ಅಂತಹುದನ್ನು ಇಲ್ಲಿ ತಂದರೆ ಇಡೀ ದೇಶದ ಜನಗಳಿಗೆ ಉಪಕಾರವಾಗುತ್ತದೆ. ಕೆಟ್ಟದ್ದು ಏನಾದರೂ ಇದ್ದರೆ ಅದನ್ನು ಅಲ್ಲಿಯೇ ಬಿಟ್ಟುಬಿಡಿ.

ಶ್ರೀ ರಾಮಕೃಷ್ಣ ಹೆಗಡೆ.— ಶಾಮಣ್ಣನವರು ಫೈನನ್ನು ಸಾವಿರ ರೂಪಾಯಿಗಳಿಗೆ ಏರಿಸಬೇಕು ಎಂದು ತಿದ್ದುಪಡಿ ಕಳುಹಿಸಿದ್ದಾರೆ.

ಶ್ರೀ ಬಿ. ಪಿ. ಗಂಗಾಧರ್.— ಒಂದು ಸಾವಿರ ಅಲ್ಲ ಎರಡು ಸಾವಿರ, ಮೂರು ಸಾವಿರ ಹಾಕಿ, ಬೇಡ ಎಂದು ಹೇಳುವುದಿಲ್ಲ, ಆದರೆ ಇನ್‌ವೆಸ್ಟಿಗೇಷನ್ ಮತ್ತು ಡಿಟೆಕ್ಷನ್ ಯಾವ ಅಧಿಕಾರಿ ಮಾಡುತ್ತಾನೋ ಯಾವನು ಸಕ್ಷೀರನ್ನು ಹಾಕುತ್ತಾನೋ ಅವನೇ ತೀರ್ಮಾನವನ್ನು ಕೊಡುವುದಾದರೆ, ಪೋಲೀಸಿನವರೇ ಜಡ್ಜ್‌ಮೆಂಟ್ ಕೊಡುವುದಾದರೆ ಯಾವ ದೇಶ ಉಳಿಯುತ್ತದೆ? ಯಾರನ್ನು

(ಶ್ರೀ ಬಿ. ಪಿ. ಗಂಗಾಧರ್)

ಬೇಕಾದರೂ ಸಲೀಸಾಗಿ ಜೈಲಿಗೆ ಕಳುಹಿಸಬಹುದು. ಇದರಿಂದ ಏನಾಗುತ್ತದೆ ಎಂದರೆ ಒಳ್ಳೆಯ ಜನರನ್ನು ಸಹ ಜೈಲಿಗೆ ಕಳುಹಿಸುವುದಕ್ಕೆ ಅವಕಾಶವಾಗುತ್ತದೆ. ಸಾಕ್ಷಿ ಎಲ್ಲಿಂದ ಬೇಕಾದರೂ ತರಬಹುದು ಎಂದು ಒಂದು ಕಡೆ ಹೇಳಿ ಇನ್ನೊಂದು ಕಡೆ ನೋಡಿದರೆ ಸಲೀಸಾಗಿ ಜೈಲಿಗೆ ಕಳುಹಿಸುವುದಕ್ಕೆ ಅವಕಾಶ ಮಾಡಿದ್ದೀರಿ. ಇದು ಬಹಳ ಧುರ್ದೈವ. ಆದುದರಿಂದ ಈ ಕಲಂಗಳನ್ನು ಬಿಟ್ಟರೆ ಒಳ್ಳೆಯದು ಮತ್ತು ಉಪಕಾರವಾಗುತ್ತದೆ ಎಂದು ತಿಳಿದುಕೊಂಡಿದ್ದೇನೆ. ಇಲ್ಲದಿದ್ದರೆ ಮಾರಣವಾದ ಕಾನೂನು ಆಗುತ್ತದೆ ; ದೇಶಕ್ಕೆ ಕೆಟ್ಟದ್ದು ಆಗುತ್ತದೆ, ಬಡವರಿಗೆ ಬಹಳ ಅನ್ಯಾಯವಾಗುತ್ತದೆ ಎಂದು ಹೇಳಲು ಇಚ್ಛೆಪಡುತ್ತೇನೆ. ಜೊತೆಗೆ ಇನ್ನೊಂದು ಮಾಡಿದ್ದಾರೆ. ಸಬ್ ಲೆಟ್ಟಿಂಗ್ ವಿಚಾರವಾಗಿ ಸೆಕ್ಷನ್ 7 (ಎ) ಕೆಳಗೆ ಒಂದು ಪ್ರಾವಿಷನ್ ತಂದಿದ್ದಾರೆ. ಹಣವಂತನಾಗಿರುವವನು ಎಷ್ಟು ಏರಿಯಾ ಬೇಕಾದರೂ ಒಟ್ಟಿಗೆ ಕಂಟ್ರಾಕ್ಟು ತೆಗೆದುಕೊಳ್ಳಬಹುದು. ಆದರೆ ಸಣ್ಣ ಪುಟ್ಟ ಕಂಟ್ರಾಕ್ಟುದಾರರಿಗೆ ಬಿಡ್ ಮಾಡುವುದಕ್ಕೆ ಅವಕಾಶವಾಗುವುದಿಲ್ಲ. ಸಬ್‌ಲೀಜ್ ಮಾಡಿದರೆ, ಆ ದೊಡ್ಡ ಕಂಟ್ರಾಕ್ಟ್‌ದಾರನು ಎರಡು, ಮೂರು ನಾಲ್ಕರಷ್ಟು ಹಣ ಸಂಪಾದನೆ ಮಾಡಬಹುದು. ಇದರಿಂದ ನಿಜವಾಗಿ ಕೆಲಸಮಾಡತಕ್ಕವನಿಗೆ, ತೊಂದರೆಯಾಗುತ್ತದೆ. ಒಂದೊಂದು ಸಾರಿ ತುಮಕೂರಿನ ಹತ್ತಿರ ಜನರು ಕುಡಿದು ಕುಡಿದು ದಾರಿಯಲ್ಲಿಯೇ ಬಿದ್ದಿರುತ್ತಾರೆ. ಅವರಿಗೆ ಸ್ವರ್ಗ ಬಹಳ ಹತ್ತಿರದಲ್ಲಿಯೇ ಇರುತ್ತದೆ. ಅವರಲ್ಲಿ ಕೆಲಸಕ್ಕೆ ಬಾರದೇ ಇರುವ ಕೆಟ್ಟಕೆಟ್ಟ ಮಾತುಗಳನ್ನು ಆಡುವುದೇ ಹೆಚ್ಚು. ದೊಡ್ಡ ಕಂಟ್ರಾಕ್ಟರ್‌ಗೆ ಬೇಕಾದಷ್ಟು ಸವಲತ್ತುಗಳು, ಸಾಲಗಳು ಸಿಗುತ್ತವೆ. ಅವನು ಸಲೀಸಾಗಿ ದುಡ್ಡು ಮಾಡುತ್ತಾನೆ. ಆದ್ದರಿಂದ ಸಬ್‌ಲೆಟಿಂಗ್ ಮಾಡುವುದನ್ನು ಜಾಗ್ರತೆಯಾಗಿ ದಯವಿಟ್ಟು ನಿಲ್ಲಿಸಿ. ಅದರ ಬದಲಾಗಿ ಸೇಂದಿ ಹರಾಜು ಮಾಡುವುದನ್ನು ಸಣ್ಣಸಣ್ಣ ಯೂನಿಟ್ಟುಗಳಾಗಿ ಮಾಡಿದರೆ ಅದನ್ನು ಯಾರು ತೆಗೆದುಕೊಂಡು ಹೋಗುತ್ತಾನೋ ಅಂತಹವನೇ ನಡೆಸಿಕೊಂಡು ಹೋಗಬಹುದು. ಇಲ್ಲದಿದ್ದರೆ ಸಣ್ಣ ಕಂಟ್ರಾಕ್ಟರ ಶ್ರಮದ ಪ್ರತಿಫಲ ದೊಡ್ಡ ಕಂಟ್ರಾಕ್ಟರಿಗೆ ದೊರೆಯುತ್ತದೆ. ಇಲ್ಲಿ ಸಬ್‌ಲೆಟಿಂಗ್ ಮನೊಪಲಿಸ್ಟ್ ಟೆಂಡೆನ್ಸಿ ಕಾಣಿಸುತ್ತಿದೆ. ಸೋಷಿಯಲಿಸ್ಟ್ ಟೆಂಡೆನ್ಸಿ ಕಾಣಿಸುವುದಿಲ್ಲ. ನಿಮ್ಮ ಪಕ್ಷದವರು ಸೋಷಿಯಲಿಜಂಗೆ ವೆಡೆಡ್ ಆಗಿದ್ದೇವೆಂದು ಹೇಳುತ್ತಾರೆ. ಒಟ್ಟಿನಲ್ಲಿ ಸಬ್ ಲೆಟಿಂಗಿಗೆ ಇದರಲ್ಲಿ ಅವಕಾಶ ಕೊಡಬೇಡಿ. ಯಾರು ಸಬ್ ಲೆಟಿಂಗ್ ಮಾಡುತ್ತಾರೋ ಅಂತಹವರಿಗೆ ಸೀರಿಯಸ್ ಪನಿಷ್‌ಮೆಂಟ್ ಮಾಡಬೇಕು. ಜೈಲಿಗೆ ಕಳುಹಿಸಬೇಕು. ಇಂತಹ ಕಾನೂನು ತಂದರೆ ಬಹಳ ಒಳ್ಳೆಯದು. ಈಗ ಅರ್‍ಯಾಕ್ ಷಾಪ್ಸ್‌ನಿಂದ ಹಳ್ಳಿಗಳಲ್ಲಿ ಜನಗಳಿಗೆ ಬಹಳ ತೊಂದರೆಯಾಗುತ್ತಿದೆ. ಹೆಣ್ಣುಮಕ್ಕಳಿಗೆ, ಸಣ್ಣಸಣ್ಣ ಮಕ್ಕಳಿಗೆ, ಬಹಳ ತೊಂದರೆಗಳು ಆಗುತ್ತಿವೆ. ಎಲ್ಲಿ ಪಬ್ಲಿಕ್ ಟ್ರಾಫಿಕ್ ಇರುವುದಿಲ್ಲವೋ ಅಂತಹ ಕಡೆಗಳಲ್ಲಿ ಇವು ಇರಬೇಕು. ಇದರ ಬಗ್ಗೆ ನಿಮ್ಮ ಕಾನೂನು ಪ್ರಕಾರ ರೂಲ್ಸನ್ನು ಕಟ್ಟುನಿಟ್ಟಾಗಿ ಅನುಸರಿಸಬೇಕು. ನಿಮ್ಮ ಅಧಿಕಾರಿಗಳಿಗೆ ಡೈರೆಕ್ಷನ್ ಕೊಟ್ಟು ಅವರು ಇದನ್ನು ಸರಿಯಾದ ರೀತಿಯಲ್ಲಿ ಬಂದೋಬಸ್ತು ಮಾಡಬೇಕು. ಹಾಗೆ ಮಾಡದೆ ಲೂಜ್ ಬಿಟ್ಟರೆ ನಿಮ್ಮ ಮನೆಯ ಬಾಗಿಲಿನಲ್ಲಿ ನಾಳೆ ಬಂದು ಮಾರುತ್ತಾರೆ. ಇವನ್ನು ಕೂಡಲೇ ನಿಲ್ಲಿಸಬೇಕು.

ಇನ್ನು ಕೋಕೋನಟ್ ಟಾಡಿಗೆ ಎನ್‌ಕರೇಜ್‌ಮೆಂಟ್ ಮಾಡಬೇಡಿ. ಇದರಿಂದ ಈಗ ಬಡವರಿಗೆ ಯಾರಿಗೂ ತೆಂಗಿನಕಾಯಿಗಳೇ ಸಿಗುತ್ತಾ ಇಲ್ಲ. ಒಂದೊಂದು ತೆಂಗಿನಕಾಯಿಗೆ 14 ಆಣೆ ಅಥವಾ 1 ರೂಪಾಯಿ ಆಗಿಹೋಗಿದೆ. ತೆಂಗಿನ ಮರಗಳಿಂದ ಎಷ್ಟೆಷ್ಟು ಟಾಡಿಯನ್ನು ಡ್ರಾಮಾಡುತ್ತೀರೋ ಅದನ್ನು ನಿಲ್ಲಿಸಿ. ನಾಳೆ ತೆಂಗಿನಕಾಯಿಗಳು ಸಿಗದೇ ಹೋದರೆ ದೇವರಿಗೆ ತೆಂಗಿನಕಾಯಿ ಒಡೆಯುವುದಕ್ಕೆ ಸಾಧ್ಯವಿಲ್ಲ. ತೆಂಗಿನಕಾಯಿ ಎಲ್ಲರಿಗೂ ರೀಚ್ ಆಗಬೇಕು. ತೆಂಗಿನಕಾಯಿಗಳು ಈಗ ಸಾಕಷ್ಟು ಇಲ್ಲ. ಅದರ ಜೊತೆಗೆ ತೆಂಗಿನ ಮರಗಳೂ ಸಹ ಹಾಳಾಗಿ ಹೋಗಿವೆ. ತೆಂಗಿನ ಮರಗಳಿಂದ ಟಾಡಿಯನ್ನು ಡ್ರಾ ಮಾಡುವುದು ಜಾಸ್ತಿ ಆದರೆ, ಅವುಗಳ ಲೈಫ್ ಹೋಗುತ್ತದೆ. ಆದ್ದರಿಂದ ಈಗ ತೆಂಗಿನ ಮರಗಳಿಂದ ಟಾಡಿಯನ್ನು ಎಲ್ಲೆಲ್ಲಿ ತೆಗೆಯುತ್ತಾರೋ ಅವನ್ನು ಕಾನೂನು ಪ್ರಕಾರ ಪ್ರೊಹಿಬಿಟ್ ಮಾಡಬೇಕು. ಅಂತರ ಪರಿಯಾಗಳನ್ನು ಖಂಡಿತವಾಗಿ ಪ್ರೊಟೆಕ್ಟ್ ಮಾಡಬೇಕು. ಇಲ್ಲದಿದ್ದರೆ ತೆಂಗಿನ ಸಂಪತ್ತು ನಾಶವಾಗುತ್ತದೆ.

ಕೊನೆಯದಾಗಿ ಇವರು ಈ ಮಸೂದೆಯನ್ನು ಇವರ ಒಂದು ವಿನಾಶಕಾಲಕ್ಕೋಸ್ಕರ ತಂದಿದ್ದಾರೆ, ವಿನಾಶಕಾಲೇ ವಿಪರೀತ ಬುದ್ಧಿ ಎಂದು ಹೇಳುವ ಹಾಗೆ ನಿಮ್ಮ ಕೊನೆಯ ಘಳಿಗೆಯಲ್ಲಿ ಈ ಬುದ್ಧಿ ನಿಮಗೇಕೆ ಬಂತು ಎಂಬುದಾಗಿ ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಬಿ. ಭಾಸ್ಕರಶೆಟ್ಟಿ (ಕಾಪು).— ಮಾನ್ಯ ಅಧ್ಯಕ್ಷರೇ, 1970ನೇ ಮೈಸೂರು ಎಕ್ಸೈಜು ಎರಡನೆಯ ತಿದ್ದುಪಡಿಯನ್ನು ನಾನು ವಿರೋಧಮಾಡುತ್ತಾ ಒಂದೆರಡು ವಿಷಯಗಳನ್ನು ಈ

ಸಂದರ್ಭದಲ್ಲಿ ಹೇಳಬಯಸುತ್ತೇನೆ. ಈ ಎಕ್ಸೈಜು ಮಸೂದೆಯ ಬಗ್ಗೆ ತಿದ್ದುಪಡಿಯನ್ನು ಮಾಡುವಾಗ ಏನು ಅಮಲಿನಲ್ಲಿ ಕಾನೂನು ಮಾಡಿದರೂ ಅದು ಜನರಲ್ಲಿ ವಿಪರ್ಯಾಸ ಆಗಬಾರದು. ಇದು ಕೆಲವೇ ಕಂಟ್ರಾಕ್ಟರುಗಳನ್ನು ನಿರ್ಮಾಣ ಮಾಡುವುದಕ್ಕಾಗಿ ಮತ್ತು ಕೆಲವೇ ಜನರಿಗೆ ಉದ್ಯೋಗಗಳನ್ನು ಕೊಡಿಸುವುದಕ್ಕಾಗಿ ಇಂತಹ ಕಾನೂನನ್ನು ತಯಾರು ಮಾಡಿದ್ದಾರೆಂದು ಒಂದು ಅನುಮಾನಕ್ಕೆ ಅಸ್ಪದ ಕೊಡುತ್ತದೆ. ಈಗ ಈ ಕುಡಿತದ ಇಲಾಖೆ ಏನಿದೆಯೊ ಅದು ಬರುಬರುತ್ತಾ ಏನಾಗಿದೆ ಯೆಂದರೆ, ರಾಯರ ಕುದುರೆ ಕತ್ತೆಯಾದಂತಾಗಿದೆ. ವರ್ಷೇ ವರ್ಷೇ ನಮ್ಮ ರಾಜ್ಯಕ್ಕೆ ಇದರಿಂದ ಬರುವ ಆದಾಯ ಬಹಳ ಕಡಿಮೆಯಾಗುತ್ತಿದೆ. ಉದಾಹರಣೆಗೆ ಹೇಳುವುದಾದರೆ, ಕಳೆದ ವರ್ಷ 69-70 ರಲ್ಲಿ ಅರ್ರ್ಯಾಕ್‌ನಲ್ಲಿ ರೂ. 8,17,47,600 ಬಂದಿದೆ. ಈ ವರ್ಷ ಅಂದರೆ, 70-71ರಲ್ಲಿ ರೂ. 7,04,58,324 ಆದಾಯ ಬಂದಿದೆ. ಅಂದರೆ, ಸುಮಾರು ಒಂದು ಕೋಟಿ ರೂಪಾಯಿಗಳು ಚಿಲ್ಲರೆ ಈ ವರ್ಷ ಅರ್ರ್ಯಾಕ್‌ನಲ್ಲಿ ಆದಾಯ ಕಡಿಮೆ ಬಂದಿದೆ. ಇನ್ನು ಸೇಂದಿಯಲ್ಲಿ ಕಳೆದ ವರ್ಷ ಆದಾಯ ರೂ. 3,81,58,008 ಬಂದಿದೆ. ಈ ವರ್ಷ 3,66,40,162 ರೂಪಾಯಿಗಳು ಬಂದಿದೆ. ಇದರಲ್ಲಿ ಸಾಧಾರಣ 15 ಲಕ್ಷ ರೂಪಾಯಿಗಳು ಹೋಗಿವೆ. ಏತಕ್ಕಾಗಿ ಇಷ್ಟು ಕಡಿಮೆಯಾಯಿತೆಂದು ಹೇಳಿದರೆ ಕಂಟ್ರಾಕ್ಟರುಗಳನ್ನು ನಿರ್ಮಾಣಮಾಡುವುದಕ್ಕೆ ಮತ್ತು ಕಂಟ್ರಾಕ್ಟರುಗಳಿಗೆ ಸಹಾಯ ಮಾಡುವುದಕ್ಕೋಸ್ಕರ ನಮ್ಮ ಸರ್ಕಾರ ಪ್ರಯತ್ನಿಸುವುದರ ದೆಸೆಯಿಂದ ಇಷ್ಟು ಹಣ ಈ ಎರಡು ಬಾಬುಗಳಿಂದ ಕಡಿಮೆ ಆದಾಯ ಬಂದಿದೆ.

ಶ್ರೀ ಕೆ. ಚಿದಾನಂದ.—1969ರಲ್ಲಿ ಆ ಕಂಟ್ರಾಕ್ಟರುಗಳು ದಿವಾಳಿಯಾಗಿ ಹೋಗಿದ್ದಾರೆಂದು ಸರ್ಕಾರಕ್ಕೆ ಗೊತ್ತಾಯಿತು. ಮಾನ್ಯ ಸದಸ್ಯರಿಗೆ ಅದು ಗೊತ್ತಿಲ್ಲ.

ಶ್ರೀ ಬಿ. ಭಾಸ್ಕರಶೆಟ್ಟಿ.—ನನಗೆ ಯಾರು ಆ ರೀತಿ ದಿವಾಳಿಯಾಗಿ ಹೋಗಿದ್ದಾರೋ ಗೊತ್ತಿಲ್ಲ. ಮಾನ್ಯ ಶ್ರೀ ಚಿದಾನಂದ ಅವರು ಕಂಟ್ರಾಕ್ಟ್ ವಹಿಸಿಕೊಂಡು ಹಣಮಾಡಿದ್ದಾರೆ ಎಂಬುದಾಗಿ ನನ್ನ ಭಾವನೆ. ಇದರಿಂದ ಏನು ಗೊತ್ತಾಗುತ್ತದೆಂದರೆ ನಮ್ಮ ಸರ್ಕಾರದ್ದು ಕಂಟ್ರಾಕ್ಟರುಗಳ ಮೇಲೆ ಸಂಪೂರ್ಣ ಆಶೀರ್ವಾದ ಇದೆ, ಅದರಿಂದಲೇ ಇಷ್ಟು ಕಡಿಮೆ ಆದಾಯ ಬಂದಿದೆಯೆಂದು. ಇದನ್ನು ಇನ್ನೂ ನಾನು ಸಕಾರಣವಾಗಿ ಹೇಳುವುದಾದರೆ, ನಮ್ಮ ಜಿಲ್ಲೆಯಲ್ಲಿ ಶರಾಬು ಮತ್ತು ಸೇಂದಿ ಅಂಗಡಿಗಳನ್ನು ಹರಾಜು ಮಾಡುವಾಗ ಮೊದಲು ಮಾನ್ಯ ಜಿಲ್ಲಾಧಿಕಾರಿಗಳಿಗೆ ಬರೆಯುತ್ತೇವೆ. ಅವರು ಈ ವಿಚಾರವನ್ನು ಮಾನ್ಯ ಮಂತ್ರಿಗಳ ಗಮನಕ್ಕೂ ತರುತ್ತಾರೆ. ಅದೇ ಪ್ರಕಾರ ಈ ವರ್ಷ ನೀವು ಇಂಡಿವಿಜುಯಲ್ ಷಾಪ್‌ಗಳನ್ನು ಹರಾಜು ಮಾಡುವಾಗ ಸೇಂದಿ ಮತ್ತು ಶರಾಬು ಅಂಗಡಿ ಗಳಿಂದ ಒಂದು ಲಕ್ಷಕ್ಕಿಂತಲೂ ಆದಾಯ ಹೆಚ್ಚಿಗೆ ಬರಬೇಕು ಎಂಬುದಾಗಿ ವಿರೋಧಪಕ್ಷದ ಎಲ್ಲಾ ಎಂ.ಎಲ್.ಎ.ಗಳು ಸೇರಿ ಅನೇಕ ತಂತಿಗಳನ್ನೂ ಸಹ ಕೊಟ್ಟಿದ್ದೇವೆ. ಸಂಬಂಧಪಟ್ಟ ಅಧಿಕಾರಿಗಳಿಗೆ ದೃಢವಾಗಿಯೂ ತಿಳಿಸಿದ್ದೇವೆ. ಆದರೆ ನಮ್ಮ ಸರ್ಕಾರದವರು ನಮ್ಮ ತಂತಿಗಳಿಗೆ ಏನು ಮನ್ನಣೆ ಕೊಟ್ಟಿದ್ದಾರೆಂದರೆ ನಾವು ಯಾವ ರೀತಿಯಲ್ಲಿ ಹರಾಜು ಮಾಡಬೇಕೆಂದು ಹೇಳಿದ್ದೆವೋ ಆ ರೀತಿಯಾಗಿ ಮಾಡಿಸಲಿಲ್ಲ. ಅವರ ಇಷ್ಟ ಪ್ರಕಾರ ಅದೇ ರೀತಿಯಲ್ಲಿ ಸೇಂದಿಯನ್ನು ಹರಾಜು ಹಾಕಿಸಿದ್ದಾಗೆ. ಹಾಗೆಯೇ ಶರಾಬನ್ನು ಹರಾಜು ಹಾಕಿಸಿದ್ದಾರೆ. ಕಂಟ್ರಾಕ್ಟರುಗಳ ಕೃಪಾದೃಷ್ಟಿಗೋಳಗಾಗಿ ಇಂಡಿವಿಜುಯಲ್ ಷಾಪ್ಸ್ ತೆಗೆದು ಎಲ್ಲೆಲ್ಲಿ ತಾಲ್ಲೂಕಿನ ಹಾಗೂ ಜಿಲ್ಲಾ ಕಂಟ್ರಾಕ್ಟರುಗಳಿದ್ದಾರೋ ಅವರಿಗೆ ಪ್ರಯೋಜನವಾಗುವ ರೀತಿಯಲ್ಲಿ ಹರಾಜು ಮಾಡಿದ್ದಾರೆ. ಇಡೀ ಜಿಲ್ಲೆಯ ಕಂಟ್ರಾಕ್ಟರ.ಗಳು ಈ ಹರಾಜನ್ನು ಬಾಯ್‌ಕಾಟ್ ಮಾಡಿದ್ದರು. ಈ ವಿಷಯ ಪತ್ರಿಕೆಗಳಲ್ಲಿಯೂ ಬಂದಿದೆ. ಸಕಾಲಿಕ ವಾಗಿ ಮಾನ್ಯ ಮಂತ್ರಿಗಳಿಗೂ ಹೇಳಿದ್ದೇನೆ. ಜಿಲ್ಲೆಯ ಎಕ್ಸೈಜು ಅಧಿಕಾರಿಗಳೂ ಮತ್ತು ಇನ್ನೂ ಇತರ ಅಧಿಕಾರಿಗಳೂ ದೊಡ್ಡದೊಡ್ಡ ಕಂಟ್ರಾಕ್ಟ್‌ದಾರರ ಹತ್ತಿರ ವಿಶೇಷವಾಗಿ ಹಣವನ್ನು ಪಡೆದು ಈ ರೀತಿ ಮಾಡಿದ್ದಾರೆ. ಸಮಾಜವಾದಿ ಧೋರಣೆಗೆ ಪ್ರತಿಯಾಗಿ ಅಲ್ಲಿ ನಡೆದಿದೆ. ಇದಕ್ಕೆ ಸರ್ಕಾರ ದವರು ಕಿವಿಗೊಡದೆ ಇದ್ದಾರೆ. ಈ ಹರಾಜುಗಳನ್ನು ಯಾವ ರೀತಿ ದೊಡ್ಡದೊಡ್ಡ ಕಂಟ್ರಾಕ್ಟ್ ದಾರರುಗಳು ಬಹಿಷ್ಕರಿಸಿದ್ದರೆಂಬುದನ್ನು ಪ್ರಜಾವಾಣಿ ಪತ್ರಿಕೆಯಲ್ಲಿ ವಿವರವಾಗಿ ಕೊಟ್ಟಿದ್ದಾರೆ. ಆಗ ಏನಾಯಿತೆಂದರೆ, ತಾಲ್ಲೂಕುವಾರಾಗಿ ದೊಡ್ಡದೊಡ್ಡ ಕಂಟ್ರಾಕ್ಟರುಗಳಿಗೆ ಕಡಿಮೆ ಬೆಲೆಯಲ್ಲಿ ಅದು ಸಿಕ್ಕಿದೆ. ಈ ಲೆಕ್ಕಾಚಾರದ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶರಾಬು ಹರಾಜಿನಲ್ಲಿ ಕಳೆದ ವರ್ಷದಲ್ಲಿ 97,48,500 ರೂಪಾಯಿಗಳೂ ಮತ್ತು ಈ ವರ್ಷದಲ್ಲಿ 72,30,000 ರೂಪಾಯಿಗಳೂ ವರಮಾನ ಬಂದಿದೆ. ಅಂದಮೇಲೆ ಈ ಒಂದೇ ಜಿಲ್ಲೆಯಲ್ಲಿ ಸುಮಾರು 26 ಲಕ್ಷ ರೂಪಾಯಿಗಳಷ್ಟು ಕಡಿಮೆ ವರಮಾನ ಬಂದಿದೆ. ಒಂದು ಜಿಲ್ಲೆಯಲ್ಲಿ ಕಂಟ್ರಾಕ್ಟರುಗಳ ಒತ್ತಡಕ್ಕೆ ಒಳಗಾಗಿ 26 ಲಕ್ಷ ರೂಪಾಯಿಯನ್ನು ಕಳೆದುಕೊಂಡಿದ್ದಾರೆ. ಸರ್ಕಾರದವರು ಇದನ್ನು ಪರಾಂಬರಿಸಿ ನೋಡಬೇಕು. ಇಲ್ಲಿ ಕೇಳಿದ ಕೆಲವು ಪ್ರಶ್ನೆಗಳಿಗೆ ಸರ್ಕಾರದವರು ಉತ್ತರವನ್ನು ಕೊಟ್ಟಿದ್ದಾರೆ. ಕೆಲವು ಜಿಲ್ಲೆಗಳಲ್ಲಿ ಕಳೆದ ವರ್ಷಕ್ಕಿಂತ ಶರಾಬಿನ ಹರಾಜು ಜಾಸ್ತಿಗೆ ಹೋಗಿದೆ, ಇನ್ನು ಕೆಲವು ಜಿಲ್ಲೆಗಳಲ್ಲಿ ಕಡಿಮೆಗೆ

(ಶ್ರೀ ಬಿ. ಭಾಸ್ಕರಶೆಟ್ಟಿ)

ಹೋಗಿದೆ. ಮಾನ್ಯ ಮಿತ್ರರಾದ ಚಿದಾನಂದರವರು ಕಳೆದ ವರ್ಷ ಕಂಡ್ರಾಕ್ಟರಿಗೆ ನಷ್ಟವಾಗಿದೆ ಎಂದು ಹೇಳಿದರು. ಅದು ದಕ್ಷಿಣ ಕನ್ನಡ ಜಿಲ್ಲೆಯವರಿಗೆ ಮಾತ್ರ ನಷ್ಟವಾಗಿದೆಯೋ, ಅಥವಾ ಇತರೇ ಜಿಲ್ಲೆಯವರಿಗೂ ನಷ್ಟವಾಗಿದೆಯೇ ಎಂಬುದನ್ನು ಕೇಳುತ್ತೇನೆ.

4–30 P.M.

ಕಳೆದ ವರ್ಷ ಬೆಂಗಳೂರು ಜಿಲ್ಲೆಯಲ್ಲಿ ಒಂದು ಕೋಟಿ 32 ಲಕ್ಷ 10 ಸಾವಿರ ರೂಪಾಯಿಗೆ ಹೋಗಿದೆ, ಈ ಸಲ ಒಂದು ಕೋಟಿ 44 ಲಕ್ಷ 98 ಸಾವಿರದ 400 ರೂಪಾಯಿಗೆ ಹೋಗಿದೆ. ಅಂದರೆ ಸಾಧಾರಣ 13 ಲಕ್ಷ ರೂಪಾಯಿ ಜಾಸ್ತಿಗೆ ಹೋಗಿದೆ. ಬಳ್ಳಾರಿಯಲ್ಲಿ ಹೋದ ಸಲ 37 ಲಕ್ಷ 89 ಸಾವಿರಕ್ಕೆ ಹೋಗಿದೆ, ಈಗ 39 ಲಕ್ಷ ಚಿಲ್ಲರೆಗೆ ಹೋಗಿವೆ. ಇಲ್ಲಿಯೂ ಕೂಡ ಎರಡು ಲಕ್ಷ ರೂಪಾಯಿ ಜಾಸ್ತಿಗೆ ಹೋಗಿದೆ. ಹೀಗೆ ಬಳ್ಳಾರಿ ಜಾಸ್ತಿ ಹೋಗಿದೆ, ಬೀದರ್ ಜಾಸ್ತಿ ಹೋಗಿದೆ. ಕೂರ್ಗ್, ಗುಲ್ಬರ್ಗ, ಮಂಡ್ಯ, ರಾಯಚೂರು ಎಲ್ಲಾ ಜಾಸ್ತಿ ಹೋಗಿದೆ. ಇದಕ್ಕಿಂತ ಮುಂಚಿನ ವರ್ಷ ಇನ್ನೂ ಕಡಿಮೆಯಿತ್ತು. ಮಾನ್ಯ ಚಿದಾನಂದರವರು ನಿನ್ನೆ ಕೂಡ ನನ್ನ ಹತ್ತಿರ ಹೇಳಿದರು. ವಿಧಾನ ಸಭೆಯಲ್ಲಿ ಅವರು ಒಂದು ಮಾತನಾಡುತ್ತಾರೆ, ಹೊರಗಡೆ ಒಂದು ಮಾತನಾಡುತ್ತಾರೆ. ಅವರು "ನನಗೆ ಈ ಎಂ.ಎಲ್.ಎ.ಗಿರಿಗೆ ಟಿಕೆಟ್ ಕೊಡುವುದು ಬೇಡ, ಒಂದು ಎಕ್ಸೈಸ್ ಗಾರ್ಡ್ ಕೆಲಸ ಸಿಕ್ಕಿದರೆ ಸಾಕು" ಎಂಬುದಾಗಿ. ಹೀಗಿರುವಾಗ ನೀವು ದೊಡ್ಡ ದೊಡ್ಡ ಕಂಟ್ರಾಕ್ಟರುಗಳಿಗೆ ಲಾಭ ಮಾಡುವ ಉದ್ದೇಶದಿಂದ ಹರಾಜು ಮಾಡುತ್ತಿದ್ದೀರಿ. ಅದಲ್ಲದೆ, ನೀವು ಈ 23 ವರ್ಷಗಳಲ್ಲಿ ಟಾಟಾ ಮತ್ತು ಬಿರ್ಲಾರಂತಿರುವ ಈ ಕಂಟ್ರಾಕ್ಟರುಗಳು ಏನಿದ್ದಾರೆ; ಅವರನ್ನು ಉದ್ಧಾರ ಮಾಡುವುದಕ್ಕೋಸ್ಕರ ಇಂತಹ ಅಮೆಂಡುಮೆಂಟುಗಳನ್ನು ತಂದು ಅವರಿಗೆ ರಕ್ಷಣೆ ಮಾಡುತ್ತಿದ್ದೀರಿ. ನೀವು 23 ವರ್ಷಗಳಲ್ಲಿ ಮಾಡಿದ್ದೇನೆಂದರೆ, ಕಂಟ್ರಾಕ್ಟರುಗಳ ರಾಜ್ಯವನ್ನು ಮಾಡಿದ್ದೀರಿ ಅಷ್ಟೆ. ಕಂಟ್ರಾಕ್ಟರುಗಳಿಗೆ ಹಣ ಸಂಪಾದನೆ ಮಾಡುವುದಕ್ಕೆ ಮತ್ತು ಇತರ ಅವ್ಯವಹಾರಗಳಲ್ಲಿ ಕೈಹಾಕು ವುದಕ್ಕೆ ನೀವು ಅವಕಾಶಗಳನ್ನು ಮಾಡಿಕೊಡುತ್ತಿದ್ದೀರಿ. ಇದಕ್ಕಾಗಿ ನೀವು ಎಕ್ಸೈಸ್ ಆಕ್ಟ್‌ಗೆ ತಿದ್ದುಪಡಿಯನ್ನು ಮಾಡಿ, ಲೀಸ್ ಮಾಡಿದ ಮೇಲೆ ಪುನಃ ಸಬ್ ಲೀಸ್ ಮಾಡಬಹುದು ಎಂದು ಹೇಳಿದ್ದೀರಿ. ಅಂದರೆ, ದೊಡ್ಡ ದೊಡ್ಡ ಟಾಟಾ ಬಿರ್ಲಾರಂತಿರುವ ಕಂಟ್ರಾಕ್ಟರುಗಳು ತೆಗೆದು ಕೊಂಡು, ನಂತರ ಅವರು ಸಬ್ ಲೀಸ್ ಮಾಡಬಹುದೆಂದು ಹೇಳುತ್ತಿದ್ದೀರಿ. ಈ ರೀತಿ ಕಾನೂನನ್ನು ಮಾಡಿರುವುದು ತೀರಾ ಅನ್ಯಾಯ ಮತ್ತು ಇದು ಸಮಾಜವಾದದ ಧೋರಣೆಗೆ ತದ್ವಿರುದ್ಧವಾದುದು. ಆದ್ದರಿಂದ ತಾವು ಇವನ್ನು ಕೈಬಿಡಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ಯಾರು ಯಾರು ಸಣ್ಣ ಸಣ್ಣ ಕಂಟ್ರಾಕ್ಟರುಗಳು ಇದ್ದಾರೆ, ಅವರಿಗೆ ಅನ್ಯಾಯವಾಗದ ಹಾಗೆ ಮಾಡಿ ಸಬ್‌ಲೀಸ್ ಮಾಡು ವಂತದ್ದನ್ನು ಕೈಬಿಡಬೇಕೆಂದು ಹೇಳುತ್ತೇನೆ.

ಅಲ್ಲದೆ ಈ ಕುರಿತವ ಇಲಾಖೆಯಲ್ಲಿ ಎಷ್ಟೆಲ್ಲಾ ಅನ್ಯಾಯಗಳಾಗುತ್ತಿವೆ, ಜನಗಳ ಮೇಲೆ ಯಾವ ರೀತಿ ದಬ್ಬಾಳಿಕೆಯಾಗುತ್ತಿದೆ ಎಂಬುದನ್ನು ಮಾನ್ಯ ಐತಾಳರವರು ಚೆನ್ನಾಗಿ ಹೇಳಿದ್ದಾರೆ. ಇವತ್ತು ಮಾನ್ಯ ಚಿದಾನಂದರವರ ಕ್ಷೇತ್ರದಲ್ಲಿ ಕೂಡ ಇವತ್ತು ಎಷ್ಟು ತಾಳೆ ಮರಗಳಿಂದ ಲೈಸನ್ಸ್ ಇಲ್ಲದೆ ಕಳ್ಳು ತೆಗೆಯುತ್ತಿದ್ದಾರೆಂಬುದನ್ನು ನೋಡಬಹುದು. ಇಡೀ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 15 ಸಾವಿರಕ್ಕೂ ಮಿಕ್ಕ ತೆಂಗಿನ ಮರಗಳಿಗೆ ಲೈಸೆನ್ಸ್ ಇಲ್ಲದೆ ಹಾಗೆ ಅನಧಿಕೃತವಾಗಿ ಈ ಕೆಲಸ ನಡೆಯುತ್ತಿದೆ. ನೀವು ಅವರಿಂದ ವರ್ಷ ಒಂದಕ್ಕೆ ಏನು ಲೈಸೆನ್ಸ್ ಫೀಯನ್ನು ಕಲೆಕ್ಟ್ ಮಾಡಬೇಕು, ಅದನ್ನು ಮಾಡುತ್ತಿದ್ದೀರಾ ಎಂದು ನಾನು ಕೇಳುತ್ತಿದ್ದೇನೆ. ನೀವು ಸರಿಯಾಗಿ ಅದನ್ನು ವಸೂಲು ಮಾಡಿದ್ದರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವರ್ಷ ಒಂದಕ್ಕೆ ಒಂದು ಮರಕ್ಕೆ 19 ರೂಪಾಯಿಯಂತೆ ಎರಡೂವರೆ ಕೋಟಿ ರೂಪಾಯಿಯಷ್ಟು ಲೈಸೆನ್ಸ್ ಫಿ ಜಾಸ್ತಿ ಬರುತ್ತಿತ್ತು. ಈ 15 ಸಾವಿರ ಮರಗಳಿಗೆ ಲೈಸೆನ್ಸು ಇಲ್ಲ, ನನ್ನ ಕ್ಷೇತ್ರ ಒಂದರಲ್ಲೇ ಮಾನ್ಯ ಮಂತ್ರಿಯವರು ಬಂದರೆ, ಇಂತಹ ಎರಡು ಸಾವಿರ ಸಸಿಗಳನ್ನು ನಾನು ತೋರಿಸುತ್ತೇನೆ. ಇದರಲ್ಲಿ ಏನಾಗುತ್ತದೆ ಅಂದರೆ. ಒಳಗಿಂದೊಳಗೆ ಜಿಲ್ಲಾ ಎಕ್ಸೈಸ್ ಆಫೀಸರು ಮತ್ತು ಇತರರು ಈ ಫೀಯ 50 ಪರ್‌ಸೆಂಟನ್ನು ಅನಧಿಕೃತವಾಗಿ ವಸೂಲು ಮಾಡಿಕೊಂಡು, ಇವರೊಳಗೆ ಹಂಚಿಕೊಳ್ಳುತ್ತಿದ್ದಾರೆ. ಹೀಗೆ ಸರ್ಕಾರಕ್ಕೆ ಬರುವ ಹಣ ಈ ಅಧಿಕಾರಿಗಳ ಜೋಬಿನೊಳಗೆ ನೇರವಾಗಿ ಹೋಗುತ್ತಿದೆ. ಇದನ್ನೇನಾದರೂ ಸರ್ಕಾರದವರು ಚೆಕ್ ಮಾಡುತ್ತಾರೆಯೇ? ನಮ್ಮ ಜಿಲ್ಲಾ ಎಕ್ಸೈಸ್ ಅಧಿಕಾರಿಯ ಮೇಲೆ ಈಗಾಗಲೇ ಬೇಕಾದಷ್ಟು ದೂರುಗಳು ಬಂದಿವೆ. ಸಂಬಂಧಪಟ್ಟ ಮಂತ್ರಿಯವರಿಗೆ ಕೂಡ ಇವರ ವಿಚಾರದಲ್ಲಿ ಹಲವರು ರುಜು ಮಾಡಲ್ಪಟ್ಟ ಅರ್ಜಿಗಳು ಬಂದಿವೆ. ಇದರ ಮೇಲೆ ಏನು ಕ್ರಮ ತಾವು

ತೆಗೆದುಕೊಂಡಿದ್ದೀರಿ? ನನ್ನ ಮಿತ್ರರ ಕ್ಷೇತ್ರವಾದ ಬೆಳ್ತಂಗಡಿಯಲ್ಲಿ ಸಾಧಾರಣ 60 ಅಂಗಡಿಗಳು ಲೈಸೆನ್ಸ್ ಇಲ್ಲದೆ, ಅಧಿಕಾರಿಗಳಿಗೆ ಅಕ್ರಮವಾಗಿ ನೂರು ರೂಪಾಯಿ ಕೊಟ್ಟು ನಡೆಸಿಕೊಂಡು ಬರುತ್ತಿದ್ದಾರೆ. ಇಂತಹ ಲೈಸೆನ್ಸ್ ಇಲ್ಲದೆ, ಅಕ್ರಮವಾಗಿ ಅಧಿಕಾರಿಗಳಿಗೆ ಹಣ ಕೊಟ್ಟು, ನಡೆಸುವಂತಹ ಅಂಗಡಿಗಳು ಸಾವಿರಾರು ಇವೆ. ಅಧಿಕಾರಿಗಳಿಗೆ ತಿಂಗಳಿಗೆ ಇಂತಿಷ್ಟು ಅನಧಿಕೃತ ಹಣ ಕೊಟ್ಟರೆ ಸಾಕು, ಒಂದು ಬ್ರಾಂಚು ತೆರೆಯಬಹುದು. ಆದ್ದರಿಂದ ಇಂತಹ ಅಕ್ರಮ ವ್ಯವಹಾರಗಳನ್ನು ಸರ್ಕಾರದವರು ಕಂಟ್ರೋಲ್ ಮಾಡಿದರೆ, ಸಾಧಾರಣವಾಗಿ ನಮ್ಮ ಈ ಇಲಾಖೆಗೆ ಈಗ ಬರುವುದಕ್ಕಿಂತ ಒಂದು 20 ಕೋಟಿ ರೂಪಾಯಿಯಾದರೂ ಜಾಸ್ತಿ ಬರಬಹುದು. ಸೇಲ್ಸ್ ಟ್ಯಾಕ್ಸ್ ಏನು 36 ಕೋಟಿ ವಸೂಲು ಮಾಡುತ್ತಾರೆ, ಅದಕ್ಕಿಂತಲೂ ಹೆಚ್ಚು ರೆವೆನ್ಯೂ ಈ ಇಲಾಖೆಯಿಂದ ವಸೂಲು ಮಾಡಬಹುದು. ಆದರೆ, ಇದಕ್ಕೆ ತಾವು ಸ್ವಲ್ಪ ಯೋಗ್ಯರಾದ ಅಧಿಕಾರಿಗಳನ್ನು ಹಾಕಬೇಕು. ತಿನ್ನುವ ಆಫೀಸರ್ಸನ್ನು ಹಾಕಿದರೆ, ಇನ್ನೂ ಜಾಸ್ತಿಯಾಗಿ ಸರ್ಕಾರಕ್ಕೆ ಬರುವ ಹಣ ನಿಂತು ಹೋಗುತ್ತದೆ. ಇವತ್ತಿನವರೆಗೆ ಜಿಲ್ಲಾ ಎಕ್ಸೈಸ್ ಆಫೀಸರ್ಸ್ ಎಂದು ಇದ್ದುದನ್ನು ಜಿಲ್ಲಾ ಎಕ್ಸೈಸ್ ಸೂಪರಿಂಟೆಂಡೆಂಟ್, ಡೆಪ್ಯುಟಿ ಸೂಪರಿಂಟೆಂಡೆಂಟ್ ಎಂದು ಕರೆಯಬೇಕು ಮತ್ತು ಎಕ್ಸೈಸ್‌ಗೆ ಬೇರೆ ಒಬ್ಬ ಡಿಪ್ಯೂಟಿ ಕಮಿಷನರ್ ನೇಮಕ ಮಾಡಬೇಕೆಂದು ಹೇಳಿ 3 ಲಕ್ಷ 5 ಸಾವಿರ ರೂಪಾಯಿ ಖರ್ಚಾಗುವ ಒಂದು ಬಿಲ್ಲನ್ನು ತಂದು ಇಟ್ಟಿದ್ದಾರೆ. ಅಲ್ಲದೆ ಇವತ್ತು ಈ ಕಂಟ್ರಾಕ್ಟರುಗಳು ಮತ್ತು ಡಿಸ್ಟಿಲರಿ ತಯಾರಕರು ಏನಿದ್ದಾರೆ, ಅವರ ಒಂದು ಜೇಬಿನಲ್ಲಿ ನಮ್ಮ ಮಾನ್ಯ ರಾಮಕೃಷ್ಣ ಹೆಗಡೆಯವರು, ಮತ್ತೊಂದು ಜೇಬಿನಲ್ಲಿ ಮುಖ್ಯಮಂತ್ರಿಯವರು ಇದ್ದಾರೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ನಗರದಲ್ಲಿರುವ "ಕೋಡೆ" ಮ್ಯಾನುಫ್ಯಾಕ್ಚರರ್ಸ್ ಏನಿದ್ದಾರೆ, ಅವರ ಜೊತೆ ಇವರು ಸೇರಿಕೊಂಡು ಇಲ್ಲದ ಅವ್ಯವಹಾರಗಳನ್ನು ಮಾಡಿ, ಈ ಬ್ರಾಂದಿ, ವಿಸ್ಕಿ ಮುಂತಾದುವುಗಳನ್ನು ಎಕ್ಸೈಸ್ ಡ್ಯೂಟಿ ಇಲ್ಲದೆ ಹೊರಗಡೆ ಕಳಿಸುತ್ತಿದ್ದಾರೆ. ಈ ಪದಾರ್ಥಗಳು ಗೋವಾ ಮುಂತಾದ ಪ್ರದೇಶಗಳಿಗೆ ಡ್ಯೂಟಿ ಇಲ್ಲದೆ ಹೋಗುತ್ತಿವೆ. ಇದರಿಂದ ಈ ಪದಾರ್ಥಗಳನ್ನು ತಯಾರು ಮಾಡತಕ್ಕಂತಹ ಜನ ಏನಿದ್ದಾರೆ, ಅವರಲ್ಲಿ ಕಪ್ಪು ಹಣ ಸ್ಟಾಕ್ ಆಗುತ್ತಿದೆ. ಇದನ್ನು ನಮ್ಮ ಇಂಟೆಲಿಜೆನ್ಸ್ ಬ್ಯೂರೋದವರಿಂದ ತನಿಖೆ ಮಾಡಿಸಿ, ಅವರ ಮನೆಯನ್ನು, ಕೋಣೆಯನ್ನು ತನಿಖೆ ಮಾಡಿಸಿದರೆ, ಎಷ್ಟೋ ಹಣ ಪತ್ತೆಯಾಗುತ್ತದೆ ಮತ್ತು ಇವರ ದುರ್ವ್ಯವಹಾರ ಎಲ್ಲಾ ಬಯಲಾಗುತ್ತದೆ. ಇದನ್ನು ಏಕೆ ಈ ಸರ್ಕಾರದವರು ಮಾತನಾಡುತ್ತಾ ಇಲ್ಲ?

ನಮ್ಮ ಜಿಲ್ಲಾ ಎಕ್ಸೈಜ್ ಅಧಿಕಾರಿಗಳು ಮತ್ತು ಜಿಲ್ಲಾಧಿಕಾರಿಗಳ ವಿಚಾರ ಕೂಡ ಪತ್ರಿಕೆಯಲ್ಲಿ ಬಂದಿದೆ. ಏನೇ ಆದರೂ ಕೂಡ ಈ ವಿಚಾರವನ್ನು ಜಾಗರೂಕತೆಯಿಂದ ನೋಡಬೇಕು. ಜನಗಳಿಗೆ ಹೆಂಡವನ್ನು ಕುಡಿಸಿ ಹಣವನ್ನು ಸಂಪಾದನೆ ಮಾಡುತ್ತಿದ್ದೀರಿ. ಇದರ ವ್ಯವಹಾರ ಏನಿದೆ ಇದು ಸರಿಯಾದ ರೀತಿಯಲ್ಲಿ ನಡೆಯುತ್ತಿಲ್ಲ. ಆದ್ದರಿಂದ ನಮಗೂ ನಮ್ಮ ಮಕ್ಕಳಿಗೂ ಒಳ್ಳೆಯದನ್ನು ಮಾಡುವಂತಹ ಕೆಲಸಗಳನ್ನು ಮಾಡಬೇಕು. ಎಲ್ಲರೂ ಸೇರಿ ಈ ಇಲಾಖೆಯ ವಿಷಯದಲ್ಲಿ ಸ್ವಲ್ಪ ಜಾಗರೂಕತೆಯನ್ನು ತೆಗೆದುಕೊಂಡು ಸ್ವಲ್ಪ ಒಳ್ಳೆಯ ರೀತಿಯಲ್ಲಿ ಇದನ್ನು ನಡೆಸಿಕೊಂಡು ಬಂದು ನಮ್ಮ ಸರ್ಕಾರಕ್ಕೆ ಆದಾಯ ಹೆಚ್ಚು ಬರುವಂತೆ ಮಾಡಬೇಕು ಅಂಥಾ ಒಂದು ಪ್ರಯತ್ನವನ್ನು ಸರ್ಕಾರದವರು ಮಾಡಬೇಕೆಂದು ಹೇಳಿ ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಟಿ. ಆರ್. ಶಾಮಣ್ಣ (ಬೆಂಗಳೂರು ಸಿಟಿ-ಕೋಟೆ).—ಮಾನ್ಯ ಅಧ್ಯಕ್ಷರೇ, ನಮ್ಮ ವಿಧಾನ ಸಭೆಯ ಪ್ರತಿ ಸೆಷನ್ನಲ್ಲಿಯೂ ಕೂಡ ಕಾರ್ಪೋರೇಷನ್ನಿನ ಒಂದು ತಿದ್ದುಪಡಿ ಮಸೂದೆ, ಒಂದು ಸೇಂದಿ ತಿದ್ದುಪಡಿ ಮಸೂದೆ, ಒಂದು ಸೇಲ್ಸ್ ಟ್ಯಾಕ್ಸ್ ತಿದ್ದುಪಡಿ ಮಸೂದೆ ಇವುಗಳು ಬಾರದೆ ಇರುವುದಿಲ್ಲ. ಪ್ರೊಹಿಬಿಷನ್ ತೆಗೆಯುವಾಗ ಕಳ್ಳಬಟ್ಟಿ ಸಾರಾಯಿಯನ್ನು ತೆಗೆದು ಮಾರಾಟ ಮಾಡುವುದರಿಂದ ಜನಗಳು ತೊಂದರೆ ಪಡುತ್ತಿದ್ದಾರೆ. ಕಳ್ಳಬಟ್ಟಿ ಸಾರಾಯಿಯನ್ನು ಕುಡಿಯುವುದನ್ನು ತಪ್ಪಿಸುವುದಕ್ಕೂ ಮತ್ತು ರಾಜ್ಯದ ಆದಾಯವನ್ನು ಹೆಚ್ಚಿಸುವುದಕ್ಕೂ ಪ್ರೊಹಿಬಿಷನ್ ಕಿತ್ತು ಹಾಕುತ್ತೇವೆಂದು ಹೇಳಿದರು. ಈಗ ಪ್ರೊಹಿಬಿಷನ್ ತೆಗೆದಮೇಲೆ ಆ ಟ್ಯಾಕ್ಸನ್ನು ನಮ್ಮ ರಾಜ್ಯದ ಪ್ರತಿ ಪ್ರಜೆಯ ಮೇಲೂ ಬೀಳುವ ಹಾಗೆ ಮಾಡಿದರು. ತೆಂಗಿನಕಾಯಿ ಮತ್ತು ಕೊಬ್ಬರಿ ಎಣ್ಣೆಯ ಬೆಲೆ ಯದ್ವಾ ತದ್ವಾ ಏರಿದೆ. ಸೇಂದಿಯನ್ನು ಕುಡಿಯುವುದರ ಜೊತೆಗೆ ಪ್ರತಿಯೊಬ್ಬ ಸಾರ್ವಜನಿಕನೂ ಟ್ಯಾಕ್ಸ್ ಕೊಡಬೇಕಾಗಿದೆ. ಪ್ರೊಹಿಬಿಷನ್ ತೆಗೆಯುವಾಗ ಕಳ್ಳಬಟ್ಟಿ ತಯಾರಿಕೆ ಕಡಿಮೆಯಾಗುತ್ತದೆ ಎಂದು ಹೇಳಿದ್ದರು. ಈಗ ನಾನಾ ತೆರಿಗೆಗಳು ಹೆಚ್ಚಾಗಿ ಕಳ್ಳಬಟ್ಟಿ ಬೀದಿ ಬೀದಿಯಲ್ಲೂ ನಡೆಯುತ್ತಿದೆ. ನನ್ನ ಕ್ಷೇತ್ರದಲ್ಲಿ 100 ಕಡೆ ನಡೆಯುವಂಥಾದ್ದನ್ನು ನಾನು ತೋರಿಸುತ್ತೇನೆ. ಪೋಲೀಸಿನವರು ಅವರ ಹತ್ತಿರ ಹೋಗಿ ಒಂದು ಬಾಟಲ್ ಕಳ್ಳಬಟ್ಟಿ ಸಾರಾಯನ್ನು ಕುಡಿದು 5 ರೂಪಾಯಿ ಲಂಚ ತೆಗೆದುಕೊಂಡು ಬರುವುದು ನಡೆಯುತ್ತಿದೆ. ಸೇಂದಿ ಬೆಲೆ ಜಾಸ್ತಿಯಾಗಿರುವುದರಿಂದ ಕಳ್ಳಬಟ್ಟಿ

(ಶ್ರೀ ಟಿ. ಆರ್. ಶಾಮಣ್ಣ)

ಸಾರಾಯಿ ಸುಲಭವಾಗಿ ಸಿಕ್ಕುತ್ತದೆ ಎಂದು ಅದನ್ನು ಕುಡಿಯುವುದು ಜಾಸ್ತಿಯಾಗಿದೆ. ಅದ್ದರಿಂದ ಕಳ್ಳಬಟ್ಟಿ ತಯಾರಿಕೆ ಜಾಸ್ತಿಯಾಗುತ್ತಿದೆ. ಇದು ನಿಜವಾಗಿಯೂ ಶೋಚನೀಯವಾಗಿದೆ. ಕಳ್ಳಬಟ್ಟಿ ಸಾರಾಯನ್ನು ತಯಾರಿಸುವುದಕ್ಕಾಗಿ ಕೆಟ್ಟ ಬೆಲ್ಲವನ್ನು ಕೊಂಡುಕೊಳ್ಳುತ್ತಾರೆ. ಇದರಿಂದ ಬೆಲ್ಲಕ್ಕೂ ಕೂಡ ಹೆಚ್ಚು ಬೆಲೆ ಕೊಡತಕ್ಕ ಸಂದರ್ಭ ಬಂದಿದೆ. ಸಜ್ಜನರು, ಜನಸಾಮಾನ್ಯರು, ಶಿಕ್ಷಕರು ಮತ್ತು ದೇವಸ್ಥಾನಗಳು ಇರುವ ಕಡೆ ಹೆಂಡ, ಸಾರಾಯಿ ಮತ್ತು ಮಾದಕ ಪದಾರ್ಥಗಳ ಅಂಗಡಿಗಳನ್ನು ಇಡುವುದಕ್ಕೆ ಲೈಸೆನ್ಸ್ ಕೊಟ್ಟಿದ್ದಾರೆ. ಇದರ ಜೊತೆಗೆ ಅಂಥಾ ಸ್ಥಳಗಳಲ್ಲಿ ಬ್ರಾಂದಿ, ವಿಸ್ಕಿ, ರಮ್, ಜಿನ್ ಇತ್ಯಾದಿ ಮಾದಕ ಪಾನೀಯಗಳನ್ನು ಮಾರುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಇದು ಬಹಳ ಅನ್ಯಾಯ. ಇಂಥಾ ದೂರುಗಳನ್ನು ನಾನು ಅನೇಕ ಸಾರಿ ಮಾನ್ಯ ಮಂತ್ರಿಗಳ ಹತ್ತಿರ ಹೇಳಿದ್ದೇನೆ. ಈ ರೀತಿ ಬೆಂಗಳೂರು ಸಿಟಿಯಲ್ಲಿ 4–5 ಕಡೆ ಅಂಗಡಿಗಳನ್ನು ಇಟ್ಟಿರುವ ಹಾಗೆ ಸರಿಯಾಗಿಲ್ಲ ಸಾರ್ವಜನಿಕರಿಗೆ ಅನಾನುಕೂಲವಾಗಿದೆ. ಅವುಗಳನ್ನು ತೆಗೆಯಬೇಕೆಂದು ನಾನು ಮಾನ್ಯ ಮಂತ್ರಿಗಳಿಗೆ ಹೇಳಿದ್ದೆ. ಒಂದು ಕಡೆ ಮಾತ್ರ ಅಂಥಾ ಅಂಗಡಿಯನ್ನು ತೆಗೆಯುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಅದಕ್ಕಾಗಿ ಅವರಿಗೆ ನನ್ನ ಧನ್ಯವಾದಗಳು. ರೆಸಿಡೆನ್ಷಿಯಲ್ ಹೌಸಸ್ ಇರುವ ಕಡೆ ಹೆಂಡದ ಅಂಗಡಿಗಳನ್ನು ಇಡುವುದಕ್ಕೆ ಅವಕಾಶ ಮಾಡಿಕೊಟ್ಟಿರುವುದು ಶೋಚನೀಯ ವಿಚಾರ. ಪ್ರೊಹಿಬಿಷನ್ ತೆಗೆದಮೇಲೆ ಸರ್ಕಾರದವರು ಕುಡಿಯುವುದಕ್ಕೆ ಉತ್ತೇಜನ ಕೊಡುತ್ತಿದ್ದಾರೆ. ಅನೇಕ ವಿದ್ಯಾರ್ಥಿಗಳೂ ಕೂಡ ಕುಡಿಯುವುದಕ್ಕೆ ಅಭ್ಯಾಸ ಮಾಡುತ್ತಿದ್ದಾರೆ. ಸಾರ್ವಜನಿಕರೂ ಕುಡಿಯುವುದನ್ನು ಅಭ್ಯಾಸ ಮಾಡುತ್ತಿದ್ದಾರೆ. ಮುಂದಿನ ಪ್ರಜೆಗಳಾಗತಕ್ಕ ಯುವಕರೂ ಕುಡಿಯುತ್ತಿದ್ದಾರೆ. ಅದಕ್ಕೆ ಸರ್ಕಾರದವರೂ ಸಹಕರಿಸುತ್ತಿದ್ದಾರೆ. ಇದು ನಿಜವಾಗಿಯೂ ಶೋಚನೀಯವಾದ ವಿಚಾರ. ಗಂಡು ಹುಡುಗರು ಹೆಣ್ಣು ಹುಡುಗಿಯರಿಗೆ ಕುಡಿಯುವ ಅಭ್ಯಾಸವನ್ನು ಕಲಿಸಿದ್ದಾರೆ. ಮೌಂಟ್ ಕಾರ್ಲೇಜ್ ಮತ್ತು ಮಹಾರಾಣಿ ಕಾಲೇಜ್ ಹತ್ತಿರ ಮಧ್ಯಾಹ್ನ 3–4 ಗಂಟೆ ಟೈಮಿನಲ್ಲಿ ಹೋದರೆ ತಾವು ಅಲ್ಲಿ ನೋಡಬಹುದು. ಅಲ್ಲಿಗೆ ಯಾರಾದರೂ ಒಬ್ಬ ಬಾಯ್ ಫ್ರೆಂಡ್ ಬರುತ್ತಾನೆ. ಜೊತೆಯಲ್ಲಿ ಕಾಲೇಜ್ ಹುಡುಗಿಯನ್ನು ಸ್ಕೂಟರಿನಲ್ಲಿ ಅಥವಾ ಕಾರಿನಲ್ಲಿ ಕೂರಿಸಿಕೊಂಡು ಹೋಗಿ ಮಹಾತ್ಮ ಗಾಂಧಿ ರಸ್ತೆ ಅಥವಾ ಬ್ರಿಗೇಡ್ ರೋಡಿನಲ್ಲಿ ಹೋಗಿ ಕುಡಿಯುತ್ತಾರೆ. ಈ ರೀತಿ ಅನೇಕ ಯುವಕರು ನೀತಿಹಾರಿ ಮಾಡುತ್ತಿದ್ದಾರೆ. ಇದು ಶೋಚನೀಯವಾದ ವಿಚಾರ. ಅನೇಕ ಹೋಟೆಲುಗಳಲ್ಲಿ ವಿಸ್ಕಿ, ಬ್ರಾಂದಿ, ರಮ್, ಜಿನ್ ಇತ್ಯಾದಿ ಪಾನೀಯಗಳನ್ನು ಮಾರತಕ್ಕ ಹವ್ಯಾಸ ಬಂದಿದೆ. ಇದರ ಜೊತೆಗೆ ಹೆಂಡ ಮಾರುವುದಕ್ಕೆ ಉತ್ತೇಜನ ಕೊಟ್ಟಿರುವುದು ಶೋಚನೀಯವಾದ ವಿಚಾರ. ಕಳ್ಳಬಟ್ಟಿ ಸಾರಾಯನ್ನು ಕುಡಿಯುತ್ತಾರೆ. ಇದರಿಂದ ಅವರು 50-60 ವರ್ಷ ಕೂಡ ಬದುಕುವುದಿಲ್ಲ. ಬಹಳ ಬೇಗ ಸಾಯುತ್ತಾ ಇರತಕ್ಕಂಥ ಪರಿಸ್ಥಿತಿಯನ್ನು ನಾವು ನೋಡುತ್ತಿದ್ದೇವೆ. ಸೇಂದಿ ಕಂಟ್ರಾಕ್ಟರು ಬಡವರ ಹಣವನ್ನು ದೋಚಿಕೊಂಡು ಒನೇ ದಿನೇ ಸಾಹುಕಾರರಾಗುತ್ತಿದ್ದಾರೆ. ಇದರಿಂದ ಅನೇಕ ಬಡ ಸಂಸಾರಗಳು ನಾಶವಾಗಿವೆ. ಘೋಡ್ಸೆ ಒಂದು ದಿನ ಮಹಾತ್ಮ ಗಾಂಧೀಜಿಯವರನ್ನು ಕೊಂದ, ಅದೇ ಗಾಂಧಿಭಕ್ತರಾದ ಕಾಂಗ್ರೆಸ್ಸಿನವರು ದಿನವೂ ಜನಗಳನ್ನು ಕೊಲ್ಲುತ್ತಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಸೇಂದಿ ಕಂಟ್ರಾಕ್ಟರಿಂದ ಕಾಂಗ್ರೆಸ್ ಆರ್ಗನೈಜೇಷನ್ನಿನವರು ದುಡ್ಡು ಸಂಪಾದನೆ ಮಾಡುತ್ತಿದ್ದಾರೆ ಎಂಬುದು ಎಲ್ಲರಿಗೂ ತಿಳಿದ ವಿಷಯ. ಈ ರೀತಿ ಅವರಿಂದ ದುಡ್ಡು ತೆಗೆದುಕೊಂಡು ಕಾಂಗ್ರೆಸ್ ಆರ್ಗನೈಜೇಷನ್ ನಡೆಸಿ ಇಂಥಾ ಆರ್ಗನೈಜೇಷನ್ನಿನವರು ಸರ್ಕಾರವನ್ನು ನಡೆಸಿದರೆ ಆಡಳಿತ ಎಷ್ಟು ಚೆನ್ನಾಗಿ ನಡೆಯುತ್ತದೆ ಎಂಬುದನ್ನು ಯೋಚನೆ ಮಾಡಬೇಕಾಗಿದೆ.

ಇನ್ನು ನಮ್ಮ ಮುಂದಿರತಕ್ಕ ಮಸೂದೆಯಲ್ಲಿರತಕ್ಕ ಕೆಲವು ಅಂಶಗಳನ್ನು ಹೇಳಬೇಕಾಗಿದೆ. ಕೆಲವು ತಿದ್ದುಪಡಿಗಳನ್ನು ಈ ಮಸೂದೆಯಲ್ಲಿ ಸೇರಿಸಿದ್ದಾರೆ. ಈ ಮಸೂದೆಯಲ್ಲಿ ಹೆಂಡವನ್ನು ತೆಗೆಯತಕ್ಕ ಮರಗಳ ಗುಂಪಿನಲ್ಲಿ ತೆಂಗಿನ ಮರವನ್ನೂ ಸೇರಿಸಿದ್ದಾರೆ. ಈ ತಿದ್ದುಪಡಿಯನ್ನು ಈ ಮಸೂದೆಯಿಂದ ತೆಗೆಯಬೇಕು. ಏತಕ್ಕೆಂದರೆ ತೆಂಗಿನ ಮರದಿಂದ ಹೆಂಡ ತೆಗೆಯುವುದರಿಂದ ಫಲ ಕಡಿಮೆಯಾಗುತ್ತದೆ. ಒಂದು ತೆಂಗಿನಕಾಯಿಗೆ 50 ಪೈಸಾ ಬೆಲೆ ಇದ್ದದ್ದು ಈಗ 80 ಪೈಸಾ ಒಂದು ರೂಪಾಯಿವರೆಗೂ ಹೋಗಿದೆ. ಕೊಬ್ಬರಿ ಒಂದು ಕೆ. ಜಿ ಗೆ 4 ರೂಪಾಯಿ ಇದ್ದದ್ದು ಇವೊತ್ತು 8 9 ರೂಪಾಯಿಗಳವರೆಗೆ ಹೋಗಿದೆ. ಕೊಬ್ಬರಿ ಎಣ್ಣೆಯ ಬೆಲೆಯಂತೂ ತೀರಾ ಏರಿ ಹೋಗಿದೆ. ಹೀಗಿರುವಾಗ ತೆಂಗಿನ ಮರದಲ್ಲಿ ಹೆಂಡವನ್ನು ತೆಗೆಯುವುದಕ್ಕೆ ಈ ಮಸೂದೆಯಲ್ಲಿ ಅವಕಾಶ ಮಾಡಿಕೊಟ್ಟಿರುವುದು ಸರಿಯಿಲ್ಲ. ಈ ಬಗ್ಗೆ ನಾನು ಒಂದು ತಿದ್ದುಪಡಿ ಕಳಿಸಿದ್ದೇನೆ. ಈ

ತಿದ್ದುಪಡಿಯನ್ನು ಮಾನ್ಯ ಮಂತ್ರಿಗಳು ಒಪ್ಪಿಕೊಳ್ಳುತ್ತಾರೆಂದು ನಾನು ನಂಬಿದ್ದೇನೆ. ಹಿಂದೆ ಪ್ರೊಹಿಬಿಷನ್ ಜಾರಿಗೆ ತಂದಾಗ ಈಚಲು ತೋಪುಗಳಲ್ಲಿದ್ದ ಈಚಲು ಮರಗಳನ್ನೆಲ್ಲಾ ಕಡಿದು ಹಾಕಿದರು. ಈಗ ಹೆಂಡ ತೆಗೆಯುವುದಕ್ಕೆ ಈಚಲು ಮರಗಳಿಲ್ಲ. ಅದಕ್ಕಾಗಿ ಹೆಂಡ ತೆಗೆಯುವುದಕ್ಕೆ ತೆಂಗಿನಮರಗಳಿಗೆ ಒಂದು ಮರಕ್ಕೆ 100-150 ರೂಪಾಯಿಗಳನ್ನು ಕೊಡುತ್ತಿದ್ದಾರೆ. ತೆಂಗಿನ ಮರದಲ್ಲಿ ಹೆಂಡ ತೆಗೆಯುವುದಕ್ಕೆ ಅವಕಾಶವನ್ನು ಕೊಟ್ಟರೆ ಅದರ ಮಾಲೀಕರಿಗೆ ತಕ್ಷಣ ದುಡ್ಡು ಬರುತ್ತದೆ. ಆದರೆ ತೆಂಗಿನಕಾಯಿ ಬೆಳೆದು ಅದರಿಂದ ದುಡ್ಡು ತೆಗೆದುಕೊಳ್ಳಬೇಕಾದರೆ ಸ್ವಲ್ಪ ನಿಧಾನವಾಗುತ್ತದೆ. ಈ ದೃಷ್ಟಿಯನ್ನಿಟ್ಟುಕೊಂಡು ತೆಂಗಿನಮರಗಳನ್ನು ಹೆಂಡ ತೆಗೆಯುವುದಕ್ಕೆ ಕೊಟ್ಟಿರುವುದರಿಂದ ತೆಂಗಿನ ಬೆಳೆ ಕಡಿಮೆಯಾಗಿ ತೆಂಗಿನಕಾಯಿ ಬೆಲೆ ಜಾಸ್ತಿಯಾಗಿ ಜನಗಳಿಗೆ ತೊಂದರೆಯಾಗಿದೆ. ಮೈಸೂರು, ಮದ್ರಾಸು ಕೇರಳ ರಾಜ್ಯಗಳಲ್ಲಿ ತೆಂಗಿನಕಾಯಿ ಬೆಲೆ ಹೆಚ್ಚಿದೆ. ಹೆಚ್ಚು ತೆಂಗಿನಮರ ಇರುವುದು ಮೈಸೂರು ರಾಜ್ಯದಲ್ಲಿ ಒಂದೇ ಕಡೆ. ತೆಂಗಿನಕಾಯಿ ಬೆಲೆ ಜಾಸ್ತಿಯಾಗುತ್ತಿದೆಯೇ ವಿನಾ ಕಡಿಮೆಯಾಗುವುದಿಲ್ಲ ಎಂದು ನಾನು ಹೇಳಬೇಕಾಗಿದೆ.

ಈಗ ಹೊಸ ಹುದ್ದೆಗಳನ್ನು ಬೇರೆ ನಿರ್ಮಾಣ ಮಾಡುತ್ತಿದ್ದೀರಿ. ಇದಕ್ಕಾಗಿ ಇಂಡಿಪೆಂಡೆಂಟ್ ಡಿ.ಸಿ. ಅವರನ್ನು ನೇಮಕ ಮಾಡಬೇಕೆಂಬ ಸೂಚನೆಯನ್ನು ಈ ಬಿಲ್‌ನಲ್ಲಿ ತಂದಿದ್ದೀರಿ. ಇದರಿಂದ ಹಣವನ್ನು ಲೂಟಿ ಮಾಡುವವರನೆಲ್ಲಾ ಒಂದೇಕಡೆ ಸೇರಿಸಿದಂತೆ ಮಾಡಿದಂತಾಗುತ್ತದೆ. ಇಂಡಿಪೆಂಡೆಂಟ್ ಡಿ.ಸಿ. ಒಬ್ಬರನ್ನು ಇದಕ್ಕಾಗಿ ನೇಮಕ ಮಾಡಿ ಅವರಿಗೆ ಮ್ಯಾಜಿಸ್ಟ್ರೇಟ್ ಪವರ್ ಕೂಡ ಕೊಡುತ್ತಿದ್ದೀರಿ. ತಪ್ಪಿತಸ್ಥರನ್ನು ಹಿಡಿಯುವವರನ್ನು, ಹಿಡಿದ ಬಗ್ಗೆ ಸಾಕ್ಷಿ ಹೇಳುವವರನ್ನು ಮತ್ತು ಶಿಕ್ಷೆ ವಿಧಿಸುವವರನ್ನು, ಒಂದೇ ಇಲಾಖೆಗೆ ಸೇರಿಸುತ್ತಿರುವುದು ನೋಡಿದರೆ ಬಹಳ ಆಶ್ಚರ್ಯವಾಗಿ ಕಾಣುತ್ತಿದೆ. ತಮಗೆ ಬೇಕಾದವರನ್ನು ನೇಮಕ ಮಾಡಲು ಈ ಹುದ್ದೆಯನ್ನು ರಚಿಸುತ್ತಿದ್ದೀರೆಂದು ಕಾಣುತ್ತದೆ. ಹೊಸ ಡಿ.ಸಿ., ಅಸಿಸ್ಟೆಂಟ್ ಡಿ.ಸಿ., ಎಕ್ಸೈಜ್ ಇನ್ಸ್‌ಪೆಕ್ಟರ್ ಎಲ್ಲಾ ಒಂದೇ ಇಲಾಖೆಯಲ್ಲಿ ಇದ್ದರೆ ಬಹಳ ಲೋಪದೋಷಗಳಾಗುತ್ತವೆಂದು ಈಗಾಗಲೇ ಮಾನ್ಯ ಸದಸ್ಯರು ಹೇಳಿದ್ದಾರೆ. ಆದ್ದರಿಂದ ಈ ಇಲಾಖೆಯ ಬಗ್ಗೆ ಇಂಡಿಪೆಂಡೆಂಟ್ ಅಥಾರಿಟಿ ಇದ್ದರೆ ಒಳ್ಳೆಯದೇ ಅಥವಾ ಕೆಟ್ಟದ್ದೇ ಎಂಬುದನ್ನು ಮಾನ್ಯ ಮಂತ್ರಿಗಳು ವಿಚಾರ ಮಾಡಬೇಕು. ಕಳ್ಳಭಟ್ಟಿ ತಯಾರಿಕೆಗೆ ಪೋಲೀಸರೇ ಕುಮ್ಮಕ್ಕು ಕೊಡುತ್ತಿದ್ದಾರೆ. ಇದನ್ನು ಬಡ ಜನರು ಕುಡಿದು ಸಾಯುತ್ತಿದ್ದಾರೆ. ಇದನ್ನು ಪೋಲೀಸರು ಸಹ ಕುಡಿಯುತ್ತಿರುವುದರಿಂದ ಇವರ ತಯಾರಿಕೆಯನ್ನು ನಿಲ್ಲಿಸಲು ಸರ್ಕಾರಕ್ಕೂ ಕೂಡ ಕಷ್ಟವಾಗುತ್ತದೆಂದು ಹೇಳುತ್ತೇನೆ. ಯಾರು ಹಿಡಿಯುವುದಕ್ಕೆ ಹೋಗುತ್ತಾರೆ ಅವರೇ ಕುಡಿಯುವುದರಿಂದ ಇದನ್ನು ತಡೆಗಟ್ಟುವುದಕ್ಕೆ ಸರ್ಕಾರಕ್ಕೆ ಸಾಧ್ಯವಾಗುವುದಿಲ್ಲವೆನ್ನುವ ಮಾತನ್ನು ನಾನು ಕಡಾಖಂಡಿತವಾಗಿ ಹೇಳುತ್ತೇನೆ. ಈ ತಿದ್ದುಪಡಿಯಲ್ಲಿ ಯಾರು ಕಳ್ಳಭಟ್ಟಿ ತಯಾರು ಮಾಡುತ್ತಾರೋ ಅಥವಾ ತಯಾರು ಮಾಡಿದ್ದನ್ನು ಯಾರು ಬೇರೆ ಕಡೆಗೆ ಸಾಗಿಸುತ್ತಾರೋ ಅಂತಹವರಿಗೆ 200 ರೂಪಾಯಿಗಳವರೆಗೆ ಜುಲ್ಮಾನೆ ವಿಧಿಸುವುದಕ್ಕೆ ಅವಕಾಶವಿದೆ. ಈ 200 ರೂಪಾಯಿಗಳನ್ನು 1,000 ರೂಪಾಯಿಗಳಿಗೆ ಹೆಚ್ಚಿಸಬೇಕೆಂದು ನಾನು ಒಂದು ತಿದ್ದುಪಡಿಯನ್ನು ತಂದಿದ್ದೇನೆ. ಇದನ್ನು ಒಪ್ಪಿಕೊಳ್ಳುತ್ತಾರೆಂದು ನಾನು ನಂಬಿದ್ದೇನೆ. ಅಫೆನ್ಸಸ್ ಬಗ್ಗೆ ಕಾಂಪೌಂಡಿಂಗ್ ಮಾಡಿಕೊಳ್ಳುವ ಅಧಿಕಾರವನ್ನು ಈ ಅಧಿಕಾರಿಗಳಿಗೆ ಕೊಟ್ಟಿರುವುದರಿಂದ ಅದರಿಂದ ಬರತಕ್ಕಂಥ ಹಣವನ್ನು ಅಧಿಕಾರಿಗಳು ತಮ್ಮ ಜೇಬಿಗೆ ಬಿಟ್ಟುಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಂತಾಗಿದೆ. ಇದರಿಂದ ಕರಪ್ಷನ್ ಜಾಸ್ತಿಯಾಗುವುದರಲ್ಲಿ ಯಾವ ಸಂದೇಹವೂ ಇಲ್ಲ. ಅದರಂತೆ ಬ್ರಿವರೀಸ್‌ನಲ್ಲಿ ನಿಮ್ಮ ಅಧಿಕಾರಿಗಳನ್ನು 200-300 ರೂಪಾಯಿಗಳ ಸಂಬಳ ಕೊಟ್ಟು ಇಟ್ಟಿರುತ್ತೀರಿ. ಅಲ್ಲಿಯ ಮಾಲೀಕರು ನಿಮ್ಮ ಅಧಿಕಾರಿಗಳಿಗೆ ದಿನಕ್ಕೆ 100-150 ರೂಪಾಯಿಗಳವರೆಗೆ ಲಂಚ ಕೊಟ್ಟು ತಮಗಿಷ್ಟು ಬಂದಷ್ಟು ತಯಾರು ಮಾಡಿ ಸರ್ಕಾರಕ್ಕೆ ಸರಿಯಾದ ಲೆಕ್ಕ ಕೊಡುತ್ತಿಲ್ಲ. ಕುರಿಕಾಯೋ ತೋಳಾ ಎಂದರೆ ಸಂಬಳ ಬೇಡ ಎಂದು ತೋಳಾ ಹೇಳಿದಂತೆ, ನಿಮ್ಮ ಅಧಿಕಾರಿಗಳಿಗೆ ನೀವು ಸಂಬಳ ಕೊಡದಿದ್ದರೂ ಕೂಡ ಅಲ್ಲಿ ಕೆಲಸ ಮಾಡುವುದಕ್ಕೆ ಇಷ್ಟ ಪಡುತ್ತಾರೆ. ಏಕೆಂದರೆ ಅವರಿಗೆ ಎಲ್ಲ ಅನುಕೂಲಗಳು ಸಹ ಇರುತ್ತವೆ. ಮಾಲೀಕರು ನಿಮ್ಮ ಅಧಿಕಾರಿಗಳಿಗೆ ಲಂಚ ಕೊಡುವುದರ ಮೂಲಕ ಬೇಕಾದಷ್ಟು ಲಾಭ ಮಾಡಿಕೊಳ್ಳುತ್ತಿದ್ದಾರೆಂದು ಈ ಸಂದರ್ಭದಲ್ಲಿ ಹೇಳಿದರೆ ತಪ್ಪಾಗಲಾರದು. ಇದೇ ರೀತಿ ಸಬ್‌ಲೀಸ್ ಮೂಲಕ ಶೇಂದಿ ಮಾರಾಟ ಮಾಡುತ್ತಿದ್ದಾರೆ. ಒಬ್ಬನ ಹೆಸರಿನಲ್ಲಿ ಕಂಟ್ರಾಕ್ಟ್ ಇರುತ್ತದೆ, ಆತ ಅನೇಕ ಜನರನ್ನು ನೇಮಕ ಮಾಡಿಕೊಂಡು ಒಂದು ರಿಂಗ್ ಮಾಡಿಕೊಂಡು ಸಬ್ ಲೀಸ್ ಮೂಲಕ ಮಾರಾಟ ಮಾಡುವುದಕ್ಕೆ ವ್ಯವಸ್ಥೆ ಮಾಡಿಕೊಂಡಿರುತ್ತಾರೆ. ಇದರಿಂದ ಸರ್ಕಾರಕ್ಕೆ ಅವರು ದ್ರೋಹ ಮಾಡಿದಂತಾಗುತ್ತದೆ. ಮತ್ತು ಬಡ ಜನತೆಗೂ ಕೂಡ ಅವರು ದ್ರೋಹ ಮಾಡಿದಂತಾಗುತ್ತದೆ. ಈ ಪದ್ಧತಿಯಿಂದ ಸರ್ಕಾರಕ್ಕೆ ಹೆಚ್ಚು ಹಣ ಲುಕ್ಸಾನಾದರೆ ಕಂಟ್ರಾಕ್ಟ್‌ದಾರರಿಗೆ

(ಶ್ರೀ ಟಿ. ಆರ್. ಶಾಮಣ್ಣ)

ಹೆಚ್ಚಿನ ಲಾಭವಾಗುತ್ತಿದೆ. ಅಂಗಡಿವಾರು ಹರಾಜು ಹಾಕಬೇಕೆಂದು ನಿಯಮವಿದ್ದರೂ ಕೂಡ ಆ ಬಗ್ಗೆ ಸರ್ಕಾರ ಹೆಚ್ಚಿನ ಆಸಕ್ತಿಯನ್ನು ವಹಿಸದೇ ಇರುವುದರಿಂದ ದೊಡ್ಡ ದೊಡ್ಡ ಕಂಟ್ರಾಕ್ಟ್ ದಾರರಿಗೆ ಬಹಳ ಅನುಕೂಲವಾಗಿದೆ. ಇದರಿಂದ ಸರ್ಕಾರಕ್ಕೆ ಬರುವ ವರಮಾನ ಬಹಳ ಕಡಿಮೆ ಯಾಗುತ್ತಿದೆಯೆಂದು ಒತ್ತಿ ಒತ್ತಿ ಹೇಳುತ್ತಿದ್ದೇನೆ. ಇವತ್ತು ಶೇಕಡ 80 ಭಾಗದಷ್ಟು ಶೇಂದಿ ವ್ಯಾಪಾರ ಸಬ್‌ಲೀಸ್ ಮೂಲಕವೇ ನಡೆಯುತ್ತಿದೆಯೆಂದು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಈಗ ತಂದಿರತಕ್ಕಂಥ ತಿದ್ದುಪಡಿಯ ಪ್ರಕಾರ ಅಧಿಕಾರಿಗಳು ಹೆಚ್ಚು ಲಂಚ ಹೊಡೆಯುವುದಕ್ಕೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. ಇದರಿಂದ ಸರ್ಕಾರಕ್ಕೆ ಯಾವ ರೀತಿಯಿಂದಲೂ ಕೂಡ ಲಾಭವಾಗುವುದಿಲ್ಲ. ಇವತ್ತಿನ ದಿವಸ ಪಾನನಿರೋಧವನ್ನು ಸಡಿಲಗೊಳಿಸಿರುವುದರಿಂದ ಮನೆ ಮನೆಯಲ್ಲೂ ಕೂಡ ಕಳ್ಳಭಟ್ಟಿ ತಯಾರಾಗುತ್ತಿದೆ. ಪಾನನಿರೋಧವನ್ನು ಜಾರಿಗೆ ತಂದಿದ್ದಾಗ ಯಾವ ರೀತಿ ಕಳ್ಳಭಟ್ಟಿ ತಯಾರಾಗುತ್ತಿತ್ತೋ! ಅದಕ್ಕಿಂತ ನಾಲ್ಕರಷ್ಟು ಹೆಚ್ಚು ಇವತ್ತಿನ ದಿವಸ ಕಳ್ಳಭಟ್ಟಿ ತಯಾರಾಗುತ್ತಿದೆ. ಇದರ ರೇಟು ಕಡಿಮೆ ಇರುತ್ತದೆ ಮತ್ತು ಕುಡಿದ ತಕ್ಷಣ ಮತ್ತು ಬರುತ್ತದೆಂಬ ಕಾರಣದಿಂದ ಬಡ ಜನರು ಇದನ್ನೇ ಕುಡಿಯುತ್ತಿದ್ದಾರೆ. ಈ ಕಳ್ಳಭಟ್ಟಿ ತಯಾರಿ ಕೆಯಲ್ಲಿ ನಿಮ್ಮ ಅಧಿಕಾರಿಗಳು ಕೂಡ ಶಾಮೀಲಾಗಿದ್ದಾರೆಂದು ಹೇಳುತ್ತೇನೆ. ಯಾರು ಕಳ್ಳಭಟ್ಟಿ ತಯಾರು ಮಾಡುತ್ತಾರೋ ಮತ್ತು ಅದನ್ನು ಕುಡಿದು ಸಿಕ್ಕಿಹಾಕಿಕೊಳ್ಳುತ್ತಾರೋ ಅಂತಹವರನ್ನು ಹಿಡಿದು ಅವರಿಗೆ ದಂಡ ಹಾಕುವ ಅಧಿಕಾರವನ್ನು ಎಕ್ಸೈಜ್ ಅಧಿಕಾರಿಗಳಿಗೇ ಕೊಡುತ್ತಿದ್ದೀರಿ. ಇದರಿಂದ ಜನರ ಶೋಷಣೆ ಹೆಚ್ಚಾಗುತ್ತದೆಯೇ ವಿನಃ ಸರ್ಕಾರಕ್ಕೆ ಹೆಚ್ಚಿನ ಆದಾಯಬರುವುದಿಲ್ಲ ವೆಂದು ಹೇಳುತ್ತೇನೆ. ಈ ರೀತಿಯ ದಂಡ ಹಾಕುವ ಅಧಿಕಾರ ಡಿ. ಸಿ. ಅವರಿಗೆ ಇರುವುದು ಒಳ್ಳೆಯದು ಇದರ ಬದಲು ಪೂರ್ಣ ಅಧಿಕಾರವನ್ನು ಅದೇ ಇಲಾಖೆಯ ಅಧಿಕಾರಿಯವರಿಗೆ ಕೊಡು ವುದರಿಂದ ಅಧಿಕಾರದ ದುರುಪಯೋಗ ಹೆಚ್ಚಾಗುವುದಕ್ಕೆ ಅವಕಾಶವಾಗುತ್ತದೆಂದು ಈಗಾಗಲೇ ನಮ್ಮ ಸ್ನೇಹಿತರು ಹೇಳಿದ್ದಾರೆ. ಈ ಒಂದು ತಿದ್ದುಪಡಿಯಿಂದ ಸಾಮಾನ್ಯ ಜನರಿಗೆ ಅನುಕೂಲ ವಾಗದೇ ಇರುವುದರಿಂದಲೂ ಮತ್ತು ಲಂಚರುಷುವತ್ತು ಹೆಚ್ಚಾಗುವುದಕ್ಕೆ ಅವಕಾಶವಾಗಿರುವುದ ರಿಂದಲೂ ನಾನು ಇದನ್ನು ಪೂರ್ಣವಾಗಿ ವಿರೋಧಿಸುತ್ತಾ ನಾನು ಈ ಬಗ್ಗೆ ತಂದಿರತಕ್ಕಂಥ ಕೆಲವು ತಿದ್ದುಪಡಿಗಳನ್ನು ಒಪ್ಪಿಕೊಳ್ಳಬೇಕೆಂದು ಮಾನ್ಯ ಮಂತ್ರಿಯವರನ್ನು ಹಾಗೂ ಮಾನ್ಯ ಸದಸ್ಯರುಗಳನ್ನು ಕೇಳಿಕೊಂಡು ನನ್ನ ಎರಡು ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಹಮೀದ್‌ಷಾ (ಶಿವಾಜಿನಗರ).—ಮಾನ್ಯ ಅಧ್ಯಕ್ಷರೇ, ಈಗ ನಮ್ಮ ಸಚಿವರು ಮಂಡಿಸಿರುವ ಬಿಲ್ಲನ್ನು ವಿರೋಧ ಮಾಡುತ್ತಾ ಕೆಲವು ಮಾತುಗಳನ್ನು ಹೇಳುತ್ತೇನೆ. ನನ್ನ ಕ್ಷೇತ್ರ ದಲ್ಲಿ ಶೇಂದಿ, ಅರ್ರ್ಯಾಕ್ ಮತ್ತು ಬೀರ್‌ನ ಅಂಗಡಿಗಳು ಹೆಚ್ಚಾಗುತ್ತಿವೆ, ಅವುಗಳನ್ನು ಕಡಿಮೆ ಮಾಡಬೇಕೆಂದು ನಾನು ಮೊನ್ನೆ ಮಾನ್ಯ ಸಚಿವರಿಗೆ ಒಂದು ಕಾಗದ ಬರೆದಿದ್ದೆ. ಅದಕ್ಕೆ ಮಾನ್ಯ ಮಂತ್ರಿಗಳು ಅಂಗಡಿಗಳನ್ನು ಕಡಿಮೆ ಮಾಡುವುದಾಗಿ ಜವಾಬು ಬರೆದಿದ್ದರು. ಆ ಪತ್ರವನ್ನು ತೆಗೆದುಕೊಂಡು ಹೋಗಿ ಜಿಲ್ಲಾಧಿಕಾರಿಯವರಿಗೆ ತೋರಿಸಿದಾಗ ಅವರು ಆ ಪತ್ರವನ್ನು ಎಕ್ಸೈಜ್ ಕಮೀಷನರ್ ಅವರಿಗೆ ತೋರಿಸಿ ಎಂದು ಹೇಳಿದರು. ಅದರಂತೆ ನಾನು ಅವರಲ್ಲಿಗೆ ಹೋಗಿ ತೋರಿಸಿ ದಾಗ ಅವರು ಹೇಳಿದರು, ಸಚಿವರೇನೋ ಕಾಗದ ಬರೆದುಬಿಡುತ್ತಾರೆ, ಕಾರ್ಯಕ್ರಮ ತೆಗೆದು ಕೊಳ್ಳುವವರು ನಾವು ತಾನೆ ಎಂಬುದಾಗಿ, ಅಲ್ಲದೆ ಈ ವಿಚಾರವಾಗಿ ಸರಿಯಾದ ಗಮನ ಕೊಡ ದಿದ್ದರೆ ಒಂದು ಅಂಗಡಿಯೂ ಕೂಡ ಇಲ್ಲಿ ನಡೆಯಲಾರದು ಎಂಬುದಾಗಿ ಕೂಡ ಅವರು ಹೇಳಿದರು. ಬ್ರಿಟಿಷರ ಕಾಲದಲ್ಲಿ ಬ್ರಾಡ್ವೇ ಲೈನ್‌ನಲ್ಲಿ ಒಂದು ಅಂಗಡಿ ಇದ್ದರೆ ಇವತ್ತಿನ ದಿವಸ ಅಲ್ಲಿ ನಾಲ್ಕೈದು ಅಂಗಡಿಗಳಿವೆ. ಒಂದೊಂದು ಜಾತಿಯ ಡ್ರಿಂಕ್ಸನ್ನು ವ್ಯಾಪಾರ ಮಾಡಲು ಒಂದೊಂದು ಅಂಗಡಿಗಳಿವೆ. ಅಲ್ಲಿರುವ ಜನರು ಬೆಳಿಗ್ಗೆ ಸಮಯದಲ್ಲಿ ಗಾಂಧಿ ಟೋಪಿ ಹಾಕಿ ಕೊಂಡಿದ್ದರೆ ಸಾಯಂಕಾಲದ ಸಮಯದಲ್ಲಿ ಶೇಂದಿ ಟೋಪಿ ಹಾಕಿರುತ್ತಾರೆ. ಹಿಂದಿನ ಕಾಲದಲ್ಲಿ ನಾವು ಮಹಾತ್ಮಗಾಂಧೀಕಿ ಜೈ, ಹೆಂಡದ ಅಂಗಡಿಗಳು ಹೋಗಬೇಕು ಎಂದು ಘೋಷಣೆಗಳನ್ನು ಕೂಗುತ್ತಿದ್ದೆವು. ಆದರೆ ಇವತ್ತು ಪಾನನಿರೋಧವನ್ನು ತೆಗೆದುಹಾಕಿದ್ದಾರೆ. ಇದರಿಂದ ಬಡ ಜನರು ಕಳ್ಳಭಟ್ಟಿಯನ್ನು ಕುಡಿದು ಸಾಯುತ್ತಿದ್ದಾರೆ. ನಿಜವಾಗಿಯೂ ಸರ್ಕಾರದವರು ಬಡ ಜನರಿಗೆ ಒಳ್ಳೆಯದನ್ನು ಮಾಡುತ್ತಿದ್ದಾರೆಯೇ ಎಂಬುದನ್ನು ಯೋಚನೆ ಮಾಡಲಿ. ಯಾರು ಕಳ್ಳಭಟ್ಟಿ ತಯಾರು ಮಾಡುವವರನ್ನು ಹಿಡಿಯುತ್ತಾರೋ ಅವರಿಗೆ ಜ್ಯುಡಿಷಿಯಲ್ ಪವರ್‌ನ್ನು ಸಹ ಈ ಬಿಲ್‌ನಲ್ಲಿ ಕೊಡುತ್ತಿದ್ದಾರೆ. ನಮ್ಮ ಉರ್ದುವಿನಲ್ಲಿ ಒಂದು ಗಾದೆ ಇದೆ. ಅದರ ಪ್ರಕಾರ ಚೋರನನ್ನು ಹಿಡಿಯುವುದಕ್ಕೆ ಆಫೀಸರನ್ನು ಇಟ್ಟಿದ್ದೀರೋ ಅಂತಹವರೇ ಕುಡಿಯುತ್ತಿದ್ದಾರೆ.

ಇಂಥ ಕಾನೂನನ್ನು ತರುವಾಗ, ಸ್ವಲ್ಪ ಯೋಚನೆಮಾಡಬೇಕು. ಕಾನೂನನ್ನು ತರುವಾಗ ಅದರಿಂದ ಸಾಮಾನ್ಯ ಜನರಿಗೆ ಒಳ್ಳೆಯದಾಗುತ್ತದೆಯೇ, ಕೆಟ್ಟದ್ದಾಗುವುದೇ ಎಂಬುದನ್ನು ಗಮನಿಸಬೇಕು. ಜುಲ್ಮಾನೆ ಹಾಕುವವರೇ ತಪ್ಪುಮಾಡುವವರನ್ನು ಹಿಡಿಯುವರು ಈ ಬಗ್ಗೆ ಕಾನೂನಿನ ಸಾಧಕಬಾಧಕಗಳನ್ನು ಮತ್ತೊಮ್ಮೆ ಯೋಚನೆಮಾಡುವುದು ಒಳ್ಳೆಯದು.

5-00 P.M.

ಇನ್ನೊಂದು ಮಾತು. ಬ್ರಾಡ್‌ವೇ ವಿಚಾರ. ಬೆಂಗಳೂರು ಕಂಟೋನ್ಮೆಂಟಿನಲ್ಲಿ ಒಂದು ದೊಡ್ಡ ಚರಂಡಿಯಿದೆ, ಅದಕ್ಕೆ ಮೇನ್ ಛಾನಲ್ ಎಂದು ಹೆಸರು. ಅದನ್ನು ಮುಚ್ಚಿ ಅದರಮೇಲೆ ಗುಡಿಸಲುಗಳನ್ನು ಹಾಕಿ ಮಾರುವುದಕ್ಕೆ ಲೈಸೆನ್ಸ್ ಕೊಟ್ಟಿದ್ದಾರೆ. ಅಲ್ಲಿ ಒಂದು ಪಕ್ಕದಲ್ಲಿ ದೇವಸ್ಥಾನವಿದೆ, ಇನ್ನೊಂದು ಪಕ್ಕದಲ್ಲಿ ಹೈಸ್ಕೂಲಿದೆ, ಅಂಥ ಕಡೆ ಹೆಂಡದ ಅಂಗಡಿಗೆ ಲೈಸೆನ್ಸ್ ಕೊಟ್ಟಿದ್ದಾರೆ. ಕಂಟ್ರಾಕ್ಟರುಗಳಿಗೆ ತಕರಾರಿರುವ ಕಡೆ ಹೀಗೆ ಮಾಡಿ ಕಷ್ಟ ಕೊಡುತ್ತಿದ್ದಾರೆ. ಅದುದರಿಂದ ಒಂದು ದಿನ ಒಂದು ಗಂಟೆ ಕಾಲ ಮಾನ್ಯ ಮಂತ್ರಿಗಳು ನನ್ನ ಸಂಗಡ ಬಂದು ನೋಡಿ ಸರಿಪಡಿಸಬೇಕೆಂದು ನಾನು ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಹೀಗೆ ನಡೆಯುವುದು ಸರಿಯೆ ಎಂಬುದನ್ನು ಯೋಚನೆಮಾಡಬೇಕು.

ಇನ್ನೊಂದು, ಜುಡಿಷಿಯಲ್ ಅಧಿಕಾರ ಯಾರಿಗಿರಬೇಕು ? ಫಸ್ಟ್ ಅಥವ ಸೆಕೆಂಡ್ ಕ್ಲಾಸ್ ಮ್ಯಾಜಿಸ್ಟ್ರೇಟರ ಹತ್ತಿರ ಹೋಗುವುದಕ್ಕೆ ಅವಕಾಶವಿದೆ, ಇದರಿಂದ ಜನರಿಗೆ ಕೆಡಕಾಗುವುದು, ಒಳ್ಳೆಯದಾಗುವುದಿಲ್ಲ! ಆದುದರಿಂದ ಈ ಬಿಲ್ಲನ್ನು ವಾಪಸು ತೆಗೆದುಕೊಂಡು ಒಳ್ಳೆಯದನ್ನು ತರಬೇಕು.

ಇನ್ನೊಂದು ಮಾತು ಹೇಳುವುದು ಹರಿಜನರಿಗೆ ಒಳ್ಳೆಯದನ್ನು ಮಾಡುವುದಾಗಿ ಕೆಲವು ಕ್ರಮ ತೆಗೆದುಕೊಂಡಿರಿ. ಆದರೆ ಅವರೇ ಜಾಸ್ತಿ ಇರುವ ಕಡೆ ಗುಡಿಸಲು ಹಾಕಿ ಅಂಗಡಿ ಇಟ್ಟು ಅವರನ್ನು ಕೆಡಿಸುತ್ತಿದ್ದಾರೆ. ಇದು ಯಾವ ನ್ಯಾಯ ? ಮುಂದಿನ ತಿಂಗಳು ಗಾಂಧಿಯವರು ಹುಟ್ಟಿದ ದಿನ ಬರುವುದು, ಆಗ ಅವರು ಹೇಳಿರುವಂತೆ ನಡೆದುಕೊಳ್ಳುವುದು ಸೂಕ್ತ. ಬ್ರಾಡ್‌ವೇ ಅಂಗಡಿ ಮುಂದೆ ಯಾವರೀತಿ ವಿರೋಧ ಸೂಚಿಸಬೇಕು ಎಂಬುದನ್ನು ಆಗ ಪ್ರದರ್ಶಿಸಬೇಕೆಂಬ ಅಭಿಲಾಷೆಯಿದೆ. ಅದಕ್ಕೆ ಯೋಚನೆಮಾಡಿದ್ದೇನೆ. ಸಚಿವರು ತಂದಿರುವ ಬಿಲ್ಲನ್ನು ನಾನು ಮೇಲೆ ಹೇಳಿದ ಕಾರಣಗಳಿಂದ ವಿರೋಧಿಸುತ್ತೇನೆ.

SRI H. SIDDAVEERAPPA (Harihar).—Sir, I had really no intention to participate in this debate. But for the fact that after examining some of the various clauses of this Bill and on hearing the hon. Member Sri Aithal who made a very lucid speech on the Bill, I pondered over it and I thought that I would be failing in my duty if I do not bring to the notice of this House certain of the important provisions that are sought to be imported into this Bill by amendments.

Firstly, this Bill intends to replace the Ordinance issued by the Governor. This Government, ever since it has come into power, has been specialising in trying to put certain provisions by means of an Ordinance ignoring the limitations under Article 213 of the Constitution. This is the much abused Article by this Government for the reason that without applying their mind whether there is any imminent need for introducing an Ordinance, recklessly and in a thoughtless manner they to put some provisons which should normally come first before the Legislature and after discussion and approval brought into the Statute Book. The imminent reason given for the Ordinance was that certain financial losses would have been incurred by the Treasury and in order to safeguard the finances of the State they issued this Ordinance. I have the copy of Ordinance itself. But what has happened is that the measures which were already there have been put here. Take

(SRI H. SIDDAVEERAPPA)

for instance, some of the clauses offend the normal protections given under the Criminal Procedure Code. Some of these things, I am afraid, ought to have been placed for the concurrence or assent of the President. The scope of Article 213, as we all know, requires that the Governor must be satisfied that circumstances exist where immediate action is necessary by promulgating an Ordinance. I am asking the Hon. Minister, by way of an explanation, would Heaven have fallen down if some of these provisions introduced here, were not put by means of an Ordinance?

Take for instance, clause 5 regarding Constitution of an Intelligence Bureau. Then take for instance some of the powers that you have given to the Excise Officers, *viz.*, the power of investigation, the power of detection and trial of offences an unheard thing in the history of any country where the investigator, the complainant, the Judge and the prosecutor all put together in the hands of one man except in the case of Sri Ramakrishna Hegde. As far as I know, I was a practising lawyer for a good number of years. What was happening in these cases was that the Excise Inspector should go and actually seize under a mahajar some of the articles used for the manufacture of illicit liquor. There must be a mahajar having local witnesses. I do not know whether the Hon. Minister has any experience of Court? Our police friends have a set of people and they are called as police witnesses. If we want to examine them, some Magistrates have also observed it, supposing there are 25 mahajars, in all of them the same Marulappa, Basappa etc. will be the witnesses and those witnesses are known to us. That is why advisedly and designedly put down by the Criminal Procedure Code that whenever there is a mahajar there must be two witnesses of the locality and then alone certain sanctity would be attached to it. Thus you are encroaching upon some of the civil rights of the citizens and taking away the privileges of the citizens guaranteed under the Criminal Procedure Code.

Take for instance, some of the provisions, *viz.*, Clauses 5, 7, 13, 17, 18 and 21. Some of these clauses require far radical changes because they curtail the civil liberties of the people. How have you done it? If tomorrow it is challenged in a Court of law stating that this offends some of the provisions of the Criminal Procedure Code and certain things are brought here ignoring what has been laid down in Article 213 then I should say this very Act may be impuned in a Court of Law. In order to perpatuate the capitalistic class this thing has been done. For instance, a man may take the entire excise sale for the whole State. Then he may go on distributing them village by village, hobli by hobli to anybody whosoever he likes. Hitherto this kind of sub-lease was not permissible. Now our Hon. Minister wants to make it easy that is the purpose with which some of the clauses have been put here.

Sri RAMAKRISHNA HEGDE.—May I draw the attention of the hon. Member to Section 17 of the present Act where there is no bar on any lessee transferring his lease. This is only with a view to see that this is legalised......

Sri H. SIDDAVEERAPPA.—Here are certain powers given under sub-clause (2) of clause 5. They have created two posts of Superintendents of Excise (Intelligence Bureau) for a district or part of a district or for more than one district to exercise the powers relating to detection, investigation and trial of offences under this Act. We know if the same powers are in the same department what is going to happen? The powers of the Revenue and Police Departments are now sought to be taken away and concentrated in the excise people. They can do and undo things. Tomorrow they can come and say "You have manufactured certain illicit liquor a monthback". He may bring witnesses and haul me up. All that they should do is to catch hold of certain articles just then. It is relevent to bring to the notice of the hon. Members Section 103 (1) of the Criminal Procedure Code. It says:

> "(1) Before making a search under this Chapter, the officer or other person about to make it shall call upon two or more respectable inhabitants of the locality in which the place to be searched is situate to attend and witness the search and may issue an order in writing to them or any of them so to do.
>
> (2) The search shall be made in their presence, and a list of all things seized in the course of such search and of the places in which they are respectively found shall be prepared by such officer or other person and signed by such witnesses; but no person witnessing a search under this section shall be required to attend the Court as a witness of the search unless specially summoned by it."

Now the Hon. Minister for Excise wants to get rid of local witnesses. Probably he wants to have appointed in his own way at least two witnesses for each place. If they come and say, "we found Aithal carrying these things" it is enough. That is the thing that is worrying everyone.

As regards sub-lease I have already said about it. By it the entire country will be brought to ransom so far as excise administration is concerned.

Under sub-clause (1) of clause 13 they want to get rid of the Police and Revenue Departments which is not correct. There must be checks and counter checks. The excise people must come in only as prosecutors. If they come in as prosecutors, the judge must be from the Revenue or Judicial cadre. Then only there will be safety for the people.

Then it is provided that the word 'for' shall be substituted for the words 'found committed'. I oppose this amendment. The words 'found committed' have far greater significance. If it is simply stated 'for'

(SRI H. SIDDAVEERAPPA)

somebody may come and say, "A month back I found this man doing this" and it is sufficient evidence.

Under clause 18, if some man from the Excise Department is trained and if he issues a certificate it is enough. The official class will not let down one belonging to their class. They will try to see that the interest of the Department is safeguarded. I think this is a clause which is bound to do great harm.

There is another provision which says that if a man is to be prosecuted or a suit is to be filed, one month's notice will have to be given. Within a month you want to harass him and see that he does not go to a court of law. I really do not know why it is necessary.

Taking all these things into consideration, I personally feel that this Government being unable to face the legislature and get a thing done want to indulge in passing ordinances and bringing it before the House depending upon the brute majority which they enjoy for the time being because they know that whatever they wish to bring in there, are people who are willing to agree to them. Therefore, I oppose all the provisions except the one relating to litre fee which has a semblance of reasoning behind it. Nothing would have happened if all these things had been brought before the House in the form of a normal Bill and we were asked to apply our minds to it. Therefore Sir, I feel that this is a fit case where even now the matter will have to go before a Joint Select Committee. The Minister was pleased that this is a very simple matter. I can understand if it is only litre fee which brings more revenue to the State. The other day while I was going in avanagere, an ex-Municipal Councillor met me and said that, look here this is my house and just by the side of it they have located a liquor shop. Ladies cannot go to the tap even to get water. The matters have gone to such an extent : only they do not open your mouth and put liquor into it. The other day while I was in the Legislators' Home, some people came to me. They said : "Sir, I bought some liquer and each time they give one quarter measure less. If I tell the excise authorities, they do not care. If I go to the Minister, he does not heed to us. Nobody heeds. What shall we do ? I said, why don't you give up drinking. I cannot do it, sir. We are habituated to it, Although we are giving a huge revenue to the State, they are always giving under-measure". They use chemicals which is injurious to our health. Something is added before bottling it. I do not know what is going to happen to the country's morals ! There are no morals at all.

Now through these provisions, you want to see that the freedom given to the people to go to normal court of law and seek relief, are taken away. I therefore feel sir, that this measure fit to be condemned by all sections of the House. More particularly, it is an indication of how things are moving in this country. Something is happening in the Excise Department. We cannot explain this. If it is a normal business

transaction, let anybody do it. We do not come in the way. But now the Government is trying to do certain things in a surruptious manner which would bring some sort of a revenue to the State. It is about this that one must be very careful. I certainly feel, it is not so simple as this. Secondly, it is agreed on all hands that these provisions do more harm than good. It affects not only the people who drink but even those who do not drink. If you want to wreak vengence on anybody, this measure comes in very handy. This is an attempt by which Government is trying to make foolproof arrangement to threaten everybody and they are trying to see that all sorts of illegal things are regularised.

I therefore oppose this. I request the Minister and in all fairness, he may refer it to the Joint Select Committeese so that they may examine the provisions made in this Bill and suggest suitable amendments, or if somethiug more has to be done, it can be done. All this can be done only after some deliberations in the Joint Select Committee. This is a Bill which in the fitness of things, deserves to go before a Joint Select Committee.

†ಶ್ರೀ ಎಸ್.ಎಸ್. ಅರಕೇರಿ (ಬಳ್ಳೊಳ್ಳಿ).—ಮಾನ್ಯ ಅಧ್ಯಕ್ಷರೆ, ತಾವು ಹೇಳಿದ ಪ್ರಕಾರ ನಾನು ಕೇವಲ 5 ನಿಮಿಷಗಳಲ್ಲೇ ಮಾತನಾಡಿ ಮಾನ್ಯ ಅಧ್ಯಕ್ಷರಿಗೆ ಹಾಗೂ ಮಂತ್ರಿಗಳಿಗೆ ನಾನಾ ವಿಚಾರಗಳ ಬಗ್ಗೆ ಅವರ ಗಮನವನ್ನು ಸೆಳೆಯಲಿಚ್ಛಿಸುತ್ತೇನೆ. ಈಗಾಗಲೇ ಅನೇಕ ಮಾನ್ಯ ಸದಸ್ಯರು ಈ ವಿಷಯದ ಮೇಲೆ ಮಾತನಾಡಿದ್ದಾರೆ. ನಾನು ಇದರ ಬಗ್ಗೆ ಒಂದೆರಡು ಸೂಚನೆಗಳನ್ನು ಕೊಡಲಿಕ್ಕೆ ಬಯಸುತ್ತೇನೆ. ಏನೆಂದರೆ ಈ ಕುಡಿತ ಒಂದು ಚಟ ದಿನೇ ದಿನೇ ಹಳ್ಳಿಗಳಲ್ಲಿ ಹೆಚ್ಚಾಗುತ್ತದೆ. ಈಗ ಸೇಂದಿ ಅಂಗಡಿಗಳು ಮುಖ್ಯವಾಗಿ ಹಳ್ಳಿಗಳಲ್ಲಿ ಹರಿಜನರ ಕೇರಿಗಳು ಎಲ್ಲೆಲ್ಲಿ ಇವೆಯೋ ಅದರ ಪಕ್ಕದಲ್ಲಿಯೇ ಸೇಂದಿ ಅಂಗಡಿಗಳನ್ನು ಇಟ್ಟು ಮಾರುತ್ತಿದ್ದಾರ. ಈ ಹರಿಜನರ ಗುಡಿಸಲ ಪಕ್ಕಗಳಲ್ಲಿ, ಅಥವಾ ಕೇರಿಗಳಲ್ಲೇ ಈ ಅಂಗಡಿಗಳನ್ನು ತೆಗೆಯುವುದರಿಂದ ಬಹಳ ದುಷ್ಪರಿಣಾಮವಾಗುತ್ತದೆ. ಆದುದರಿಂದ ಮಾನ್ಯ ಮಂತ್ರಿಗಳ ಗಮನಕ್ಕೆ ತರುವುದು ಊರಿನ 3–4 ಫರ್ಲಾಂಗ್ ದೂರದಲ್ಲಾಗಲಿ ಅಥವಾ ಹರಿಜನರ ಕೇರಿಗೆ 3–4 ಫರ್ಲಾಂಗ್ ದೂರದಲ್ಲಾಗಲಿ ಸೇಂದಿ ಅಂಗಡಿಗಳನ್ನು ತೆರೆಯಲಿಕ್ಕೆ ಸರ್ಕಾರದವರು ಆದೇಶ ಕೊಡಬೇಕು. ಹಳ್ಳಿಗಳಲ್ಲಿ, ಗುಡಿಸಲುಗಳಲ್ಲಿ, ಚಾವಡಿಗಳಲ್ಲಿ ಮಡಕೆಗಳಲ್ಲಿ, ಹಳೆ ಪಾತ್ರೆಗಳಲ್ಲಿ ಸೇಂದಿಯನ್ನು ಇಟ್ಟುಕೊಂಡು ಮಾರುತ್ತಿದ್ದಾರೆ. ಈ ರೀತಿ ಮಾರುತ್ತಾ ಇರುವುದು ಜನತೆಯ ಆರೋಗ್ಯದ ದೃಷ್ಟಿಯಿಂದ ಬಹಳ ಹಾನಿಕರವಾದುದು. ಇದಕ್ಕೆ ನಾನು ಸೂಚನೆ ಮಾಡುವುದು ಏನೆಂದರೆ ಈ ಬೀರು ಬ್ರಾಂದಿ ಷಾಪುಗಳು ಯಾವರೀತಿ ಇವೆಯೋ, ಅಲ್ಲಿಗೆ ಜನ ಹೋಗಿ ಗೌರವಯುತವಾಗಿ ಕೂತುಕೊಂಡು ಕುಡಿಯುತ್ತಾರೋ, ಅದೇರೀತಿ ಈ ಸೇಂದಿ ಷಾಪುಗಳನ್ನೂ ಸಹ ಊರಿನ 3–4 ಫರ್ಲಾಂಗ್ ದೂರದಲ್ಲಿ ಅಂಗಡಿಗಳನ್ನು ಕಟ್ಟಿ ಅಲ್ಲಿ ಉತ್ತಮವಾದ ಫರ್ನಿಚರ್‌ಗಳನ್ನು ಹಾಕಿ ಉತ್ತಮವಾದ ವ್ಯವಸ್ಥೆ ಮಾಡಿಕೊಡುವಂತ ಕಂಟ್ರಾಕ್ಟರಿಗೆ ಆದೇಶ ಕೊಟ್ಟರೆ ಅಲ್ಲಿಗೆ ಜನಗಳು ಬಂದು ಒಂದು ಶಿಸ್ತಿನಿಂದ ಕುಡಿದುಕೊಂಡು ಹೋಗುತ್ತಾರೆ. ಈವೊತ್ತಿನ ಪರಿಸ್ಥಿತಿಯಲ್ಲಿ ಅವರಿಗೆ ಈ ಒಂದು ರಕ್ಷಣೆ ಕಡಿಮೆ ಇದೆ.

ಶ್ರೀ ಜಿ. ಚಂದ್ರಕಾಂತ್.—ಸೇಂದಿ ಷಾಪ್‌ಗಳನ್ನು ಕಟ್ಟಿ ಸರ್ಕಾರದವರೇ ಮಾರಿದರೆ ಏನಾಗುತ್ತದೆ ?

ಶ್ರೀ ಎಸ್. ಎಸ್. ಅರಕೇರಿ.—ಈವೊತ್ತಿನ ದಿವಸ ಸಮಾಜದಲ್ಲಿ ಇರುವ ಪರಿಸ್ಥಿತಿಯನ್ನು ನಾವು ಕಾಣುತ್ತಾ ಇರುವುದು ಹರಿಜನರು ದಿನವೊಂದಕ್ಕೆ 8 ಆಣೆ, 1 ರೂಪಾಯಿ ಕೂಲಿಯನ್ನೂ ಏನು ಸಂಪಾದನೆ ಮಾಡುತ್ತಿದ್ದಾರೋ ಅದರಿಂದ ಜೀವನ ಮಾಡದೆ, ಹೆಂಗಸರನ್ನೂ, ಮಕ್ಕಳನ್ನು ಹೊಡೆದು ಅದನ್ನು ಕುಡಿತಕ್ಕೆ ಹಾಕುತ್ತಿದ್ದಾರೆ. ಈ ಹರಿಜನರ ಸಲುವಾಗಿಯೇ ಗಾಂಧೀಜಿಯವರು ಈ ಕುಡಿತವನ್ನು ಜಾರಿಗೆ ತರಬೇಡಿ ಎಂದು ಅವರ ಜೀವನದಲ್ಲಿ ಹೇಳಿದ್ದಾರೆ. ಈ ಕಾಂಗ್ರೆಸ್ ಸರ್ಕಾರದವರು ಹರಿಜನರ ಒಂದು ಆರ್ಥಿಕ ಪರಿಸ್ಥಿತಿಯನ್ನು ಅವರ ಸಮಾಜದ ಒಂದು ಕಲ್ಯಾಣ

(ಶ್ರೀ ಎಸ್. ಎಸ್. ಅರಕೇರಿ)

ವನ್ನು ಬಯಸದೆ ಮತ್ತು ಅವರ ಉದ್ಧಾರದ ಕಡೆಗೆ ಗಮನವನ್ನೂ ಕೊಡದೆ ಈ ಒಂದು ಕಾನೂನನ್ನು ತಿದ್ದುಪಾಟು ಮಾಡಿ ತಂದಿದ್ದಾರೆ. ನಾನು ಅನೇಕ ಬಾರಿ ಇದನ್ನು ವಿರೋಧಿಸಿದ್ದೇನೆ. ಈ ಏನು ಒಂದು ತಿದ್ದುಪಡಿ ತಂದಿದ್ದೀರೋ ಅದನ್ನು ಅವರ ಆರ್ಥಿಕ ದೃಷ್ಟಿಯಿಂದ ಹೇಳುವುದಾದರೆ ಹರಿಜನರು ತಮ್ಮ ಜೀವನವನ್ನು ಈ ಒಂದು ಮನೋ ರೋಗಕ್ಕೆ ಹಾಳು ಮಾಡಿಕೊಂಡಿದ್ದಾರೆ ಎಂದು ಹೇಳಬಹುದು. ಆದುದರಿಂದ ನಾನು ಮಾನ್ಯ ಮಂತ್ರಿಗಳಿಗೆ ಹೇಳುವುದು ಇದರ ಬಗ್ಗೆ ಗಮನ ಕೊಟ್ಟು ಕಂಟ್ರಾಕ್ಟರಿಗೆ ಸರಿಯಾದ ಒಂದು ಆದೇಶವನ್ನು ಕೊಡಬೇಕು, ಏನಂದರೆ ಸೇಂದಿ ಅಂಗಡಿಯು ಹರಿಜನರ ಕೇರಿಗೆ 3-4 ಫರ್ಲಾಂಗ್ ದೂರದಲ್ಲಿ ಇಟ್ಟು ಸರಿಯಾದ ಉತ್ತಮವಾದ ವ್ಯವಸ್ಥೆ ಮಾಡಿಕೊಡಬೇಕು ಎಂಬುದಾಗಿ. ಇಷ್ಟು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ಪಿ. ತಿಮ್ಮಯ್ಯ (ಬಸವನಗುಡಿ).—ಸ್ವಾಮಿ, ಈ ದಿವಸ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಭಟ್ಟಿ ಸಾರಾಯಿ ಬಗ್ಗೆ ಏನು ಒಂದು ಬಿಲ್ಲು ತಂದಿದ್ದಾರೋ ಅದು ನಿಜವಾಗಿಯೂ ನನಗಂತೂ ಚೆನ್ನಾಗಿಲ್ಲ ಎಂದು ಹೇಳುತ್ತೇನೆ. ಏತಕ್ಕೆಂದರೆ ಭಟ್ಟಿ ಸಾರಾಯಿ ಮಾರುವುದರಿಂದ ಬಡವರು ಕುಡಿದು ಅವರ ಬುದ್ಧಿಶಕ್ತಿ ಎಲ್ಲವೂ ಹಾಳಾಗುತ್ತಿದೆ. ಕಳ್ಳಭಟ್ಟಿ ತಯಾರಿಕೆಗೆ ಆಸಿಡ್ ಹಾಕಿ ಬೆರಕೆ ಮಾಡಿದರೆ ಪೆನಿಸಿಲಿನ್ ಇನ್‌ಜೆಕ್ಷನ್ ಹತ್ತಿದ ಹಾಗೆ ಮೆದುಳಿಗೆ ಹತ್ತುತ್ತದಂತೆ. ಇಂಥವುಗಳಿಂದ ಅನೇಕ ಸಂಸಾರಗಳು ಹಾಳಾಗುತ್ತಿವೆ, ಮನೆ ಮಕ್ಕಳು ಹಾಳಾಗುತ್ತಿವೆ. ಇಷ್ಟೇ ಅಲ್ಲ, ಸುತ್ತಮುತ್ತಲಿನ ಜನಗಳಿಗೆ ಬಹಳ ತೊಂದರೆಯಾಗುತ್ತದೆ. ಜನಗಳ ಬುದ್ಧಿವಂತಿಕೆ ಹಾಳಾಗುತ್ತಿದೆ, ಅವರಿಗೆ ಜ್ಞಾನ ತಿಳುವಳಿಕೆ ಬಾರದೆ ಹಾಳಾಗುತ್ತಿದ್ದಾರೆ. ಆದ್ದರಿಂದ ಈಗ ಸಭೆಯ ಮುಂದೆ ತಂದಿರುವ ತಿದ್ದುಪಡಿ ಒಳ್ಳೆಯದಲ್ಲ. ದೇವರು ಮಾನ್ಯ ಮಂತ್ರಿಗಳಿಗೆ ಒಳ್ಳೆಯ ಬುದ್ಧಿಯನ್ನು ಕೊಟ್ಟು ಇದನ್ನು ಅವರು ವಾಪಸು ತೆಗೆದುಕೊಳ್ಳುವುದಾದರೆ ನಾನು ಬಹಳ ಸಂತೋಷಪಡುತ್ತೇನೆ.

5-30 P.M.

ಮದ್ಯಪಾನದಿಂದ ಬಡ ಜನರು ಹಾಳಾಗಿದ್ದಾರೆ. ಹರಿಜನರು ಹಾಳಾಗಿದ್ದಾರೆ. ಈ ಮಸೂದೆಯನ್ನು ಮಾನ್ಯ ಮಂತ್ರಿಗಳು ತಂದಿರುವುದು ಚೆನ್ನಾಗಿಲ್ಲ. ಇದನ್ನು ವಾಪಸು ತೆಗೆದುಕೊಳ್ಳುವುದು ಒಳ್ಳೆಯದು. ಮಾನ್ಯ ಸದಸ್ಯರಾದ ಐತಾಳ್ ಅವರು ಮಾತನಾಡುವಾಗ ಕಂಟ್ರಾಕ್ಟರು ಮತ್ತು ಪೋಲೀಸರು ಬಹಳ ದುರ್ಮಾರ್ಗತನ ಮಾಡುತ್ತಾರೆಂದು ಹೇಳಿದರು. ಮಾನ್ಯ ಮಂತ್ರಿಗಳು ಒಳ್ಳೆಯ ರೀತಿಯಿಂದ ದುಡ್ಡು ತೆಗೆದುಕೊಂಡು ದೇಶಕ್ಕೆ ಉಪಕಾರ ಮಾಡಿದರೆ ನಮ್ಮ ರಾಜ್ಯ ರಾಮರಾಜ್ಯವಾಗುತ್ತದೆ. ರಾಮಕೃಷ್ಣ ಹೆಗಡೆ ಅವರು ರಾಮರು ಮತ್ತು ಕೃಷ್ಣರು ಎಂದು ಎರಡು ಒಳ್ಳೆಯ ಹೆಸರನ್ನು ಇಟ್ಟುಕೊಂಡಿದ್ದಾರೆ. ಅವರು ಒಳ್ಳೆಯದನ್ನು ಮಾಡುತ್ತಾರೆಂದು ನಂಬಿ ಕೊಂಡಿದ್ದೇನೆ. ಮಾನ್ಯ ಮಂತ್ರಿಗಳು ಈ ತಿದ್ದುಪಡಿ ಮಸೂದೆಯನ್ನು ವಾಪಸು ತೆಗೆದುಕೊಂಡರೆ ಒಳ್ಳೆಯದು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಈ ಮಸೂದೆಯ ಮೇಲೆ ಇಷ್ಟು ಹೊತ್ತು ಚರ್ಚೆಯಾಗುತ್ತದೆಂದು ತಿಳಿದುಕೊಂಡಿರಲಿಲ್ಲ; ಈ ತರಹ ಟೀಕೆಗಳು ಬರಬಹುದೆಂದು ಉದ್ದೇಶಪಟ್ಟಿರಲಿಲ್ಲ. ಈ ಮಸೂದೆಗೆ ಸಂಬಂಧಪಟ್ಟ ತತ್ವದ ಮೇಲೆ ಸ್ವಲ್ಪಮಟ್ಟಿಗೆ ಟೀಕೆ ಬಂದಿದೆ. ಬಹಳಷ್ಟು ಟೀಕೆ ಮಸೂದೆಗೆ ಸಂಬಂಧಪಡದ ವಿಷಯಗಳ ಮೇಲೆ ಬಂದಿದೆ. ಪಾನಪ್ರತಿಬಂಧ ಜಾರಿಗೆ ಬರಬೇಕೇ, ಬೇಡವೇ, ಅದರಿಂದ ಯಾವ ಲಾಭ ಯಾವ ಹಾನಿ, ಪಾನಪ್ರತಿಬಂಧದ ತತ್ವ ಹೇಗೆ, ಇದರ ಬಗ್ಗೆ ಚರ್ಚೆಗೆ ಈ ಮಸೂದೆಯ ಮೇಲೆ ಮಾತನಾಡುವಾಗ ಅವಕಾಶ ವಿಲ್ಲದೇ ಇದ್ದರೂ ಅದರ ಬಗ್ಗೆ ಈ ಸಭೆಯಲ್ಲಿ ಸಾಕಷ್ಟು ಚರ್ಚೆಯಾಗಿದೆ. ಈ ಸಭೆಯ ಒಪ್ಪಿಗೆಯ ಮೇಲೆಯೇ ನಾವು ಪಾನ ನಿರೋಧ ಕಾನೂನನ್ನು ತಿದ್ದುಪಡಿ ಮಾಡಿದ್ದೇವೆ. ಇದರ ಮೇಲೆ ಚರ್ಚೆ ಮಾಡುತ್ತ ಕೆಲವು ಮಾನ್ಯ ಸದಸ್ಯರು ಕೆಲವು ಸ್ಥಾನಿಕ ಅಡೆತಡೆಗಳನ್ನು, ಸ್ಥಾನಿಕ ಕುಂದುಕೊರತೆಗಳನ್ನು ಮತ್ತು ಅಧಿಕಾರಿಗಳ ವರ್ತನೆಯನ್ನು ಕುರಿತು ಮಾತನಾಡಿದ್ದಾರೆ. ಅವರ ಎಲ್ಲ ಸೂಚನೆಗಳನ್ನೂ ನಾನು ಬಹಳ ಗಮನಕೊಟ್ಟು ಕೇಳಿದ್ದೇನೆ ಮತ್ತು ಯಾವುದು ಸಾಧ್ಯವೋ ಅದನ್ನು ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಒಬ್ಬರು ಸ್ನೇಹಿತರು ಸಾರಾಯಿ, ಸೇಂದಿ ಅಂಗಡಿಗಳು ಸ್ಕೂಲು ಹತ್ತಿರ, ದೇವಸ್ಥಾನದ ಹತ್ತಿರ, ಆಸ್ಪತ್ರೆ ಹತ್ತಿರ ತೆರೆಯುವುದಕ್ಕೆ ಸರ್ಕಾರ ಲೈಸೆನ್ಸ್ ಕೊಟ್ಟಿದೆ ಎಂದು ಹೇಳಿದರು.

ಈ ಬಗ್ಗೆ ನಮ್ಮ ನೀತಿಯನ್ನು ಅನೇಕ ಸಲ ಸಭೆಯ ಮುಂದೆ ಹೇಳಿದ್ದೇನೆ. ಸ್ಕೂಲುಗಳ ಹತ್ತಿರ, ಆಸ್ಪತ್ರೆಯ ಹತ್ತಿರ, ದೇವಸ್ಥಾನ, ಮಠ, ಮಸೀದಿ ಅಥವಾ ಚರ್ಚ್ ಇವುಗಳ ಹತ್ತಿರದಲ್ಲಿ ಸಾರಾಯಿ ಮತ್ತು ಸೇಂದಿ ಅಂಗಡಿಗಳಿಗೆ ಸಾಧ್ಯವಾದಷ್ಟು ಸ್ಥಾನ ಕೊಡಬಾರದು ಎನ್ನತಕ್ಕದ್ದು ನಮ್ಮ ನೀತಿ. ಯಾವುದೇ ಷಹರು, ಯಾವುದೇ ತಾಲ್ಲೂಕಿನಲ್ಲಿ, ಬೆಂಗಳೂರಿನಂಥ ದೊಡ್ಡ ಷಹರು ಅಥವಾ ಒಂದು ಸಣ್ಣ ಷಹರಾಗಲೀ ಎಲ್ಲೆಲ್ಲಿ ಅಂಗಡಿಗಳನ್ನು ತೆರೆಯಬೇಕು ಎನ್ನುವುದರ ಬಗ್ಗೆ ಸರ್ಕಾರ ನಿರ್ಧಾರ ಮಾಡುವುದಿಲ್ಲ. ಅಲ್ಲಿನ ಸ್ಥಾನಿಕ ಸಂಸ್ಥೆ, ಮುನಿಸಿಪಾಲಿಟಿ ಅಥವಾ ಕಾರ್ಪೊರೇಷನ್ ಇವರು ಮೊದಲು ಸರ್ಟಿಫೈ ಮಾಡಬೇಕಾಗುತ್ತದೆ, ಇಂಥಿಂಥ ಜಾಗದಲ್ಲಿ ಅಂಗಡಿಗಳನು ತೆರೆಯ ಬಹುದು ಎಂದು. ಆ ರೀತಿ ಸರ್ಟಿಫೈ ಮಾಡಿದ ಮೇಲೆ ಸಂಬಂಧಪಟ್ಟ ಡೆಪ್ಯುಟಿ ಕಮಿಷನರ್ ಅದಕ್ಕೆ ಲೈಸೆನ್ಸ್ ಕೊಡುತ್ತಾರೆ. ಇದಾಗುವುದಕ್ಕೆ ಮುಂಚೆ ಸರ್ಕಾರದ ಗಮನಕ್ಕೆ ಕೂಡ ಬರುವುದಿಲ್ಲ. ಕೆಲವು ಸಂದರ್ಭದಲ್ಲಿ ಮಾನ್ಯ ಸದಸ್ಯರು ಆಗಿರತಕ್ಕಂಥ ತಪ್ಪುಗಳನು ನನ್ನ ಗಮನಕ್ಕೆ ತಂದದ್ದು ಉಂಟು. ನಾನು ಸಾಧ್ಯವಾದ ಮಟ್ಟಿಗೂ ಅದನ್ನು ನಿವಾರಿಸುತ್ತಿದ್ದೇನೆ. ಮಾನ್ಯ ಶಾಮಣ್ಣನವರು ಒಂದು ಅಂಗಡಿ ಬಗ್ಗೆ ಹೇಳಿದರು, ಮಾನ್ಯ ಹಮೀದ್ ಷಾ ಅವರು ಮತ್ತೊಂದು ಜಾಗದ ಬಗ್ಗೆ ಹೇಳಿದರು.

ಶ್ರೀ ಎಂ. ಎಸ್. ಕೃಷ್ಣನ್.—ನಾನು ಮಾನ್ಯ ಮಂತ್ರಿಗಳಿಗೆ ಪತ್ರ ಬರೆದೆ. ಸೇಂದಿ ಅಂಗಡಿ ಮರ್ಯಾದಸ್ಥರು ಇರುವ ಜಾಗದಲ್ಲಿ ಇರಬಾರದು, ಅದನ್ನು ತೆಗೆದು ಹಾಕಬೇಕು ಎಂದು. ಅದನ್ನು ತಗೆದು ಹಾಕುವಂತೆ ಹುಕುಂ ಮಾಡಿದ್ದೇನೆ ಎಂದು ಮಾನ್ಯ ಮಂತ್ರಿಗಳು ಹೇಳಿದರು ಆ ಅಂಗಡಿ ಇನ್ನೂ ಕೂಡ ಅದೇ ಜಾಗದಲ್ಲಿದೆ.

ಶ್ರೀ ರಾಮಕೃಷ್ಣ ಹೆಗಡೆ.—ಲೈಸೆನ್ಸನ್ನು ಕಂಟ್ರಾಕ್ಟರ ಕಂಡೀಷನ್ನಿಗೆ ಒಳಪಟ್ಟು ಕೊಟ್ಟಿದ್ದರೆ ಅಂಥ ಸಂದರ್ಭದಲ್ಲಿ ಕಂಟ್ರಾಕ್ಟ್ ಮುಗಿಯುವವರೆಗೂ ಬದಲಾಯಿಸುವುದು ಕಷ್ಟವಾಗುತ್ತದೆ; ಕಂಟ್ರಾಕ್ಟರ ಒಪ್ಪಿಗೆಯಿಂದ ಬದಲಾವಣೆ ಮಾಡಬೇಕಾಗುತ್ತದೆ. ನಾನು ಮತ್ತೊಮ್ಮೆ ಮಾನ್ಯ ಸದಸ್ಯರಿಗೆ ಹೇಳುತ್ತೇನೆ, ಸರ್ಕಾರ ಈ ಬಗ್ಗೆ ನಿರ್ಧಾರ ಮಾಡುವುದಿಲ್ಲ. ರಾಜ್ಯದಲ್ಲಿ ಸಾವಿರಾರು ಅಂಗಡಿಗಳಿರುತ್ತವೆ ಯಾವ ಯಾವ ಅಂಗಡಿ ಎಲ್ಲೆಲ್ಲಿದೆ ಎಂದು ನಮಗೆ ಗೊತ್ತಾಗುವುದಿಲ್ಲ. ಡೆಪ್ಯೂಟಿ ಕಮಿಷನರು ಸಂಬಂಧಪಟ್ಟ ನಗರಸಭೆ, ಮುನಿಸಿಪಾಲಿಟಿ ಅಥವಾ ಪಂಚಾಯಿತಿ ಇವುಗಳ ಒಪ್ಪಿಗೆಯನ್ನು ಪಡೆದು ಇಂಥಿಂಥ ಜಾಗದಲ್ಲಿ ಅಂಗಡಿಗಳನ್ನು ಇಡಬಹುದು ಎಂದು ಲೈಸೆನ್ಸ್ ಕೊಡುತ್ತಾರೆ. ಈಗಲೂ ಕೂಡ ಯಾವುದಾದರೂ ಮಾನ್ಯ ಸದಸ್ಯರು ಇಂಥ ದೇವಸ್ಥಾನದ ಹತ್ತಿರ, ಇಂಥ ಶಾಲೆಯ ಹತ್ತಿರ, ಇಂಥ ಮಸೀದಿಯ ಹತ್ತಿರ....

ಶ್ರೀ ಡಿ. ದೇವರಾಜ ಅರಸ್.—ಪತ್ರ ಬರೆದರೆ ಸಾಕು, ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಸಂತೋಷ. ಆದರೆ ಈಗ ಹಾಗೆ ಮಾಡುತ್ತಾ ಇಲ್ಲ. ಎಷ್ಟೋ ಸಂದರ್ಭಗಳಲ್ಲಿ ಸರ್ಕಾರಕ್ಕೆ ಕ್ರಮ ತೆಗೆದುಕೊಳ್ಳುವುದಕ್ಕೆ ಮನಸ್ಸಿದ್ದರೂ ಕಂಟ್ರಾಕ್ಟರ ಮೇಲೆ ಇವರು ಸವಾರಿ ಮಾಡುವುದಕ್ಕಾಗುವುದಿಲ್ಲ, ಇವರ ಮೇಲೆ ಅವರು ಸವಾರಿ ಮಾಡುತ್ತಿದ್ದಾರೆ. ಇದನ್ನು ಗಮನದಲ್ಲಿಟ್ಟುಕೊಂಡು ಇನ್ನು ಮೇಲಾದರೂ ಇಲ್ಲಿ ಹೇಳಿದಂತೆ ನಡೆಸಿ ಎಂದು ನಾನು ಹೇಳುತ್ತಿದ್ದೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಈಗ ನಾವು ಕ್ರಮ ತೆಗೆದುಕೊಳ್ಳು ತ್ತೇವೆಂದರೆ ಅರ್ಥವೇನು ? ಈ ದಿವಸ ಕಾಗದ ಬಂದರೆ ಇಂದೇ ಅಂಗಡಿ ಕಿತ್ತುಹಾಕಲು ಸಾಧ್ಯವೇ? ಸಂಬಂಧಪಟ್ಟ ಆಫೀಸರನ್ನು ಕರೆಸಿ ಮಾತನಾಡಿ ಮತ್ತೊಂದು ಜಾಗದಲ್ಲಿ ಅಂಗಡಿಗೆ ಅವಕಾಶ ಕೊಡುತ್ತೇವೆ, ಈಗಿರುವ ಜಾಗ ಬೇಡ ಎಂದು ಹೇಳಿ ಅವರ ಒಪ್ಪಿಗೆಯನ್ನು ಪಡೆದು ಬದಲಾಯಿಸ ಬೇಕು. ಅದಿಲ್ಲದಿದ್ದರೆ ಕಂಟ್ರಾಕ್ಟರ ಅವಧಿ ಮುಗಿಯುವವರೆಗೆ ಕಾಯಬೇಕು, ಮುಗಿದಮೇಲೆ ಬೇರೆ ಕಡೆಗೆ ಬದಲಾಯಿಸಬೇಕು.

ಶ್ರೀ ಡಿ. ದೇವರಾಜ ಅರಸ್.—ಬ್ರಾಡ್‌ವೇ ಪರಿಸ್ಥಿತಿ ಹಾಗಿಲ್ಲ. ಅಲ್ಲಿ ಎರಡು ಸಲ ಹರಾಜು ಮಾಡಲಾಗಿದೆ, ಕಡಮೆ ಹಣ ಬಂತೆಂದು ಎರಡನೆಯ ಸಲ ಹರಾಜಾದಾಗ ಪರ್ಚೇಸರ್ ಕೈಗೆ ಹೋಯಿತು. ಆಗ ಅಂಗಡಿ ಬಿಟ್ಟುಕೊಡು, ಅದು ಗವರ್ನಮೆಂಟ್ ಆರ್ಡರಿಗೆ ವಿರುದ್ಧವಾಗಿ ಮಾಡಿದ್ದಾರೆ ಎಂದು ಹೇಳಿದ್ದಾರೆ.

ಶ್ರೀ ಬಿ. ಪಿ. ಗಂಗಾಧರ್.—ಇಂಥ ಕಡೆ ಅಂಗಡಿ ಮಾಡುತ್ತೇವೆಂದು ಮುಂಚೆ ಹೇಳುವುದಿಲ್ಲವೇ? ಲೈಸೆನ್ಸ್ ಕೊಡುವುದಕ್ಕೆ ಮುಂಚೆ ಅಂಗಡಿ ತೆರೆಯಬೇಕೆಂದಿರುವ ಕಡೆ ಶಾಲೆ, ದೇವಸ್ಥಾನ, ಮಸೀದಿ ಮುಂತಾದುವು ಇವೆಯೋ, ತೊಂದರೆಯೇನಿದೆ ಎಂದೇಕೆ ನೋಡಬಾರದು ? ಸಾಕಷ್ಟು ಅಧಿಕಾರಿಗಳಿರುವಾಗ ಅವರೇಕೆ ಈ ಕೆಲಸ ಮಾಡುತ್ತಿಲ್ಲ ?

ಶ್ರೀ ರಾಮಕೃಷ್ಣ ಹೆಗಡೆ.—ಹತ್ತು ನಿಮಿಷಗಳಲ್ಲಿ ಉತ್ತರ ಹೇಳುತ್ತೇನೆ, ನಂತರ ಅದನ್ನೆಲ್ಲಾ ಕೇಳಬಹುದು.

ಶ್ರೀ ಕೆ. ಪ್ರಭಾಕರ್.—ಯೋಗ್ಯರಾದವರಿರುವ ಕಡೆ, ದೇವಸ್ಥಾನ, ಶಾಲೆ ಮುಂತಾದ್ದು ಇರುವ ಕಡೆ ಅಂಗಡಿ ತೆರೆಯಲು ಅವಕಾಶಕೊಡುವುದಿಲ್ಲವೆಂಬು ಮಾನ್ಯ ಮಂತ್ರಿಗಳು ಹೇಳಿದರು. ಆದರೆ ಯೋಗ್ಯರು ಯಾರು, ಮಾನವರಲ್ಲ ಮರ್ಯಾದೆಯಿಲ್ಲದಿರುವವರು ಯಾರು.? ಮಾನವರೆಲ್ಲಾ ಮರ್ಯಾದೆ ಇರುವವರೆ ? ಪಾನನಿರೋಧವನ್ನು ತೆಗೆದು ಮಹಾಪಾಪವನ್ನು ಮಾಡಿದ್ದಾರೆ. ಗಾಂಧಿ ಹೆಸರನ್ನು ಹೇಳುವವರು, ಕಾಂಗ್ರೆಸ್ಸಿನವರು ಹೆಂಡ ಕುಡಿಸುತ್ತಿದ್ದಾರೆಂಬುದು ಲೋಕಪ್ರಸಿದ್ಧ ವಾಗಿದೆ. ಬಹುಶಃ ಈ ಶಾಪ ಈ ಮಂತ್ರಿಮಂಡಲದಮೇಲೆ ಬರುವುದು. ಬಡವರ ದೃಷ್ಟಿಯಲ್ಲಿ ಇದನ್ನು ಡಿಫೆಂಡ್ ಮಾಡಿಕೊಳ್ಳುವುದಕ್ಕಾಗುವುದಿಲ್ಲ. ಹೆಂಡದ ಅಂಗಡಿ ಎಲ್ಲಿ ತೆಗೆಯಬೇಕೆಂದು ಸರಕಾರ ಷೆಡ್ಯೂಲುಮಾಡಿಲ್ಲ. ಡಿಸ್‌ಕ್ರೀಷನ್ ಚಿಕ್ಕ ಅಫೀಸರುಗಳಿಗಿದೆ. ಎಲ್ಲಿ ಕಂಟ್ರಾಕ್ಟರುಗಳಿಗೆ ಹೆಚ್ಚು ಹಣ ಬರುವುದು, ಎಲ್ಲಿ ಹೆಚ್ಚು ಖರ್ಚಾಗುವುದು ಅಂಥ ಕಡೆ ಅಂಗಡಿ ತೆಗೆಯುವರು. ಪಾನ ಬಂತು, ಸಮಾಜ ಹಾಳಾಯಿತು. ಅಂದಮೇಲೆ ಮರ್ಯಾದೆ ಇರುವವರು ಯಾರೆಂಬುದನ್ನು ಸರಿಯಾಗಿ ಹೇಳಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಸದಸ್ಯರು ಯಾವ ಮಂತ್ರಿಮಂಡಲದ ಸದಸ್ಯ ರಾಗಿದ್ದರೋ ಆ ಮಂತ್ರಿಮಂಡಲವೇ ಈ ಪಾನವನ್ನು ಜಾರಿಗೆ ತಂದಿರುವುದು. ಆದುದರಿಂದ ಶಾಪ ಅವರಿಗೂ ತಟ್ಟುವುದು.

ಶ್ರೀ ಕೆ. ಪ್ರಭಾಕರ್.—ವಿರೋಧ ಅವತ್ತೂ ಇತ್ತು, ಇವತ್ತೂ ಕೂಡ ಇದೆ ಎಂಬುದನ್ನು ತಿಳಿಯ ಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಈಗ ನಾನು ಮಸೂದೆಗೆ ಸಂಬಂಧ ಪಡದಿರುವ ಕೆಲವು ವಿಚಾರಗಳನ್ನು ಪ್ರಸ್ತಾಪಿಸಿ ವೇಳೆ ಹಾಳಾಯಿತು. ಈ ಮಸೂದೆಯ ಬಗ್ಗೆ ಹೇಳುವುದಕ್ಕೆ ಆಗಲಿಲ್ಲ. ಮಸೂದೆಯ ಬಗ್ಗೆ ಹೇಳುವುದಾದರೆ ಲೀಟರ್ ಫೀ ಸಂಬಂಧದಲ್ಲಿ ಆರ್ಡಿನೆನ್ಸ್ ತರಬೇಕಾದ್ದಿರಲಿಲ್ಲವೆಂದು ಮಾನ್ಯ ಸಿದ್ಧವೀರಪ್ಪನವರು ಹೇಳಿದರು. ಬೇರೆ ಬೇರೆ ವಿಚಾರ ಮಸೂದೆಯಲ್ಲಿ ಸೇರಿಸಲಾಗಿದೆ, ಅದನ್ನೆಲ್ಲಾ ಬಿಲ್ಲಿನ ರೂಪದಲ್ಲಿ ಇಲ್ಲಿ ತಂದಿರುವುದು ಒಳ್ಳೆಯ ದಲ್ಲ ಎಂದು ಮುಂತಾಗಿ ಹೇಳಿದರು. ಈಗ ಬಿಲ್ಲಿನ ರೂಪದಲ್ಲಿ ಬಂದಿದೆ, ಇದನ್ನು ಒಪ್ಪುವುದು ಅಥವ ಬಿಡುವುದು ಈ ಮನೆಗೆ ಬಿಟ್ಟಿದೆ. ಮುಖ್ಯವಾದ ಅಂಶ ಲೀಟರ್ ಫೀ ಛಾಲೆಂಜ್ ಮಾಡಿ ಕೆಲವರು ಹೈಕೋರ್ಟಿಗೆ ಹೋಗಿದ್ದಾರೆ. ಲೀಟರ್ ಫೀಗೋಸ್ಕರ ಆರ್ಡಿನೆನ್ಸ್ ಇಂದು ತಂದು ಉಳಿದ ವಿಚಾರಗಳಿಗೆ ಮತ್ತೊಂದು ಬಿಲ್ಲು ತರುವುದು ಸೂಕ್ತವಲ್ಲ, ಬಿಲ್ಲನ್ನು ತರುವಾಗ ತಿದ್ದುಪಡಿ ಮಾಡು ವಾಗ ಕ್ಲಿಷ್ಟವಾಗಿರುವ ವಿಚಾರಗಳನ್ನೆಲ್ಲಾ ಗಮನಿಸಿ ಅವಕ್ಕೆ ಸೂಕ್ತ ತಿದ್ದುಪಡಿ ತರಲಾಗುವುದು.

ಮೊದಲನೆಯದಾಗಿ ಟೀಕೆಗೆ ಗುರಿಯಾಗಿರುವುದು 17ನೆಯ ಸೆಕ್ಷನ್ ತಿದ್ದುಪಡಿ. ಅದರಲ್ಲಿ ಲೀಜ್, ಸಬಲೀಜ್ ಮಾಡುವುದಕ್ಕೆ ಸರಕಾರ ಅನುಮತಿ ಕೊಡಬಹುದು ಎಂಬುದು. ಶ್ರೀ ಸಿದ್ಧ ವೀರಪ್ಪನವರು ಈಗಿರುವ ಸೆಕ್ಷನ್ನನ್ನು ಸರಿಯಾಗಿ ಓದಿಲ್ಲ, ಸರಕಾರಕ್ಕೆ ಇದು ಹೊಸ ಅಧಿಕಾರವಲ್ಲ. ಒಬ್ಬ ದೊಡ್ಡ ಕಂಟ್ರಾಕ್ಟರಿಗೆ ಸಹಾಯಮಾಡುವುದಕ್ಕೆ ಅಥವ ಪರಿಹಾರ ಕೊಡುವುದಕ್ಕೆ ತಂದಿರುವ ತಿದ್ದುಪಡಿ ಇದಲ್ಲ. ಮೂಲತಃ ಇರುವುದು 17(1ಎ). ಈಗ ಸಬ್‌ಲೀಜ್ ಮಾಡುವುದಾಗಲಿ ಅಥವ ಟ್ರಾನ್ಸ್‌ಫರ್ ಮಾಡುವುದಾಗಲಿ ಸರಕಾರದ ಹತೋಟಿಗೆ ಸಿಕ್ಕದೆ ಇರುವುದನ್ನು ಸಿಕ್ಕುವಂತೆ ಮಾಡಿ ಅಧಿಕಾರ ಪಡೆಯಬೇಕಾಗಿದೆ. ಒಬ್ಬ ಕಂಟ್ರಾಕ್ಟರು ತನ್ನ ಲೀಜನ್ನು ಬೇರೆಯವರಿಗೆ ವರ್ಗಮಾಡಲು ಅವಕಾಶವಿತ್ತು. ಈಗ ತಿದ್ದುಪಡಿ ಮಾಡದಿದ್ದರೆ ಒಬ್ಬ ಕಂಟ್ರಾಕ್ಟರು ಸರಕಾರಕ್ಕೆ ಗೊತ್ತಿಲ್ಲದಿರುವ ಹಾಗೆ ಬೇರೆಯವರಿಗೆ ವರ್ಗಮಾಡಿದರೆ ನಾಳೆ ಯಾರನ್ನು ಹಿಡಿಯಬೇಕು ಎಂಬ ಸಂದಿಗ್ಧ ಪರಿಸ್ಥಿತಿ ಯಿತ್ತು. ಅದನ್ನು ಹೋಗಲಾಡಿಸುವುದಕ್ಕಾಗಿ ಈ ತಿದ್ದುಪಡಿಯನ್ನು ತಂದಿದ್ದೇವೆ.

ಎರಡನೆಯ ಕಲಮು ಟೀಕೆಗೆ ಗುರಿಯಾಗಿರುವುದು 45–ಎ–ಕಲಮು. ಇದು ಹೊಸ ಸೆಕ್ಷನ್. ಇದರಲ್ಲಿ ಎಕ್ಸೈಜು ಆಫೀಸರಿಗೆ ಹದಿನಾಲ್ಕು ದಿವಸಲು ಅಧಿಕಾರ ಕೊಡಲಾಗಿದೆ. ಈ ಸಂಬಂಧದಲ್ಲಿ ಶ್ರೀ ಐತಾಳರು ಬಹಳ ಗುಡುಗಿದರು, ಅದು ಮುಗಿದ ಮಾತು, ಅವರು ಬ್ಯಾಡ್‌ಕೇಸ್ ಆರ್ಗ್ಯೂ ಮಾಡುತ್ತಿದ್ದರು.

ಅವರು ಕೊಟ್ಟಂಥ ಉದಾಹರಣೆಗಳನ್ನೇ ನಾನು ಉದಹರಿಸುತ್ತೇನೆ. ಲೈಸೆನ್ಸ್ ಕಂಡೀಷನ್ ರಾತ್ರಿ 11 ಗಂಟೆಗೆ ಬಂದು ಮಾಡಬೇಕೆಂದು ಇರುತ್ತದೆ. ಈ ಲೈಸೆನ್ಸ್ ಕಂಡೀಷನ್ ಉಲ್ಲಂಘನೆ ಮಾಡಿದರೆ ಮಾತ್ರ 200 ರೂಪಾಯಿ ದಂಡ ಹಾಕುವುದಕ್ಕೆ ಅಧಿಕಾರ ಕೊಟ್ಟಿದ್ದೇವೆ, ಇದು ತಪ್ಪೇ

ಮಾನ್ಯ ಸದಸ್ಯರು ಕಂಟ್ರಾಕ್ಟರುಗಳು ಕೀಚಕ, ಮರಿಕೀಚಕರಂತೆ ಇದ್ದಾರೆ ಎಂದು ಹೇಳಿದರು. ಇದರ ಬಗ್ಗೆ ನನಗೆ ಇನ್‌ಫರ್ಮೇಷನ್ ಬಂತು. ಡಿಸೌಜಾ ಅವರ ಬಗ್ಗೆ ಅವರು ಹೇಳಿದ ವಿಷಯದಲ್ಲಿ ನಾನು ಒಂದು ಪ್ರಶ್ನೆ ಕೇಳುತ್ತೇನೆ, ಎಕ್ಸೈಜ್ ಆಫೀಸರು ಹೋದ ತಕ್ಷಣ ಮನೆಯಲ್ಲಿದ್ದಂಥ ಎರಡು ಜನ ಓಡಿಹೋಗತಕ್ಕ ಅಗತ್ಯ ಏನಿತ್ತು? ಓಡಿ ಹೋಗಿ ಮೂರು ಗಂಟೆಯವರೆಗೂ ಅಡಗಿಕೊಳ್ಳತಕ್ಕ ಪ್ರಮೇಯ ಏನಿತ್ತು? ಯಾರನ್ನಾದರೂ ಕೊಲ್ಲಬೇಕಾದರೆ ಅವರು ಎಕ್ಸೈಸ್ ಆಫೀಸರೇ ಆಗ ಬೇಕೆಂದು ಏನೂ ಇಲ್ಲ, ಯಾರಾದರೂ ಕೊಲ್ಲಬಹುದು, ಅದಕ್ಕೆ ತಕ್ಕ ಪ್ರಾಯಶ್ಚಿತ್ತ ಪಡೆಯಬಹುದು. ಸೌತ್ ಕೆನರಾ ಡೆಪ್ಯುಟಿ ಕಮಿಷನರು ಸತ್ಯಸಂಧ, ಧರ್ಮನಿಷ್ಠ, ಒಳ್ಳೆಯ ಮನುಷ್ಯ ಎಂದು ಹೇಳಿದರು, ಬಹಳ ಸಂತೋಷ. ಸೌತ್ ಕೆನರಾ ಡಿ ಸಿ ಯಿಂದ ಬಂದಂಥ ನೋಟ್‌ನಲ್ಲಿ ಅವರು ಏನು ಹೇಳಿದ್ದಾರೆ ಎಂದರೆ. According to the Deputy Commissioner the deceased D'Souza was a well-known illicit distiller.

SRI K. H. PATIL.—I rise to a point of order. When the Minister is quoting something, he cannot read only a part of it leaving the rest. I would like to request him to place the entire communication on the Table of the House.

SRI RAMAKRISHNA HEGDE.—I have no objection to place it on the Table of the House.

SRI G. CHANDRAKANT.—Why not place the entire report that you have received ?

SRI RAMAKRISHNA HEGDE.—I have no objection.

SRI BOLA RAGHURAM SHETTY.—Under what circumstances that report was given by the Deputy Commissioner ?

SRI RAMAKRISHNA HEGDE.—This is only preliminary report. When he heard about the incident, the Home Secretary contacted the concerned officer and got this preliminary report. The full investigation is not yet completed.

ಮಾನ್ಯ ಅಧ್ಯಕ್ಷರೇ, ಎಕ್ಸೈಜ್ ಆಫೀಸರ ಕೈಯಲ್ಲಿ ನಾವೇನೂ ಬಹಳ ಮಹತ್ವದ ಅತಿ ಹೆಚ್ಚಿನ ಅಧಿಕಾರವನ್ನು ಕೊಟ್ಟಿಲ್ಲ ಎಂದು ಹೇಳುತ್ತಾ ಇದ್ದೆ. ಈಗ ಪ್ರೊಹಿಬಿಷನ್ ಸಡಿಲಸಿದಮೇಲೆ ಅನೇಕ ಕಡೆ ಇಲ್ಲಿಸಿಟ್ ಡಿಸ್ಟಿಲೇಷನ್ ಕಡಿಮೆಯಾಗಿದೆ. ಆದರೆ ಸೌತ್ ಕೆನರಾದಲ್ಲಿ ಮಾತ್ರ ಅಲ್ಲಿಯ ರಿಪೋರ್ಟ್ ಮೇರೆಗೆ ಅಷ್ಟೊಂದು ಕಡಿಮೆಯಾಗಿಲ್ಲ. ಮತ್ತು ಅಲ್ಲಿಂದ ಬಂದಿರುವಷ್ಟು ಟೀಕೆ ಬೇರೆ ಯಾವ ಡಿಸ್ಟ್ರಿಕ್ಟ್‌ನಿಂದಲೂ ಬಂದಿಲ್ಲ. ಅದಕ್ಕೆ ಏನಾದರೂ ಒಂದು ಕಾರಣ ಇರಬೇಕು, ಇದು ಕಾಕತಾಳೀಯ ನ್ಯಾಯವೋ ಬೇರೆ ಯಾವುದೋ ಗೊತ್ತಿಲ್ಲ, ಅಂಥೂ ಏನಾದರೂ ಒಂದು ಕಾರಣ ಇರಬೇಕು. ಇಲ್ಲಿಸಿಟ್ ಡಿಸ್ಟಿಲೇಷನ್ ಎಲ್ಲಿ ಹೆಚ್ಚಾಗಿ ನಡೆಯುತ್ತಾ ಇದೆಯೋ ಅಲ್ಲಿ ನಮ್ಮ ಎಕ್ಸೈಜ್ ಇನ್‌ಸ್ಪೆಕ್ಟರುಗಳು ಮತ್ತು ಸಂಬಂಧಪಟ್ಟ ಅಧಿಕಾರಿಗಳನ್ನು ಕಂಡರೆ ಹೆದರುತ್ತಾರೆ ಮತ್ತು ಅನೇಕ ಸಲ ಅವರ ಮೇಲೆ ಅಟ್ಯಾಕ್ ಮಾಡಿದ್ದಾರೆ. ಆದ್ದರಿಂದ ಸಾಕಾದಷ್ಟು ನಾವು ಅವರಿಗೆ ಅಧಿಕಾರವನ್ನು ಕೊಡದಿದ್ದರೆ ಈ ಕಾನೂನನ್ನು ಜಾರಿಗೆ ತರುವುದಕ್ಕೆ ಕಷ್ಟವಾಗುತ್ತದೆ.

ಇನ್ನು ಎಕ್ಸೈಜ್ ಡಿಪಾರ್ಟ್‌ಮೆಂಟಿನ ಆಫೀಸರಾಗಲಿ, ಪೋಲೀಸ್ ಡಿಪಾರ್ಟ್‌ಮೆಂಟಿನ ಆಫೀಸರಾಗಲಿ, ಅಥವಾ ಯಾವುದೇ ಡಿಪಾರ್ಟ್‌ಮೆಂಟಿನ ಆಫೀಸರಾಗಲಿ ತನ್ನ ಕರ್ತವ್ಯಪಾಲನೆಯಲ್ಲಿ ಅವನು ಏನಾದರೂ ತಪ್ಪು, ಅಪರಾಧ ಮಾಡಿದ್ದರೆ ಅದಕ್ಕೆ ಸರ್ಕಾರದ ಜವಾಬ್ದಾರಿ ಇದೆ. ಅದಲ್ಲದೆ ಖಾಸಗಿ ವ್ಯಕ್ತಿಯಾಗಿ ಅಪರಾಧ ಮಾಡಿದ್ದರೆ ಅದಕ್ಕೆ ಖಾಸಗಿ ವ್ಯಕ್ತಿಯಾಗಿ ಕೋರ್ಟಿನ ಮುಂದೆ ಯಾವ ಶಿಕ್ಷೆಯಾಗಬೇಕೋ ಅದು ಆಗುತ್ತದೆ ಅದನ್ನು ಅವನು ಅನುಭವಿಸಬೇಕು. ಅದಕ್ಕೆ ತಕ್ಕ ಶಿಕ್ಷೆಯನ್ನು ಅವರು ಪಡೆದೇ ಪಡೆಯುತ್ತಾರೆ. ಒಂದು ಮಾತನ್ನು ಮಾನ್ಯ ಸದಸ್ಯರಿಗೆ ತಮ್ಮ ಮುಖಾಂತರ ಹೇಳಬಯಸುತ್ತೇನೆ. ಎಕ್ಸೈಜ್ ಆಫೀಸರಾಗಲಿ, ಬೇರೆ ಯಾವ ಆಫೀಸರೇ ಆಗಲಿ ನಮ್ಮ ಕಾಯಿದೆಯನ್ನು ಜಾರಿಗೆ ತರುವ ವಿಷಯದಲ್ಲಿ ಯಾವುವೇ ಅಪರಾಧವನ್ನು ಮಾಡಿದ್ದ ಪಕ್ಷದಲ್ಲಿ ಅವರಿಗೆ ಶಿಕ್ಷೆಯನ್ನು ವಿಧಿಸತಕ್ಕ ಜವಾಬ್ದಾರಿ ಸರ್ಕಾರದ್ದು ಮತ್ತು ಅದನ್ನು ವಿಧಿಸುತ್ತೇವೆ ಎಂದು ಹೇಳಬಯಸುತ್ತೇನೆ.

(ಶ್ರೀ ರಾಮಕೃಷ್ಣ ಹೆಗಡೆ)

ಒಬ್ಬ ಮಾನ್ಯ ಸದಸ್ಯರು ಎಕ್ಸೈಸ್ ಇನ್‌ಸ್ಪೆಕ್ಟರೇ ಇನ್‌ವೆಸ್ಟಿಗೇಟ್ ಮಾಡತಕ್ಕವರು ತೀರ್ಮಾನ ಕೊಡತಕ್ಕವರು ಇದು ಸರಿಯಾದ್ದಲ್ಲ ಎಂದು ಹೇಳಿದರು. ಇದು ಅತಿ ರಂಜಿತವಾದ ಮಾತು. ಈ ಒಂದು ಪ್ರೊವಿಜನ್ ಮಾಡತಕ್ಕ ಅಗತ್ಯ ಏಕೆ ಬಂತು ಎಂದರೆ ಇಲ್ಲಿಸಿಟ್ ಡಿಸ್ಟಿಲೇಷನ್ ಕೇಸುಗಳು ವರ್ಷಾನುಗಟ್ಟಲೆ ಇತ್ಯರ್ಥವಾಗದೆ ಕೋರ್ಟಿನ ಮುಂದೆ ಉಳಿಯುತ್ತಾ ಇವೆ.

6-00 P.M.

ಕೇವಲ ಎಕ್ಸೈಜ್ ಕೇಸ್ ಆಗಿರುವುದರಿಂದ, ಅವರಿಗೆ ಆರು ತಿಂಗಳು ಟ್ರೈನಿಂಗ್ ಕೊಟ್ಟು ಯಾವ ರೀತಿ ಅನಲೈಜ್ ಮಾಡಬೇಕೆಂದು ಹೇಳಿಕೊಟ್ಟರೆ, ಅವರ ಅಭಿಪ್ರಾಯವನ್ನು ಕೋರ್ಟ್ ಮನ್ನಣೆ ಮಾಡಬಹುದು ಎಂದು ಇದರಲ್ಲಿ ಸೂಚನೆ ಮಾಡಿದ್ದಾರೆ.

ಶ್ರೀ ಬಿ. ಪಿ. ಗಂಗಾಧರ್.—ಡಿಟೆಕ್ಷನ್ ಇನ್‌ವೆಸ್ಟಿಗೇಷನ್ ಮತ್ತು ಟ್ರಯಲ್ ಒಬ್ಬರೇ ಮಾಡುವುದು ಎಲ್ಲಾದರೂ ಉಂಟೋ? ಪ್ರಪಂಚದಲ್ಲಿ ಇಂತಹ ಅನ್ಯಾಯವಾದಂಥ ಕಾನೂನು ಎಲ್ಲಿಯೂ ಸೃಷ್ಟಿಯಾಗಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಇನ್ನು ಹೆಚ್ಚು ಇಲ್ಲ, ಎರಡೇ ಕಲಂ ಇರುವುದು ಇದನ್ನು ಬೇಗ ಹೇಳಿ ಮುಗಿಸಿಬಿಡುತ್ತೇನೆ. ಇದು ಎಕ್ಸೈಜ್ ಆಫೀಸರಿಗೆ ಮಾತ್ರ ಮೀಸಲಾಗಿರುವುದು ಅಲ್ಲ. ಯಾರೇ ಗವರ್ನಮೆಂಟ್ ಡಿಪಾರ್ಟ್‌ಮೆಂಟ್ ಆಫೀಸರು ಆಗಲೀ, ಅವರ ವಿರುದ್ಧ ಮೊಕದ್ದಮೆ ಹಾಕಬೇಕಾದರೆ, ಸರಕಾರದ ಪರವಾನಿಗೆ ತೆಗೆದುಕೊಳ್ಳಬೇಕಾಗುತ್ತದೆ. ಅದನ್ನು ಇದರಲ್ಲಿ ಹಾಕಿದ್ದಾರೆ.

ಕೊನೆಯದಾಗಿ ಮಾನ್ಯ ಸಿದ್ದವೀರಪ್ಪನವರು ಒಂದು ಲಾ ಪಾಯಿಂಟನ್ನು ತೆಗೆದರು. ಅದೇನೆಂದರೆ ಲೋಕಲ್ ವಿಟ್‌ನೆಸಸ್ ತೆಗೆದುಕೊಳ್ಳದಿದ್ದರೆ, ಸ್ಥಾನಿಕ ಜನರ ಹಕ್ಕಿಗೆ ಚ್ಯುತಿ ಬರುತ್ತದೆ ಎಂದು ಹೇಳಿದರು. ಕಾನ್‌ಸ್ಟಿಟ್ಯೂಷನಲ್ ಹಕ್ಕಿಗೆ ಚ್ಯುತಿ ಬರುವಂತೆ ನಾವು ಕಾಯಿದೆಯನ್ನು ಮಾಡುವುದಿಲ್ಲ. ಹಾಗೆ ಮಾಡಿದರೂ ಅದು ನಿಲ್ಲುವುದಿಲ್ಲ. ಈ ಕಾಯಿದೆಯನ್ನು ನಿಧಾನವಾಗಿ ಯೋಚನೆ ಮಾಡಿ ಮಾಡಿದ್ದೇವೆ. ಇದರಲ್ಲಿ ಯಾವ ಹಕ್ಕಿಗೂ ಚ್ಯುತಿ ಬರುವುದಿಲ್ಲ. ಸುಪ್ರೀಂ ಕೋರ್ಟ್ ರೂಲಿಂಗ್ ಇಲ್ಲಿ ಕೊಡುತ್ತೇನೆ.

Sri H. SIDDAVEERAPPA.—Does it not offend Criminal Procedure Code?

ಶ್ರೀ ರಾಮಕೃಷ್ಣ ಹೆಗಡೆ.—ಇಲ್ಲ, ಇನ್ನು ಕ್ರಿಮಿನಲ್ ಪ್ರೊಸೀಜರ್ ಕೋಡಿನ 537ನೇ ಕಲಂ ಮೇಲೆ ಏನು ಒಂದು ಗುಜರಾತ್ ಕೇಸು ಸುಪ್ರೀಂ ಕೋರ್ಟಿಗೆ ಹೋಗಿತ್ತು, ಅದರ ಮೇಲೆ ಒಂದು ಜಡ್ಜ್‌ಮೆಂಟ್ ಆಗಿದೆ. ಪಂಚರು ಅದೇ ಸ್ಥಾನದವರು ಅಲ್ಲ ಎನ್ನುವ ಒಂದು ಕಾರಣದಿಂದ ಅವರ ಎವಿಡೆನ್ಸ್ ವಾಯಿಡ್ ಆಗುವುದಿಲ್ಲ ಎಂದು ಹೇಳಿದ್ದಾರೆ. Clause (a) of Section 537 of the Cr.P.C. reads as follows:—

"Section (a)-any error, finding or sentance when reversible by reason of error or omission in charge or other proceedings subject to the provisions hereinfore contained, no finding, sentence or order passed by Court of competent jurisdiction shall be reversed or altered under Chapter XXVII or an appeal of revision on account of—(a) any error, omission or irregularity in the complaint, summons, warrant, proclamation order judgement or other proceedings before or during taril or in any enquiry or other proceedings under this Code or of any error, omission or irregularity in the charge including any misjoinder of charges or of the omission to reverse any list of jurors in accordance with Section 324 or ...

Sri H. SIDDAVEERAPPA.—I am sorry that does not refer to Section 103 of the Cr.P.C. It is a fundamental right. It cannot be taken away

But the decision quoted by the Hon'ble Minister has no relevance, has no reference at all. That refers to cases where there are certain irregularities. This is an irregularity which affects the very foundation of the crime.

SRI RAMAKRISHNA HEGDE.—Sir, I beg to differ from the hon. member. These two sections have to be taken together and read together. The decision of the Supreme Court in which the same point was raised is as follows:—

> "In the present case two main defects have been pointed out in the matter of search ; one is that the Special Police Officer Sri Mankad has been found both by Magistrate and the High Court to have prepared the document Exhibit 8/A long after the search. As found by the High Court this document contained reproduction of Section 15 (1) and it hardly contained any ground on which the Police Officer had formed the belief with regard to the matters stated in sub-section (1). The other point, that the hon. Member referred, which has been pressed on behalf of the appellent relates to contravention of sub-section (2) inasmuch as the panch witnesses were not inhabitants of the locality in which the appallent's house was situate. The High Court was of the view that power to conduct such search was derived from the Statute and not from the recording of reasons and therefore the search was not rendered illegal on account of the contravention of the Section 15(1)of the Act. On the second point it was held that there was no provision in law which rendered the evidance of the panch witnesses inadmissible; even that section 15 (2) had been contravened. The High Court did not agree with the decision of the Andhra Pradesh High Court that the directions contained in sub-section (2) were of a mandatory nature."

The Supreme Court has upheld the decision of the High Court of Gujarat.

ಇದು ಮುಖ್ಯವಾಗಿ ಇಲ್ಲಿಸಿಟ್ ಕೇಸುಗಳ ವಿಚಾರ ಇದೆ. ಕಾಯಿದೆಗೆ ಬಾಹಿರವಾಗಿ ಅರ್ರಾಕ್, ಸೇಂದಿ ಮತ್ತು ಸಾರಾಯಿ ಮುಂತಾದ ಮಾದಕ ಪದಾರ್ಥಗಳನ್ನು ಯಾರು ಇಟ್ಟುಕೊಳ್ಳುತ್ತಾರೋ ಅದಕ್ಕೆ ಸಂಬಂಧವಾಗಿ ಕೆಲವು ಕಾಯಿದೆಗಳಿವೆ ಸ್ಥಳದ ಜನಗಳು ಸಿಗದೆ ಇರುವ ಹಾಗೆ ಬೇಕಾದಷ್ಟು ಪ್ರಯತ್ನಗಳನ್ನು ಮಾಡುತ್ತಾರೆ. ಅದಕ್ಕಾಗಿ ಸ್ಪೆಸಿಫಿಕ್ಕಾಗಿ ಇದರಲ್ಲಿ ಕೆಲವು ಪ್ರಾವಿಷನ್ನುಗಳನ್ನು ಪ್ರೊವೈಡ್ ಮಾಡಿದ್ದೇವೆ.

ಶ್ರೀ ಬೋಳ ರಘುರಾಮಶೆಟ್ಟಿ .— ಅವು ಈ ಪ್ರಾವಿಷನ್ನಿನಲ್ಲಿ ಏಕೆ ಬರಬೇಕು? ಪೋಲೀಸ್ ಆಫೀಸರುಗಳಿಗೆ ಅಂತಹ ಅವಕಾಶ ಕೊಟ್ಟರೆ ಯಾರೋ ಲೊಕಾಲಟಿಯವರು ವಿಟ್‌ನೆಸ್ ಮಾಡಿದರೆಂದು ಕಾನೂನನ್ನು ಮಿಸ್‌ಯೂಜ್ ಮಾಡಬಹುದು.

ಶ್ರೀ ರಾಮಕೃಷ್ಣ ಹೆಗಡೆ .— ಮಾನ್ಯ ಸದಸ್ಯರು ವ್ಯಕ್ತಮಾಡಿದಂಥ ಸಂಶಯಕ್ಕೆ ಭಯಕ್ಕೆ ಇದರಲ್ಲಿ ಯಾವ ತರಹ ಆಸ್ಪದವಿಲ್ಲ. ಆದ್ದರಿಂದ ಇದಕ್ಕೆ ಈ ಮಾನ್ಯ ಸಭೆ ಒಪ್ಪಿಗೆ ಕೊಡಬೇಕು.

(MR. DEPUTY SPEAKER in the Chair)

Sri P. V. AITHALA .— Previously there was a provision in the previous Act to transfer wholesale to another. But now, he can transfer village-wise and Taluk-wise.

Sri RAMAKRISHNA HEGDE.— Even now it is being done, but not legally.

ಶ್ರೀ ಬೋಳ ರಘುರಾಮ ಶೆಟ್ಟಿ.— ಹರಿಜನ ಕೇರಿ, ಹತ್ತಿರ ಹೆಂಡದ ಅಂಗಡಿಗಳನ್ನು ಮಾಡುತ್ತಿದ್ದಾರೆ. ಅದು ಸರಿಯೇ ?

ಶ್ರೀ ರಾಮಕೃಷ್ಣ ಹೆಗಡೆ.— ಯಾವುದಾದರೂ ಅಂತಹ ಇನ್‌ಸ್ಟೆನ್ಸ್ ನನ್ನ ಗಮನಕ್ಕೆ ಬಂದರೆ, ಅದನ್ನು ಅಲ್ಲಿಂದ ಕೂಡಲೇ ತೆಗೆದುಹಾಕುತ್ತೇವೆ.

ಶ್ರೀ ಎಚ್. ಸಿದ್ಧವೀರಪ್ಪ.— ಮಾನ್ಯ ಮಂತ್ರಿಗಳು ಹೇಳಿದರು. ಇದನ್ನು ಸೆಲೆಕ್ಟ್ ಕಮಿಟಿಗೆ ಹಾಕುವುದಕ್ಕೆ, ಟೈಂ ಬಾರ್ ಆಗುತ್ತದೆಂದು. ನಿನ್ನೆತಾನೇ ಬೆಂಗಳೂರ ಸಿಟಿ ಮುನಿಸಿಪಲ್ ಕಾರ್ಪೊರೇಷನ್ ಬಿಲ್ ಅದೇ ರೀತಿಯಾಗಿ ಆರ್ಡಿನೆನ್ಸ್ ಮೇಲೆಯೇ ಆಗಿದ್ದು ಸೆಲೆಕ್ಟ್ ಕಮಿಟಿಗೆ ಹೋಗಿದೆ.

ಉಪಾಧ್ಯಕ್ಷರು.—ಅದು ಆಗಲೇ ಪಾಸಾಗಿದೆ. ಅದು ಸೆಲೆಕ್ಟ್ ಕಮಿಟಿಗೆ ಹೋಗಿಲ್ಲ.

ಶ್ರೀ ಎಚ್ ಸಿದ್ಧವೀರಪ್ಪ.—ಅಷ್ಟು ಸುಲಭವಾಗಿ ಅದನ್ನು ಪಾಸ್ ಮಾಡಿಕೊಂಡಿದ್ದಾರೆಯೇ! ನನಗೆ ಗೊತ್ತಾಗಲಿಲ್ಲ. The Assembly is bound to meet tomorrow and it is not going to be closed. Let us take it on some other day.

Mr. DEPUTY SPEKER.—Now I put Sri Nagappa's Resolution to vote. The question is:

"This Assembly disapproves Ordinance No: 4 of 1970 'The Mysore Excise (Second Amendment) Ordinance 1970' issued by the Governor of Mysore on 7th August 1970"

The Resolution was negatived.

The question is :

"That the Mysore Excise (Second Amendment) Bill, 1970. be taken into consideration."

The motion was adopted.

Mr. DEPUTY SPEAKER.—We will take up Consideration of clauses and amendments thereto tomorrow. Now discussion on matters of urgent public importance. for short duration.

Discussion on a matter of public importance for short Duration.

***Re* : Contract entered into by the W.S. & S. Board.**

Sri H. SIDDAVEERAPPA.—I would like to know how long you are going to carry the debate so far as this matter is concerned.

Mr. DEPUTY SPEAKER.—Under Rule 59, the time allowed is 2½ hours.

Sri H. SIDDAVEERAPPA.—The Assembly is likely to meet for some more time. Why not you given it 2½ hours on some other day, so that we may thoroughly discuss it. It is already 6·20 P.M. and if you give 2½ hours, we will have to sit for a long time.

ಶ್ರೀ ಎಂ. ಎಸ್. ಕೃಷ್ಣನ್.— ಮಾನ್ಯ ಶ್ರೀ ಸಿದ್ಧವೀರಪ್ಪನವರು ಹೇಳಿದ್ದಕ್ಕೆ ಮರ್ಯಾದೆ ಕೊಡುತ್ತಾ ನಾನು ಒಂದು ವಿಷಯವನ್ನು ಹೇಳುತ್ತೇನೆ. ಏನೋ ಒಂದು ಡೀಲ್ ಒಳಗೇ ಒಳಗೇ ನಡೆಯುತ್ತಿದೆ. ಇವರ ಬೋರ್ಡಿನ ಅವಧಿ ನಾಳೆಗೆ ಮುಕ್ತಾಯವಾಗುತ್ತದೆ. ಇದು ಬಹಳ ಅರ್ಜೆಂಟ್ ಮ್ಯಾಟರ್ ಇದೆ. ಇದರ ಬಗ್ಗೆ ಏನೂ ಕಾರ್ಯಕ್ರಮ ತೆಗೆದುಕೊಳ್ಳುವುದಿಲ್ಲ ಎಂದು ಹೇಳಿದರೆ, ಆಗ ಮಾನ್ಯ ಶ್ರೀ ಸಿದ್ಧವೀರಪ್ಪನವರು ಮತ್ತು ನಾವೂ ಒಪ್ಪಿಕೊಳ್ಳಬಹುದು.

ಶ್ರೀ ಎಚ್. ಎನ್. ನಂಜೇಗೌಡ.—ಈಗ ಚರ್ಚೆಯನ್ನು ಪ್ರಾರಂಭಮಾಡಿ ಮುಗಿಯದೆ ಹೋದರೆ, ನಾಳೆಗೆ ಮುಂದುವರಿಸೋಣ.

ಉಪಾಧ್ಯಕ್ಷರು.—ಹಾಗೆ ಮಾಡುವುದಕ್ಕಾಗುವುದಿಲ್ಲ. ಎರಡೂವರೆ ಗಂಟೆಯಲ್ಲಿ ಇದು ಮುಗಿಯಬೇಕು.

Sri H. SIDDAVEERAPPA.—According to the rules any discussion will have to be withen the specified hours. Let this matter be taken up on some other day and let us have a full debate on the subject.

Sri H. N. NANJE GOWDA.—This is an important matter. Let hon. Member Sri Shamanna conclude his speech to-day and further discussion may continue to-morrow.

Mr. DEPUTY SPEAKER.—It was already agreed that it should be taken up to-day and according to rules it has to be finished to-day only. Therefore I call upon hon. Member Sri Shamanna to speak.

† ಶ್ರೀ ಟಿ. ಆರ್. ಶಾಮಣ್ಣ.—ಮಾನ್ಯ ಅಧ್ಯಕ್ಷರೇ, ಈ ದಿನ ರಾಜ್ಯದಲ್ಲಿ ನಡೆದಿರತಕ್ಕಂತಹ ದೊಡ್ಡ ಅನ್ಯಾಯದ ಜೊತೆಗೆ ಬೆಂಗಳೂರು ನಾಗರೀಕರಿಗೆ ಆಗಬಹುದಾಂತಹ ಒಂದು ನಷ್ಟ ಕಷ್ಟ ಏನಿದೆ, ಅದು ಈ ವಿಚಾರದಲ್ಲಿ ಅಡಕವಾಗಿರುವುದರಿಂದ, ಇದು ಬಹಳ ಪ್ರಾಮುಖ್ಯವಾದುದೆಂದು ನಾನು ಭಾವಿಸುತ್ತೇನೆ; ಇದನ್ನು ಕೂಲಂಕಷವಾಗಿ ಚರ್ಚೆ ಮಾಡಿ, ಇವರಲ್ಲಿ ಯಾರ್ಯಾರು ಎಷ್ಟೆಷ್ಟು ಅಕ್ರಮ ಮಾಡಿದ್ದಾರೆ, ಏನೇನು ಅನ್ಯಾಯವಾಗಿದೆ ಎನ್ನುವುದರ ಬಗ್ಗೆ ನಾವು ಪರಿಶೀಲನೆ ಮಾಡಬೇಕಾಗಿರುವುದು ನಮ್ಮ ಕರ್ತವ್ಯವಾಗಿರುವುದರಿಂದ ನಾವು ಇದನ್ನು ಅಷ್ಟು ಲಘುವಾಗಿ ತೆಗೆದುಕೊಳ್ಳದೆ, ಇದರಲ್ಲಿರತಕ್ಕ ಸತ್ಯಾಂಶಗಳನ್ನು ಪರಿಶೀಲನೆ ಮಾಡುವುದಕ್ಕೆ, ನ್ಯಾಯವಾಗಿ ತೀರ್ಮಾನ ಮಾಡುವುದಕ್ಕೆ, ಈ ಸಭೆಗೆ ಪೂರ್ಣವಾದ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ ಈ ವಿಚಾರದ ವಿವರಕ್ಕೆ ನಾನು ಹೋಗದೆ, ಇದರ ಹಿನ್ನಲೆಯನ್ನು ಮಾತ್ರ ನಾನು ಹೇಳಬಯಸುತ್ತೇನೆ. ಈಗ ನಮ್ಮ ಬೆಂಗಳೂರು ನಗರ ಮೈಸೂರು ರಾಜ್ಯದ ರಾಜಧಾನಿಯಾದಮೇಲೆ, ಇದು ಹೆಚ್ಚು ಬೆಳೆಯುತ್ತಾ ಬಂದಿದೆ. ಹೀಗೆ ಇದು ವಿಶಾಲವಾಗಿ ಬೆಳೆಯುತ್ತಿರುವಾಗ ಮೊದಲು ಮಾನ್ಯ ಹನುಮಂತಯ್ಯನವರು ಕಾವೇರಿಯಿಂದ ನೀರು ಇಲ್ಲಿಗೆ ತರಬೇಕೆಂದು ಒಂದು ಆಸಕ್ತಿಯನ್ನು ವಹಿಸಿದರು. ಇದಾದಮೇಲೆ ಮಾನ್ಯ ನಿಜಲಿಂಗಪ್ಪನವರೂ ಇದನ್ನು ಒಪ್ಪಿಕೊಂಡರು. ಈ ಮಧ್ಯೆ ಕಾವೇರಿಯ ನೀರನ್ನು ಬೆಂಗಳೂರಿಗೆ ತರುವುದಕ್ಕೆ ನಾವೆಲ್ಲರೂ ಆಸಕ್ತಿ ಹೊಂದಿದ್ದುದರಿಂದ, ಕಾರ್ಪೊರೇಷನ್ನಿನವರೂ ಒಮ್ಮತದಿಂದ ಈ ಕಾರ್ಯಕ್ರಮಕ್ಕೆ ಬೆಂಬಲವನ್ನು ಕೊಟ್ಟರು. ಈ ಮಧ್ಯೆ ಕಾವೇರಿ ನೀರು ತರುವುದಕ್ಕೆ ವಿಶ್ವ ಬ್ಯಾಂಕಿನಿಂದ ಸಾಲ ತೆಗೆದುಕೊಳ್ಳಬೇಕೆಂದು ತೀರ್ಮಾನ ತೆಗೆದುಕೊಂಡರು. ಮೊದಲು ಒಂದು ಅಂದಾಜು ಮಾಡಿ 39 ಕೋಟಿಗೆ ಒಂದು ಎಸ್ಟಿಮೇಟ್ ಮಾಡಿದರು. ಈ ಎಸ್ಟಿಮೇಟ್ ಮೂರು ನಾಲ್ಕು ವರ್ಷ ಹಾಗೆಯೇ ಉಳಿಯುತ್ತಾ ಬಂತು. ವಿಶ್ವ ಬ್ಯಾಂಕಿನ ಪ್ರೊಫೆಸರ್ ಥ್ಯಾಕರ್ ಅವರು ವಿಶ್ವ ಬ್ಯಾಂಕ್ ಲೋನ್ ಹೆಸರು ಹೇಳಿಕೊಂಡು ಇಲ್ಲಿಗೆ ಆಗಾಗ್ಗೆ ಬರುತ್ತಿದ್ದರು. ನಿಜಲಿಂಗಪ್ಪನವರು ಆ ಸಮಯದಲ್ಲಿ ಮನೆ ಕಟ್ಟಿಸುತ್ತಿದ್ದರು. ಅವರ ಮನೆಯಲ್ಲಿ ತಿಂಡಿ ತಿಂದುಕೊಂಡು ಹೀಗೆ ನಾಲ್ಕು ವರ್ಷ ತಳ್ಳಿದರು. ನಂತರ ವಿಶ್ವ ಬ್ಯಾಂಕಿನಿಂದ ತೆಗೆದುಕೊಳ್ಳುವ ಸಾಲ ಮಾರ್ವಾಡಿಯಿಂದ ತೆಗೆದುಕೊಳ್ಳುವ ಸಾಲಕ್ಕೆ ಸರಿಯಾಗುತ್ತದೆ ಎಂದು ಇದನ್ನು ಕೈಬಿಟ್ಟರು. ನಂತರ ಈ ನೀರಿನ ವ್ಯವಸ್ಥೆಯನ್ನು ಸರಿಪಡಿಸುವುದಕ್ಕೋಸ್ಕರ ಬೆಂಗಳೂರು

(ಶ್ರೀ ಟಿ. ಆರ್. ಶಾಮಣ್ಣ)

ವಾಟರ್ ಸಪ್ಲೈ ಅಂಡ್ ಸಿವರೇಜ್ ಬೋರ್ಡು ಎಂಬ ಸ್ಟಾಚ್ಯುಟರಿ ಬೋರ್ಡನ್ನು ಮಾಡಿಬೇಕೆಂದು ಹೇಳಿದರು. ವಿಶ್ವ ಬ್ಯಾಂಕ್ ಹೇಳಿದ ಹಾಗೆ ವಾಟರ್ ಸಪ್ಲೈ ಆಕ್ಟ್ ಕೂಡ ಮಾಡಿದರು. ವಿಶ್ವ ಬ್ಯಾಂಕ್ ಲೋನ್ ತಪ್ಪಿತು. ಆದರೆ ಅಗ್ನಿರತಕ್ಕ ಅನಾಹುತ ತಪ್ಪಿಲ್ಲ. ಈ ವಾಟರ್ ಬೋರ್ಡು ಪ್ರಾರಂಭವಾದ ಮೇಲೆ ಸುಮಾರು 25 ಲಕ್ಷ ರೂಪಾಯಿ ಅಲ್ಲಿಯ ನೌಕರಿವರ್ಗ ಇತ್ಯಾದಿಗಳಿಗೆ ಖರ್ಚು ಮಾಡುತ್ತಿದ್ದಾರೆ. ಈ ಮೂರು ಪುಸ್ತಕಗಳನ್ನು ತಯಾರು ಮಾಡುವುದಕ್ಕೆ ಬಿನ್ನಿ ಅಂಡ್ ಕಂಪೆನಿಯವರಿಗೆ 25 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ; ಮತ್ತು ಅದನ್ನು ಬೆಂಗಳೂರಿನ ನಾಗರೀಕರ ತಲೆಯ ಮೇಲೆ ಹೊರಿಸಿದ್ದಾರೆ. ಹೀಗೆ ವಿಶ್ವ ಬ್ಯಾಂಕ್ ಲೋನ್‌ಗೆ ಬಡ್ಡಿ ಜಾಸ್ತಿಯಾ ಗುತ್ತದೆಂದು ಅಲ್ಲಿಂದ ಸಾಲ ತೆಗೆದುಕೊಳ್ಳುವುದಿಲ್ಲವೆಂದು ತೀರ್ಮಾನ ಮಾಡಿದರು. ಆಮೇಲೆ 1964ನೇ ಇಸವಿಯಲ್ಲಿ ಪ್ರಧಾನಮಂತ್ರಿಯಾಗಿದ್ದ ಲಾಲ್ ಬಹದೂರ್ ಶಾಸ್ತ್ರಿಯವರು ಇದರ ಪ್ರಾರಂಭೋತ್ಸವವನ್ನು ಮಾಡಿ, 1970ರಲ್ಲಿ ಬೆಂಗಳೂರಿಗೆ ನೀರು ತರುತ್ತೇವೆ ಎಂದು ಹೇಳಿದರು ಆದರೆ 1970ನೇ ವರ್ಷ ಬಂದರೂ ಟೆಂಡರ್ ಕೂಡ ತೀರ್ಮಾನವಾಗಲಿಲ್ಲ. ಕಳೆದ ಎರಡು ಮೂರು ವರ್ಷಗಳಿಂದ ಈ ವಾಟರ್ ಸಪ್ಲೈ ಬೋರ್ಡ್ ಹಾವಳಿಯಿಂದ ಎಷ್ಟೋ ಜನರು ಎರಡು ಸಾವಿರ. ಮೂರು ಸಾವಿರ ರೂಪಾಯಿವರೆಗೆ ನೀರಿನ ತೆರಿಗೆ ಕೊಡಬೇಕಾಗಿದೆ. ಹರಿಜನ ಹಾಸ್ಟೆಲ್ ಒಂದರಲ್ಲಿ 5 ಸಾವಿರದ 600 ರೂಪಾಯಿ ಕೊಡಬೇಕಾಗಿದೆ. ಅವರು ದುಡ್ಡು ಕಟ್ಟಲಿಲ್ಲವೆಂದು ನೀರನ್ನು ನಿಲ್ಲಿಸಿದ್ದಾರೆ. ಆದ್ದರಿಂದ ಅಲ್ಲಿಯ ಹುಡುಗರು ಬೇರೆ ಬೇರೆ ಕಡೆಯಿಂದ ನೀರನ್ನು ಹೊತ್ತುಕೊಂಡು ಬರುತ್ತಿದ್ದಾರೆ. ನಿನ್ನೆಯ ದಿನ ಒಂದು ಪ್ರಶ್ನೆ ಕೇಳಿದಾಗ ವಾಟರ್ ಬೋರ್ಡಿನಲ್ಲಿ ಏನು ಕಳ್ಳ ಲೆಕ್ಕ ಇಟ್ಟಿದ್ದಾರೆಂಬುದು ತಿಳಿಯಿತು. ಇವರು ದುಡ್ಡು ವಸೂಲು ಮಾಡತಕ್ಕವರು, ಬಿಲ್ ಮಾಡತಕ್ಕ ವರು ಲೆಕ್ಕವಿಲ್ಲ ಎಂದರೆ ಹೇಗೆ ಆಗುತ್ತದೆ? ಇವರು ಅಲ್ಲಿ ಒಂದು ಸುಳ್ಳು ಲೆಕ್ಕ ಇಟ್ಟಿದ್ದಾರೆಂದು ಹೇಳುತ್ತೇನೆ. ನಿಜವಾಗಿ ಇವರಿಗೆ ಬರತಕ್ಕ ವರಮಾನ ಒಂದು ಕೋಟಿ 50 ಲಕ್ಷ. ಆದರೆ ಅದನ್ನು ತೋರಿಸುವಾಗ ಕಳ್ಳ ಲೆಕ್ಕ ಇಟ್ಟುಕೊಂಡು ಹೇಳುತ್ತಾರೆ. ಆದ್ದರಿಂದ ಇವತ್ತು ವಾಟರ್ ಬೋರ್ಡು ಯಾವ ರೀತಿಯಲ್ಲೂ ಅನುಕೂಲ ಮಾಡುತ್ತಾ ಇಲ್ಲ. ವಿಶ್ವ ಬ್ಯಾಂಕ್ ಲೋನ್ ಯಾವಾಗ ಇಲ್ಲವೋ, ಆಗ ಈ ವಾಟರ್ ಬೋರ್ಡು ಏಕೆ ಇರಬೇಕು? ಇದನ್ನು ರದ್ದು ಮಾಡಬೇಕೆಂದು ಹೇಳುತ್ತೇನೆ. ನಾಳೆಯ ದಿನ ಈ ವಾಟರ್ ಬೋರ್ಡನ್ನು ಎಕ್ಸ್‌ಟೆಂಡ್ ಮಾಡಬೇಡಿ. ನಾಳೆ ಇದನ್ನು ರದ್ದು ಮಾಡಿ ಪಿ.ಡಬ್ಲ್ಯು.ಡಿ.ಗೆ ಒಪ್ಪಿಸಬೇಕು. ಪಿ.ಡಬ್ಲ್ಯು.ಡಿ.ಯವರು ಅನೇಕ ಅಣೆಕಟ್ಟಿನ ಕೆಲಸಕಾರ್ಯ ಗಳನ್ನೆಲ್ಲಾ ಮಾಡುತ್ತಿರುವಾಗ, 55 ಮೈಲು ದೂರದಿಂದ ನೀರು ತರುವುದಕ್ಕೆ ಅವರು ಯೋಗ್ಯರಲ್ಲ ವೆಂದರೆ ಇದು ಏನು ಮಾತು!

6-30 P.M.

ಈ ವಾಟರ್ ಸಪ್ಲೈ ಬೋರ್ಡಿನಿಂದ ಬೆಂಗಳೂರಿನ ನಾಗರೀಕರಿಗೆ ಯಾವ ಅನುಕೂಲವೂ ಆಗುವುದಿಲ್ಲ. ಯಾವ ಡಿಪಾರ್ಟ್‌ಮೆಂಟಿಗೂ ಬಾರದೆ ಇದ್ದಂತಹ ಚೀಫ್ ಇಂಜನಿಯರನ್ನು ವಾಟರ್ ಸಪ್ಲೈ ಬೋರ್ಡಿಗೆ ಛೇರ್ಮನ್ ಆಗಿ ತೆಗೆದುಕೊಂಡಿದ್ದಾರೆ. ವಾಟರ್ ಸಪ್ಲೈ ಬೋರ್ಡಿನ ಅಧ್ಯಕ್ಷಗಿರಿ ಮತ್ತು ಚೀಫ್ ಇಂಜೀನಿಯರ್ ಕೆಲಸ ಎರಡನ್ನೂ ಒಬ್ಬರ ಕೈಗೇ ಕೊಟ್ಟಿರುವುದು ಅನ್ಯಾಯ. ಶಿಕ್ಷೆ ಕೊಡುವವರು ಸಾಕ್ಷಿ ಹೇಳುವವರೂ ಒಬ್ಬರೇ ಆಗಿದ್ದಾರೆ. ಇದು ಸರಿಯಲ್ಲ. ಮೊದಲು ಚೀಫ್ ಸೆಕ್ರೆಟರಿ ಆಗಿದ್ದವರನ್ನು ವಾಟರ್ ಸಪ್ಲೈ ಬೋರ್ಡಿಗೆ ಛೇರ್ಮನ್ ಮಾಡಿದ್ದರು. ಅವರು ಬೇಡ ಎಂದ ಮೇಲೆ ಬೆಂಗಳೂರು ನಗರದ ನಾಗರೀಕರ ರಕ್ತವನ್ನು ಹೀರತಕ್ಕವರನ್ನು ಛೇರ್ಮನ್ ಕೆಲಸಕ್ಕೆ ತಂದು ಹಾಕಿದ್ದಾರೆ. ಇವರು ಎಂತಹ ನಾಟಕವಾಡುತ್ತಿದ್ದಾರೆ ಎಂದರೆ ತಮಗೆ ಯಾವರೀತಿ ಬೇಕೋ ಆ ರೀತಿ ಲೆಕ್ಕಪತ್ರವನ್ನು ಇಡುತ್ತಿದ್ದಾರೆ. ಅವರು ಬಹಳ ನಾಜೋಕಾಗಿ ಕೆಲಸವನ್ನು ಮಾಡುತ್ತಿದ್ದಾರೆ. ಅವರು ಹೇಳಬೇಕಾದ ವಿಚಾರವನ್ನು ಹೇಳುವುದೇ ಇಲ್ಲ. 100ಕ್ಕೆ 100ರಷ್ಟು ಸುಳ್ಳು, ನ್ಯಾಯಕ್ಕೆ ದೂರವಾದ್ದನ್ನು ಹೇಳುತ್ತಾರೆ. ವಾಟರ್ ಸಪ್ಲೈ ಬೋರ್ಡಿನ ಸದಸ್ಯರಿಗೆ ಸುಳ್ಳು ಹೇಳಿ ತಮಗೆ ಬೇಕಾದ ಹಾಗೆ ಕೆಲಸವನ್ನು ಮಾಡಿಸಿಕೊಳ್ಳತಕ್ಕಂಥ ಚಾತುರ್ಯ ಅವರಲ್ಲಿದೆ. ಈ ಛೇರ್ಮನರನ್ನು ತೆಗೆದು ಹಾಕಿ. ಇವರು ನಮಗೆ ಬೇಡ. ಮೊದಲು ಕಾವೇರಿ ನೀರನ್ನು ಬೆಂಗಳೂರಿಗೆ ತರಬೇಕೆಂದು 39 ಕೋಟಿ ರೂಪಾಯಿಗಳ ಒಂದು ಅಂದಾಜನ್ನು ತಯಾರು ಮಾಡುತ್ತೇವೆ ಎಂದು ಹೇಳಿ ಈಗ ಅದನ್ನು 23 ಕೋಟಿ ರೂಪಾಯಿಗಳಿಗೆ ಇಳಿಸಿದ್ದಾರೆ. ಈಗಾಗಲೇ ಕಾವೇರಿ ಯೋಜನೆಗೆ 5—5 ಕೋಟಿ ರೂಪಾಯಿಗಳು ಖರ್ಚಾಗಿದೆ. ಕಾವೇರಿ ಜಲಾಶಯದ ಹತ್ತಿರ ಸೋರತಕ್ಕ ಮತ್ತು ಕತ್ತೆಗಳೂ ವಾಸ ಮಾಡುವುದಕ್ಕೂ ಸಾಕಾಯವಿಲ್ಲದೇ ಇರುವ ಮನೆಗಳನ್ನು ಕಟ್ಟಿರುವುದು ಮತ್ತು ಬೆಂಗಳೂರು ನಗರದಲ್ಲಿ ಪೈಪು ಹಾಕುವುದಕ್ಕೆ ರಸ್ತೆ,

ಗಳನ್ನು ಅಗೆಯುವುದು ಈ ಕೆಲಸಗಳನ್ನು ಮಾಡಿದ್ದಾರೆ. ಕೆಲವು ಕಡೆ ಪೈಪುಗಳನ್ನು ಹಾಕಿದ್ದಾರೆ. ಆ ಪೈಪುಗಳ ಜಾಯಿಂಟ್ಗೆ ಸಿಮೆಂಟ್ ಹಾಕಿದ್ದಾರೆ. ಅದು ಲೀಕಾಗುತ್ತಾ ಇದೆ. ಬೆಂಗಳೂರು ನಗರದಲ್ಲಿ ವಾಟರ್ ಸಪ್ಲೈ ಬೋರ್ಡಿನವರು ಯಾವ ಪೈಪನ್ನು ಹಾಕಿದರೂ ಕೂಡ ಅದು ಲೀಕಾಗುತ್ತಾ ಇದೆ. ಮೊದಲು ಕಾವೇರಿನದಿಯಿಂದ ನೀರು ಬಂದಮೇಲೆ ಡಿಸ್ಟ್ರಿಬ್ಯೂಟ್ ಲೈನ್ ಹಾಕಿ ನೀರನ್ನು ಡಿಸ್ಟ್ರಿಬ್ಯೂಟ್ ಮಾಡಬಹುದು. ಆದರೆ ಇವರು ಡಿಸ್ಟ್ರಿಬ್ಯೂಟ್ ಲೈನ್ ಮೊದಲೇ ಹಾಕುತ್ತಿದ್ದಾರೆ.

ವರ್ಲ್ಡ್ ಬ್ಯಾಂಕಿನವರು ಈ ಕಾವೇರಿಯ ನೀರು ಸರಬರಾಜುಯೋಜನೆಗೆ ಸಾಲವನ್ನು ಕೊಡಬೇಕಾದರೆ ಅವರು ಒಂದು ಎಕ್ಸ್‌ಪರ್ಟ್ ಕಮಿಟಿಯನ್ನು ನೇಮಕ ಮಾಡಿದ್ದರು. ಆ ಎಕ್ಸ್‌ಪರ್ಟ್ ಕಮಿಟಿಯವರು ವಾಟರ್ ಲೈನ್ ಹಾಕಬೇಕಾದರೆ ಅದಕ್ಕೆ ಸ್ಟೀಲ್ ಪೈಪ್ ಹಾಕಬೇಕೇ ಅಥವಾ ಪ್ರೀಸ್ಟ್ರೆಸ್ಡ್ ಕಾಂಕ್ರೀಟ್ ಪೈಪ್ ಹಾಕಬೇಕೇ ಎಂಬುದನ್ನು ಪರಿಶೀಲನೆ ಮಾಡಿ ಅವರು ತಮ್ಮ ವರದಿಯಲ್ಲಿ ಪ್ರೀ ಸ್ಟ್ರೆಸ್ಡ್ ಪೈಪ್ ಹಾಕಬೇಕೆಂದು ಶಿಫಾರಸ್ಸು ಮಾಡಿದ್ದಾರೆ. ವಾಟರ್ ಸಪ್ಲೈಬೋರ್ಡಿನವರು ಬೆಂಗಳೂರು ನಗರಕ್ಕೆ ಹೆಡ್‌ವೇ 1000 ಅಡಿ ಎತ್ತರ ಬರಬೇಕು ಆದ್ದರಿಂದ ಪ್ರೀಸ್ಟ್ರೆಸ್ಡ್ ಕಾಂಕ್ರೀಟ್ ಪೈಪ್ ಪ್ರಯೋಜನವಾಗುವುದಿಲ್ಲ ಆದ್ದರಿಂದ ಸ್ಟೀಲ್‌ಪೈಪ್ ಹಾಕಬೇಕೆಂದು ತಜ್ಞರ ಅಭಿಪ್ರಾಯವನ್ನು ಬದಲಾವಣೆ ಮಾಡಿದರು, ವಾಟರ್‌ಸಪ್ಲೈ ಬೋರ್ಡಿನ ಚೇರ್ಮನ್‌ರು ತಮ್ಮ ಜೊತೆಗೆ ಕುಣಿಯುವುದಕ್ಕೆ ಇನ್ನೊಬ್ಬರು ಚೀಫ್ ಇಂಜಿನಿಯರನ್ನು ಅಡ್ವೈಸರಾಗಿ ಇಟ್ಟುಕೊಂಡಿದ್ದಾರೆ. ಅಲ್ಲದಕ್ಕೆ ಕೆಲಸಗಾರರನ್ನು ಅವರೇ ಅಪಾಯಿಂಟ್ ಮಾಡುವಂತೆ ರೆಸಲ್ಯೂಷನ್ ಪಾಸ್ ಮಾಡಿಕೊಂಡಿದ್ದಾರೆ. ವಾಟರ್‌ಸಪ್ಲೈ ಬೋರ್ಡ್‌ನವರು ಸರ್ಕಾರದ ಕೈಗೊಂಬೆಯಾಗಿದ್ದಾರೆ. ವಾಟರ್‌ಸಪ್ಲೈ ಬೋರ್ಡ್ ಸ್ಟ್ಯಾಚುಟರಿ ಬಾಡಿ ಅದರಲ್ಲಿ ಸರ್ಕಾರ ಇಂಟರ್‌ಫಿಯರ್ ಆಗುವುದಕ್ಕೆ ಅಧಿಕಾರವಿಲ್ಲವೆಂದು ಹೇಳುತ್ತಾರೆ. ಆದರೂ ವಾಟರ್ ಸಪ್ಲೈ ಬೋರ್ಡಿನವರು ಇದೇರೀತಿ ಅನ್ಯಾಯ ಮಾಡುತ್ತಾ ಹೋದರೆ ಬೆಂಗಳೂರು ನಾಗರೀಕರು ಒಂದು ಸಾವಿರ ಗ್ಯಾಲನ್ ನೀರಿಗೆ 4 ರೂಪಾಯಿಗಳನ್ನು ಕೊಡಬೇಕಾಗುತ್ತದೆ. ಆದ್ದರಿಂದ ಬೆಂಗಳೂರು ನಾಗರೀಕರು ಒಂದು ಸಾವಿರ ಗ್ಯಾಲನ್ ನೀರಿಗೆ ಖಂಡಿತವಾಗಿಯೂ 4 ರೂಪಾಯಿಗಳನ್ನು ಕೊಡುವುದಕ್ಕಾಗುವುದಿಲ್ಲ. ವಾಟರ್ ಸಪ್ಲೈ ಬೋರ್ಡನ್ನು ರದ್ದು ಮಾಡಬೇಕು. ಸರ್ಕಾರದವರು ಮಾಡಿಸುತ್ತಿರುವ ಅನೇಕ ಯೋಜನೆಗಳಂತೆ ಕಾವೇರಿಯಿಂದ ಬೆಂಗಳೂರು ನಗರಕ್ಕೆ ನೀರು ಸರಬರಾಜು ಮಾಡುವುದು ಒಂದು ಸರ್ಕಾರದ ಯೋಜನೆಯೆಂದು ತೆಗೆದುಕೊಂಡು ಇದನ್ನು ಪೂರೈಸಬೇಕು. ಇಲ್ಲದಿದ್ದರೆ ಈ ವಾಟರ್‌ಸಪ್ಲೈ ಬೋರ್ಡಿನಿಂದ ಇನ್ನು 10 ವರ್ಷಗಳಾದರೂ ಕಾವೇರಿ ನದಿಯ ನೀರನ್ನು ಬೆಂಗಳೂರಿಗೆ ತರುವುದಕ್ಕೆ ಸಾಧ್ಯವಿಲ್ಲ. ವಾಟರ್ ಸಪ್ಲೈ ಬೋರ್ಡಿನ ಚೇರ್ಮನ್ ಅವರು ಬಹಳ ಚಾಣಕ್ಯತನದಿಂದ ಇಂಜಿನಿಯರಿಂಗ್ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ನಿಗೆ ಪೈಪ್ ಲೈನ್ ಹಾಕುವ ಕೆಲಸ ಕೊಡುವುದಕ್ಕೆ ತೀರ್ಮಾನ ಮಾಡಿಕೊಂಡಿದ್ದಾರೆ. ಅವರಿಗೆ 30 ಲಕ್ಷ ರೂಪಾಯಿಗಳನ್ನು ಅಡ್ವಾನ್ಸ್ ಕೊಡಬೇಕು ಅದರ ಜೊತೆಗೆ ಸ್ಟೀಲ್ ಸಪ್ಲೈ ಮಾಡಬೇಕು ಎಂದು ತೀರ್ಮಾನ ಮಾಡಿಕೊಂಡಿದ್ದಾರೆ. ಇದಕ್ಕೆ ಬೇಕಾಗಿರತಕ್ಕ ಸ್ಟೀಲ್ 50 ಸಾವಿರ ಟನ್. ಇದನ್ನು ನಾವು ಒದಗಿಸುತ್ತೇವೆ, ಒಂದು ವೇಳೆ ನಾವು ಸ್ಟೀಲ್ ಒದಗಿಸುವುದು ನಿಧಾನವಾದರೆ ಅದರ ಡ್ಯಾಮೇಜ್ ಕಟ್ಟಿಕೊಡುತ್ತೇವೆ ಎಂದು ಹೇಳಿದ್ದಾರೆ. ಇದರ ಜೊತೆಗೆ ಗೊತ್ತಾದ ಕಾಲಕ್ಕೆ ಇವರ ಕೈಯಲ್ಲಿ ಕೆಲಸ ಮಾಡುವುದಕಾಗುವುದಿಲ್ಲ. ಈ ಕೆಲಸ ವಿಳಂಬವಾದಷ್ಟು ಬೆಂಗಳೂರಿನ ನಾಗರೀಕರಿಗೆ ತೊಂದರೆಯಾಗುತ್ತದೆ. ಈ ಪೈಪ್ ಸಪ್ಲೈ ಟೆಂಡರನ್ನು ಅಕ್ಸೆಪ್ಟ್ ಮಾಡುವುದರಲ್ಲಿ ಅನ್ಯಾಯ ನಡೆದಿದೆ. ಅದರಲ್ಲಿ ಸಂಬಂಧಪಟ್ಟವರಿಗೆಲ್ಲಾ ಹಂಚಿಕೆ ಇತ್ತು ಎಂದು ಕಾಣುತ್ತದೆ. ಇದೆಲ್ಲ ನಾಟಕ ಮಾಡಿ ತಮಗೆ ಯಾರುಬೇಕೋ ಅವರಿಗೆ ಕಂಟ್ರಾಕ್ಟ್ ಕೊಟ್ಟಿದ್ದಾರೆ. ಇದರಲ್ಲಿ ಕೋಟ್ಯಾಂತರ ರೂಪಾಯಿಗಳ ಮೋಸ ನಡೆದಿದೆ. ಸ್ಟೀಲ್ ಕೊಟ್ಟರೆ ಕಂಪನಿಯವರು ಒಂದು ಕೋಟಿ ರೂಪಾಯಿಗಳನ್ನು ಕಡಿಮೆ ಮಾಡುತ್ತೇವೆ ಎಂದು ಹೇಳಿದ್ದಾರೆ. ಅದಕ್ಕೆ ಅವರು ಒಪ್ಪಿಕೊಂಡಿದ್ದಾರೆ. ಒಂದು ಕೋಟಿ ರೂಪಾಯಿಗಳನ್ನು ಕಡಿಮೆ ಮಾಡುವುದಕ್ಕೋಸ್ಕರ ಇವರು ಎರಡೂವರೆ ಕೋಟಿ ರೂಪಾಯಿಗಳನ್ನು ಸ್ಟೀಲಗೋಸ್ಕರ ಹೆಚ್ಚು ಕೊಟ್ಟ ಹಾಗಾಗುತ್ತದೆ. ಎಂದರೆ ಒಂದೂವರೆ ಕೋಟಿ ರೂಪಾಯಿಗಳನ್ನು ಹೆಚ್ಚು ಕೊಟ್ಟ ಹಾಗಾಗುತ್ತದೆ. 30 ಲಕ್ಷ ರೂಪಾಯಿಗಳನ್ನು ಅವರಿಗೆ ಅಡ್ವಾನ್ಸ್ ಕೊಡುವುದರಲ್ಲಿದ್ದಾರೆ. ಸ್ಟೀಲ್‌ನ್ನು ಅವರಿಗೆ ಸಪ್ಲೈ ಮಾಡುವುದರಲ್ಲಿದ್ದಾರೆ. ನಮ್ಮಿಂದ ಏನಾದರೂ ತೊಂದರೆಯಾದರೆ ಅದರಿಂದ ಆಗತಕ್ಕಂಥ ನಷ್ಟವನ್ನು ಕಟ್ಟಿಕೊಡುತ್ತೇವೆ ಎಂದು ಹೇಳಿದ್ದಾರೆ. ಆ ಫರ್ಮ್‌ಗೆ ಬೇಕಾಗುವಷ್ಟು ಸ್ಟೀಲನ್ನು ಸಪ್ಲೈ ಮಾಡುವುದಕ್ಕೆ ಇವರಿಗೆ ಆಗುವುದಿಲ್ಲ. 50 ಸಾವಿರ ಟನ್ ಸ್ಟೀಲ್ ಕೊಡುವ ಯೋಗ್ಯತೆ ಇವರಿಗೆ ಇದೆಯೋ ಎಂಬುದನ್ನು ತಾವು ಯೋಚನೆ ಮಾಡಬೇಕು. ಸ್ಟೀಲ್ ಬೆಲೆ ದಿನೇ ದಿನೇ ಏರುತ್ತಾ ಇರುವ ಈ ಕಾಲದಲ್ಲಿ ಅವರಿಗೆ 30 ಲಕ್ಷ ರೂಪಾಯಿ

(ಶ್ರೀ ಟಿ. ಆರ್. ಶಾಮಣ್ಣ)

ಗಳನ್ನು ಅಡ್ವಾನ್ಸ್ ಕೊಟ್ಟು ಅವರು ಹೇಳಿದ್ದ ಹಾಗೆ ಕೇಳಿಕೆ ಪರಿಸ್ಥಿತಿ ಬಂದಿದೆ. 30 ಲಕ್ಷ ರೂಪಾಯಿಗಳ ಜೊತೆಗೆ ಅವರಿಂದ ಆಗತಕ್ಕ ನಷ್ಟವನ್ನು ಸಹ ಕೊಡಬೇಕಾಗುತ್ತದೆ. ಇದರಿಂದ ಕಾವೇರಿ ನದಿಯಿಂದ ನೀರು ತರುವ ಭ್ರಮೆ ಕೂಡ ಇರುವುದಿಲ್ಲ. ಈ ಯೋಜನೆಯಿಂದ ಮುಂದೆ ನಾಗರೀಕರು ತುಂಬಾ ಕಷ್ಟ ಪಡಬೇಕಾಗುತ್ತದೆ. ಈ ವಾಟರ್‌ಬೋರ್ಡನ್ನು ಕೂಡಲೇ ರದ್ದುಮಾಡಿ, ಈ ಒಂದು ಕೆಲಸವನ್ನು ಲೋಕೋಪಯೋಗಿ ಇಲಾಖೆಯುವರಿಗೇ ವಹಿಸಿಕೊಟ್ಟರೆ ಕೆಲಸ ಸುಸೂತ್ರವಾಗಿ ನಡೆಯುತ್ತದೆ. ಖರ್ಚು ಕೂಡ ಕಡಿಮೆಯಾಗುತ್ತದೆ. ನಾಗರೀಕರಿಗೂ ಕೂಡ ತೊಂದರೆಯಾಗುವುದಿಲ್ಲ. ಸರ್ಕಾರದ ಬಳಿ ಎಲ್ಲ ಮೆಷಿನರಿ ಸಾಮಾನುಗಳೂ ಕೂಡ ಇರುವುದರಿಂದ ಈ ಕೆಲಸವನ್ನು ಲೋಕೋಪಯೋಗಿ ಇಲಾಖೆಯ ಮೂಲಕವೇ ಮಾಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ವಿಶ್ವಬ್ಯಾಂಕಿನವರು ಸಾಲ ಕೊಡುವುದಿಲ್ಲವೆಂದು ಹೇಳಿದ ಮೇಲೆ ಸರ್ಕಾರದವರೇ ಈ ಕೆಲಸ ನಡೆಸಬೇಕು. ಇವತ್ತಿನ ದಿವಸ ವಾಟರ್ ಬೋರ್ಡಿನಲ್ಲಿ ಹತ್ತಾರು ಜನ ಇಂಜಿನಿಯರ್‌ಗಳು ಕೆಲಸವಿಲ್ಲದೆ ಇದ್ದಾರೆ. ಆದ್ದರಿಂದ ಬೋರ್ಡನ್ನು ಕೂಡಲೇ ರದ್ದು ಮಾಡಬೇಕು. ಒಂದು ಪಕ್ಷ ಏನಾದರೂ ಆ ಕಂಪನಿಯವರಿಗೆ 30 ಲಕ್ಷ ರೂಪಾಯಿಗಳ ಅಡ್ವಾನ್ಸ್ ಕೊಟ್ಟರೆ ಅದರಿಂದ ಆಗತಕ್ಕ ನಷ್ಟವನ್ನು ಬೋರ್ಡಿನ ಮೆಂಬರ್ಸ್ ಕೊಡಬೇಕಾಗುತ್ತದೆಂದು ಹೇಳುತ್ತೇನೆ. ಅಲ್ಲದೆ ಬೋರ್ಡಿನವರು ಆ ಕಂಪನಿಯವರೊಡನೆ ಹಣ ಹಂಚಿಕೊಳ್ಳುವ ಬಗ್ಗೆ ಭಾಗಿಗಳಾಗಿದ್ದಾರೆಂದು ಮುಂದೆ ಘೋಷಣೆ ಮಾಡಬೇಕಾದ ಸಂದರ್ಭ ಬರುತ್ತದೆ. ಆದ್ದರಿಂದ 30 ಲಕ್ಷ ರೂಪಾಯಿಗಳ ಅಡ್ವಾನ್ಸನ್ನು ಇ. ಸಿ. ಸಿ ಅವರಿಗೆ ಕೊಡಬೇಡಿ. ವಾಟರ್‌ಬೋರ್ಡಿನ ಅಧ್ಯಕ್ಷರು ಇ.ಸಿ.ಸಿ. ಅವರಿಗೆ ನಾವೇ ಪೈಪ್‌ಹಾಕುವ ಜಾಗದಲ್ಲಿ ಮಣ್ಣು ಅಗೆದು ಕೊಡುತ್ತೇವೆಂದು ಮತ್ತು ಜಪಾನ್‌ನಿಂದ ಸ್ಟೀಲ್‌ನ್ನು ತರಿಸಿಕೊಡುತ್ತೇವೆಂದು ಹೇಳಿದ್ದಾರೆ. ಇದರಿಂದ ಎಷ್ಟು ಹೆಚ್ಚಿನ ಖರ್ಚು ಬರುತ್ತದೆಂಬುದನ್ನು ಸಹ ಲೆಕ್ಕ ಹಾಕಬೇಕು. ಜಪಾನ್‌ದೇಶಕ್ಕೆ ನಮ್ಮ ರಾಜ್ಯದಿಂದಲೇ ಕಬ್ಬಿಣದ ಅದಿರು ಹೋಗುತ್ತದೆ, ಅಲ್ಲಿಂದ ಅದಿರು ಕಬ್ಬಿಣವಾಗಿ ಮತ್ತೆ ನಮ್ಮ ರಾಜ್ಯಕ್ಕೆ ಬರಬೇಕಾದರೆ ಅದರ ಬೆಲೆ ಎಷ್ಟಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ಜಪಾನ್‌ದೇಶದಿಂದ ಸ್ಟೀಲ್‌ನ್ನು ತರಿಸಿಕೊಡುವುದಕ್ಕಾಗದಿದ್ದರೆ ರಷ್ಯಾದಿಂದಲಾದರೂ ಕೂಡ ತರಿಸಿಕೊಡುತ್ತೇವೆಂಬ ಮಾತನ್ನು ಸಹ ಹೇಳಿದ್ದಾರಂತೆ. ರಷ್ಯಾ ದೇಶದಿಂದ ತರಿಸಬೇಕಾದರೆ ಫಾರಿನ್ ಎಕ್ಸ್‌ಛೇಂಜ್ ಎಷ್ಟಾಗುತ್ತದೆ ಎಂಬುದನ್ನು ನಾವು ಯೋಚನೆ ಮಾಡಬೇಕಾಗುತ್ತದೆ. ಸ್ಟೀಲ್‌ನ ಬೆಲೆ ದಿನದಿನಕ್ಕೂ ಜಾಸ್ತಿಯಾಗುತ್ತಿದೆ. ಆದಕಾರಣ ಈಗ ಇರತಕ್ಕಂಥ ಕಂಟ್ರಾಕ್ಟನ್ನು ರದ್ದು ಮಾಡಿ ಈ ಕೆಲಸವನ್ನು ನೇರವಾಗಿ ಸರ್ಕಾರದವರೇ ನಡೆಸಬೇಕು, ತಮಗೆ ಬೇಕಾದವರಿಗೆ ಸಹಾಯ ಮಾಡುವುದಕೋಸ್ಕರ ಈ ಒಂದು ವಾಟರ್ ಬೋರ್ಡನ್ನು ನೆಪ ಮಾತ್ರಕ್ಕೆ ಮುಂದುವರಿಸಿಕೊಂಡು ಹೋಗುತ್ತಿದ್ದಾರೆಂಬ ಮಾತನ್ನು ನಾನು ಖಂಡಿತವಾಗಿ ಹೇಳಬೇಕಾಗಿದೆ. ಇನ್ನು ಮುಂದೆಯೂ ಕೂಡ ಈ ಬೋರ್ಡನ್ನು ಮುಂದುವರೆಸಿದರೆ ಅದನ್ನು ಬೆಂಗಳೂರಿನ ನಾಗರೀಕರು ಖಂಡಿತ ಸಹಿಸುವುದಿಲ್ಲ. 1000 ಗ್ಯಾಲನ್ ನೀರಿಗೆ ಒಂದು ರೂಪಾಯಿ ಚಾರ್ಜು ಮಾಡುತ್ತಿದ್ದುದನ್ನು ಒಂದು ರೂಪಾಯಿ ಮುವತ್ತು ಪೈಸೆಗೆ ಹೆಚ್ಚಿಸಿದಾಗಲೇ ನಾವು ಬಹಳಷ್ಟು ಗಲಾಟೆ ಮಾಡಿದ್ದೇವೆ. ಈ ವಾಟರ್ ಬೋರ್ಡ್ ಮೂಲಕ ಈ ಕೆಲಸವನ್ನು ಮಾಡಿಸಿದರೆ ಮುಂದೆ ಸಾವಿರ ಗ್ಯಾಲನ್ ನೀರಿಗೆ 4 ರೂಪಾಯಿ ಚಾರ್ಜು ಆಗಬಹುದು, ಆದ್ದರಿಂದ ಅವರ ಮೂಲಕ ಕೆಲಸ ಮಾಡಿಸಬಾರದು. ವಾಟರ್‌ಬೋರ್ಡಿನವರಿಗೂ ಮತ್ತು ಇ. ಸಿ. ಸಿ. ಅವರಿಗೂ ಒಳಗೊಳಗೇ ಏನೇನು ವ್ಯವಹಾರ ನಡೆದಿದೆ ಎಂಬುದನ್ನು ನನ್ನ ಸ್ನೇಹಿತರು ಮಾತನಾಡುವಾಗ ತಿಳಿಸುತ್ತಾರೆ. ಅಕ್ರಮವಾದಂಥ ವ್ಯವಹಾರಗಳನ್ನು ನಡೆಸಿದ್ದಾರೆ. ಆದಕಾರಣ ಇ. ಸಿ. ಸಿ. ಕಂಪನಿಯವರಿಗೆ ಖಂಡಿತವಾಗಿಯೂ ಕೂಡ 30 ಲಕ್ಷ ರೂಪಾಯಿಗಳನ್ನು ಅಡ್ವಾನ್ಸ್ ಆಗಿ ಕೊಡಬಾರದು. ಆ ರೀತಿ ಏನಾದರೂ ಕೊಟ್ಟರೆ ಅದಕ್ಕೆ ಬೋರ್ಡ್ ಮೆಂಬರ್ಸ್ ಜವಾಬ್ದಾರರಾಗಬೇಕಾಗುತ್ತದೆ. ಸಾರ್ವಜನಿಕ ಹಣವನ್ನು ಈ ಮೂಲಕ ದುರುಪಯೋಗ ಮಾಡುವುದು ಸರಿಯಲ್ಲ. ಈ ಕೂಡಲೇ ಬೋರ್ಡನ್ನು ರದ್ದು ಮಾಡುವುದಕ್ಕೆ ಕಾರ್ಯಕ್ರಮ ಕೈಕೊಳ್ಳಬೇಕು. ಒಂದು ಪಕ್ಷ ಏನಾದರೂ ಬೋರ್ಡನ್ನು ಮುಂದುವರಿಸಿ ಆ ಕಂಪನಿಯವರಿಗೆ 30 ಲಕ್ಷ ರೂಪಾಯಿಗಳನ್ನು ಅಡ್ವಾನ್ಸ್ ಆಗಿ ಕೊಟ್ಟರೆ, ಈ ಅನ್ಯಾಯವನ್ನು ಬೆಂಗಳೂರಿನ 15 ಲಕ್ಷ ನಾಗರೀಕರಿಗೆ ನೋಟೀಸ್ ಹಂಚುವ ಮೂಲಕ ತಿಳಿಸುತ್ತೇವೆ. ಮನೆ ಮನೆಗೂ ಕೂಡ ಹೋಗಿ ಆಗಿರುವ ಅನ್ಯಾಯವನ್ನು ಹೇಳುತ್ತೇವೆ. ಆದ್ದರಿಂದ ಕೂಡಲೇ ವಾಟರ್ ಬೋರ್ಡನ್ನು ರದ್ದು ಮಾಡಬೇಕು. ಇದೇ ತಿಂಗಳ 30 ರಂದು ಆ ಬೋರ್ಡಿನ ಅವಧಿ ಮುಗಿಯುತ್ತದೆ. ಮತ್ತೆ ಯಾವ ಕಾರಣಕ್ಕೂ ಕೂಡ ಆ ತಾರೀಖನ್ನು ಮುಂದುವರಿಸಬಾರದೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ (ಚಿಕ್ಕನಾಯಕನಹಳ್ಳಿ).—ಮಾನ್ಯ ಅಧ್ಯಕ್ಷರೇ, ನಮ್ಮ ಭಾರತ ದೇಶದಲ್ಲಿ 1970ನೇ ಇಸವಿಯಲ್ಲಿ ಏನಾದರೂ ಒಂದು ದೊಡ್ಡ ಹಗರಣ ನಡೆದಿದ್ದರೆ ಈ ಟೆಂಡರ್ ಬಗ್ಗೆ ನಡೆದಿರುವುದಕ್ಕಿಂತ ಬೇರೆ ಒಂದು ಹಗರಣ ನಡೆದಿಲ್ಲ ಎಂದು ಹೇಳಬೇಕಾಗುತ್ತದೆ. 1962ನೇ ಇಸವಿಯಿಂದ ಇಲ್ಲಿಯವರೆಗೆ ಈ ವಾಟರ್ ಬೋರ್ಡಿನ ಇತಿಹಾಸವನ್ನು ನೋಡಿದರೆ, ಅಂದಿನಿಂದ ಇಲ್ಲಿಯವರೆಗೆ ಏನೇನು ಮೋಸ ನಡೆದಿದೆ ಎಂಬುದು ಗೊತ್ತಾಗುತ್ತದೆ. 1962ನೇ ಇಸವಿಯಲ್ಲಿ ಶ್ರೀಮಾನ್ ನಿಜಲಿಂಗಪ್ಪನವರ ಮಂತ್ರಿಮಂಡಲ ಇದ್ದಾಗ ಒಂದು ಹೈ-ಪವರ್ ಬಾಡಿ ಎಂಬುದಾಗಿ ಮಾಡಿದರು. ಅವರ ಉದ್ದೇಶ ಬೆಂಗಳೂರು ನಗರಕ್ಕೆ ಕಾವೇರಿ ನದಿಯ ನೀರನ್ನು ಸರಬರಾಜು ಮಾಡುವ ಬಗ್ಗೆ ಒಂದು ಸ್ಕೀಮನ್ನು ತಯಾರು ಮಾಡುವುದಕ್ಕಾಗಿ. ಅದಕ್ಕೆ ಮುಖ್ಯಮಂತ್ರಿಗಳೇ ಅಧ್ಯಕ್ಷರು, ಲೋಕೋಪಯೋಗಿ ಇಲಾಖೆಯ ಮಂತ್ರಿಗಳು ಉಪಾಧ್ಯಕ್ಷರು. ಡೈರೆಕ್ಟರ್ ಆಫ್ ಪಬ್ಲಿಕ್ ಹೆಲ್ತ್, ಡೆಹಲಿ, ಮುಂಬೈನ ವಾಟರ್ ಸಪ್ಲೈ ಬೋರ್ಡಿನ ಮುಖ್ಯ ಇಂಜನಿಯರ್, ನಮ್ಮ ರಾಜ್ಯದ ಚೀಫ್-ಇಂಜಿನಿಯರ್ ಆ ಬಾಡಿಯಲ್ಲಿ ಸದಸ್ಯರಾಗಿದ್ದರು. ಈ ಪ್ರಕಾರ ತಜ್ಞರಿಂದ ಕೂಡಿದ ಒಂದು ಸಮಿತಿಯ ರಚನೆ ಆ ಕಾಲದಲ್ಲಿ ಆಯಿತು. ಬೆಂಗಳೂರಿಗೆ ಕಾವೇರಿ ನೀರನ್ನು ಸರಬರಾಜು ಮಾಡುವ ವಿಚಾರದಲ್ಲಿ ಈ ಸಮಿತಿಯವರು ಒಂದು ಟೆಕ್ನಿಕಲ್ ಕಮಿಟಿಯನ್ನು ನೇಮಕ ಮಾಡಿದರು. ಈ ಟೆಕ್ನಿಕಲ್ ಕಮಿಟಿಯವರು 26 ಕೋಟಿ ರೂಪಾಯಿಗಳ ಒಂದು ಯೋಜನೆಯನ್ನು ತಯಾರು ಮಾಡಿದರು. ಈ ಯೋಜನೆಯಲ್ಲಿ ಯಾವ ಯಾವ ಪೈಪ್‌ಗಳನ್ನು ಉಪಯೋಗಿಸಬೇಕು ಎಂಬುದನ್ನು ವಿವರಿಸಿದ್ದರು. ಮತ್ತು 60 ಲಕ್ಷ ಗ್ಯಾಲನ್ ನೀರು ಪ್ರತಿದಿನ ಬೆಂಗಳೂರಿಗೆ ಈ ಯೋಜನೆಯಿಂದ ಒದಗಿಸುವುದಕ್ಕೆ ಸಾಧ್ಯ ಎಂದು ಲೆಕ್ಕ ಹಾಕಿದ್ದರು. ಈ ಯೋಜನೆಗೆ ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಯವರೇ 1964 ರಲ್ಲಿ ಫೌಂಡೇಷನ್ ಸ್ಟೋನ್ ಕೂಡ ಹಾಕಿದರು. ಟೆಕ್ನಿಕಲ್ ಕಮಿಟಿಯವರು ಒಂದು ಬುಕ್‌ಲೆಟ್ ಕೂಡ ಮಾಡಿಸಿದ್ದಾರೆ. ಅದರಲ್ಲಿ ಎಲ್ಲ ವಿವರಗಳು ಸಹ ಇವೆ. 26 ಕೋಟಿ ರೂಪಾಯಿಗಳ ಯೋಜನೆಯಲ್ಲಿ ಉಕ್ಕು ಮತ್ತು ಪ್ರಿಸ್ಟ್ರೆಸ್ಡ್ ಕಾಂಕ್ರೀಟ್‌ನಿಂದ ಮಾಡಿದ ಪೈಪ್‌ಗಳನ್ನು ಉಪಯೋಗಿಸಬೇಕೆಂದು ಹೇಳಿದ್ದರು. ಈ ಮಧ್ಯೆ ಈ ಯೋಜನೆಗೆ ಬೇಕಾಗುವ ಹಣವನ್ನು ಸಾಲವಾಗಿ ಕೊಡುವುದಕ್ಕೆ ವಿಶ್ವಬ್ಯಾಂಕ್ ಮುಂದೆ ಬಂತು. ನಿಮ್ಮ ಇಂಜಿನಿಯರ್‌ಗಳು ತಯಾರು ಮಾಡಿದ ರಿಪೋರ್ಟ್ ಆಧಾರದ ಮೇಲೆ ನಾವು ಸಾಲ ಕೊಡುವುದಕ್ಕಾಗುವುದಿಲ್ಲ, ವಿದೇಶೀ ಸಂಸ್ಥೆಯೊಂದು ಈ ವಿಚಾರದಲ್ಲಿ ಪರಿಶೀಲನೆ ಮಾಡಿ ಒಂದು ರಿಪೋರ್ಟ್ ಕೊಟ್ಟರೆ ಸಾಲ ಕೊಡುವುದನ್ನು ಪರಿಶೀಲನೆ ಮಾಡುತ್ತೇವೆಂದು ವಿಶ್ವಬ್ಯಾಂಕ್‌ನವರು ಅನಂತರ ತಿಳಿಸಿದರು. ಅದರ ಪ್ರಕಾರ ಲಂಡನ್‌ನಲ್ಲಿರುವ ಬಿನ್ನಿ ಅಂಡ್ ಕಂಪನಿಯವರಿಗೆ ಈ ಕೆಲಸವನ್ನು ವಹಿಸಿದರು. ಅವರು 36 ಕೋಟಿ ರೂಪಾಯಿಗಳ ಒಂದು ಯೋಜನೆಯನ್ನು ತಯಾರು ಮಾಡಿಕೊಟ್ಟು ಅದಕ್ಕೆ 19 ಲಕ್ಷ ರೂಪಾಯಿಗಳ ಕನ್ಸಲ್‌ಟೆಡ್ ಫೀಯನ್ನು ತೆಗೆದುಕೊಂಡರು. ಉಕ್ಕಿನ ಪೈಪನ್ನೇ ಉಪಯೋಗ ಮಾಡುವಂತೆ ಅವರು ತಿಳಿಸಿದರು. ನಂತರ ವಾಟರ್ ಬೋರ್ಡ್‌ನವರು 26 ಕೋಟಿ ರೂಪಾಯಿಗಳ ಯೋಜನೆ ಮತ್ತು 36 ಕೋಟಿ ರೂಪಾಯಿಗಳ ಯೋಜನೆ, ಇವೆರಡನ್ನೂ ಕೂಡ ಪರಿಶೀಲನೆ ಮಾಡಿ ಮತ್ತು ವಿಚಾರವಿನಿಮಯ ಮಾಡಿ ಎಲ್ಲ ಉಕ್ಕಿನಿಂದ ಮಾಡಿದ ಪೈಪ್‌ಗಳ ಬಗ್ಗೆ ಮತ್ತು ಉಕ್ಕು ಮತ್ತು ಪ್ರಿಸ್ಟ್ರೆಸ್ಡ್ ಕಾಂಕ್ರೀಟ್‌ನಿಂದ ಮಾಡಿದ ಪೈಪ್‌ಗಳ ಬಗ್ಗೆ ಟೆಂಡರ್ ಕರೆದರು. ಟೆಂಡರ್ ಕರೆಯುವುದಕ್ಕೆ ಮೊದಲು ಬೋರ್ಡಿನಲ್ಲಿ ಏನು ವಿಚಾರವಿನಿಮಯ ನಡೆದಿದೆ ಎಂಬುದು ಗೊತ್ತಿಲ್ಲ. ಟೆಂಡರ್ ಕಾಲ್‌ಫಾರ್ ಮಾಡಿದ ಮೇಲೆ 10 ಕಂಪನಿಯವರು ಟೆಂಡರ್ ಹಾಕಿದರು. ಇವರ ಪೈಕಿ ಎಲ್ಲ ಉಕ್ಕಿನ ಪೈಪ್ ಬಗ್ಗೆ ಇ. ಸಿ. ಸಿ. ಅವರದ್ದೇ ಕಡಿಮೆ ಮೊಬಲಗಿನ ಟೆಂಡರ್ ಎಂದು ತೀರ್ಮಾನ ಮಾಡಿ ಅವರಿಗೆ ಕೆಲಸ ವಹಿಸಿದ್ದಾರೆ. ಈ ಇ. ಸಿ. ಸಿ, ಮದ್ರಾಸ್ (ಲಿ) ಅವರ ಒಳ ಮತ್ತು ಹೊರ ಹೆಸರು ಒಂದೊಂದು ತರಹ ಇದೆ. ಅವರಿಗೆ ಯಾವ ತರಹದ ಕೆಲಸವನ್ನು ಸಹ ಮಾಡಿ ಅನುಭವವಿಲ್ಲ. ಅಂಥವರಿಗೆ ಈ ಕೆಲಸ ಮಾಡಲು ವಹಿಸಿದ್ದಾರೆ. ಮತ್ತು ನಾನಾ ರೀತಿಯ ರಿಯಾಯಿತಿಗಳನ್ನು ಬೇರೆ ತೋರಿಸಿದ್ದಾರೆ. ಈ ವಿಚಾರ ಪತ್ರಿಕೆಗಳಲ್ಲಿ ಕೂಡ ಬಂದಿದೆ. ಈ ಕಂಪನಿಯವರಿಗೆ ಇದುವರೆಗೆ ಬೇರೆ ಕಡೆ ಪೈಪ್‌ಲೈನ್ ಹಾಕಿದ ಅನುಭವ ಕೂಡ ಇಲ್ಲ, ಇಂತಹವರಿಗೆ ಅಡ್ವಾನ್ಸ್ ಕೊಟ್ಟು ಕೆಲಸ ವಹಿಸಿದ್ದಾರೆ. ಅಂದರೆ ಇದರಲ್ಲಿ ವಾಟರ್ ಬೋರ್ಡಿನವರಿಗೂ ಮತ್ತು ಕಂಪನಿಯವರಿಗೂ ಲಾಭದ ಹಂಚಿಕೆ ಇರುವುದು ಎದ್ದು ಕಾಣುತ್ತಿದೆ. ಯಾವ ಒಂದು ಅನುಭವವೂ ಕೂಡ ಇಲ್ಲದ ಈ ಕಂಪನಿಯವರಿಗೆ 13 ಕೋಟಿ ರೂಪಾಯಿಗಳ ಕೆಲಸವನ್ನು ವಹಿಸಿರಬೇಕಾದರೆ ಇದರಲ್ಲಿ ಏನೋ ಗೂಡಾರ್ಥ ಇದೆ. ಈ ಇ. ಸಿ. ಸಿ. ಕಂಪನಿ ಎಂ. ಕೆ. ಎಂ. ಕಂಪನಿ ಎಂಬ ಇನ್ನೊಂದು ಹೆಸರು ಕೂಡ ಇದೆ. ಎಂ. ಕೆ. ಎಂ. ಇದರ ಅರ್ಥ ಏನೆಂದರೆ. ಎಂ ಅಂದರೆ ಮುಗದಮ್, ಕೆ. ಅಂದರೆ ಖೇಣಿ ಎಂ. ಅಂದರೆ ಮೇಗಾವಿ ಎಂಬುದಾಗಿ. ಇವರು ಮೂರು ಜನ ಸೇರಿ ಏನಾದರು ಇ. ಸಿ. ಸಿ. ಕಂಪನಿಯವರಿಗೆ ಕೆಲಸ ಕೊಡಬೇಕೆಂದು ದೃಢನಿರ್ಧಾರ ಮಾಡಿದ್ದರೆ ಸರ್ಕಾರದ ನಿಲುವು ಯಾವ ರೀತಿ ಇದೆ ಎಂಬುದು ಅರ್ಥವಾಗುತ್ತದೆ. ಇವತ್ತಿನದಿವಸ ಮೈಸೂರು ರಾಜ್ಯದಲ್ಲಿ ಯಾವ ದೊಡ್ಡ ಚೀಫ್

(ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ)

ಇಂಜಿನಿಯರ್‌ಗಳು ಹುಟ್ಟಿಯೇ ಇಲ್ಲವೇ, ಯಾವ ಒಂದು ದೊಡ್ಡ ಕೆಲಸವನ್ನೂ ಸಹ ಮಾಡಿಯೇ ಇಲ್ಲವೇ ಎಂದು ಕೇಳುತ್ತೇನೆ. ಇಡೀ ಭರತಖಂಡದಲ್ಲಿಯೇ ಹೆಸರು ಪಡೆದಂತಹ ಇಂಜಿನಿಯರ್‌ಗಳು ನಮ್ಮ ರಾಜ್ಯದಲ್ಲಿ ಹಿಂದೆ ಇದ್ದರು. ಆದರೆ ಇಂದಿನ ಇಂಜಿನಿಯರ್‌ಗಳು ಮಾಡುತ್ತಿರುವ ಕೆಲಸವನ್ನು ನೋಡಿದರೆ ಅವರ ಮುಖಕ್ಕೆ ಮಸಿ ಬಳಿಯಬೇಕಾಗಿದೆ. ಮೊದಲಿನ ಟೆಕ್ನಿಕಲ್ ರಿಪೋರ್ಟ್‌ನಲ್ಲಿ ಉಕ್ಕು ಮತ್ತು ಪ್ರಿಸ್ಟ್ರೆಸ್ಡ್ ಕಾಂಕ್ರೀಟಿನಿಂದ ಮಾಡಿದ ಪೈಪ್‌ಗಳನ್ನು ಉಪಯೋಗಿಸಬಹುದು ಎಂದು ಹೇಳಲಾಗಿತ್ತು. ಬಿನ್ನಿ ಅಂಡ್ ಕಂಪನಿಯವರು ಎಲ್ಲ ಉಕ್ಕಿನ ಪೈಪನ್ನೇ ಉಪಯೋಗಿಸ ಬೇಕೆಂದು ಹೇಳಿದ್ದರು. ನಂತರ 36 ಕೋಟಿ ರೂಪಾಯಿಗಳ ಯೋಜನೆ ಬೇಡ, 26 ಕೋಟಿ ರೂಪಾಯಿಗಳ ಯೋಜನೆಯನ್ನೇ ಕೈಗೊಳ್ಳಬೇಕೆಂದು ತೀರ್ಮಾನ ಮಾಡಿದ ವಾಟರ್ ಬೋರ್ಡಿನವರು ಕೇವಲ ಉಕ್ಕು ಮತ್ತು ಪ್ರಿಸ್ಟ್ರೆಸ್ಡ್ ಕಾಂಕ್ರೀಟ್‌ನಿಂದ ಮಾಡಿದ ಪೈಪ್‌ಗಳ ಬಗ್ಗೆ ಟೆಂಡರ್ ಕರೆಯದೆ ಅದರ ಜೊತೆಗೆ ಎಲ್ಲ ಉಕ್ಕಿನ ಬಗ್ಗೆ ತಯಾರಾದ ಪೈಪ್‌ಗಳ ಬಗ್ಗೆಯೂ ಕೂಡ ಟೆಂಡರ್ ಕರೆದಿದ್ದು ಏತಕ್ಕೋಸ್ಕರ ಎಂದು ಕೇಳುತ್ತೇನೆ. ಯಾವ ಪೈಪನ್ನು ಉಪಯೋಗಿಸಬೇಕು, ಯಾವ ಪೈಪನ್ನು ಉಪಯೋಗಿಸಬಾರದು ಎಂಬ ಬಗ್ಗೆ ಮೊದಲೇ ಏತಕ್ಕೆ ತೀರ್ಮಾನ ಕೈಕೊಳ್ಳಲಿಲ್ಲ ಎಂದು ಕೇಳುತ್ತೇನೆ ? ಟೆಂಡರ್ ಕರೆದ ಮೇಲೆ ಎಲ್ಲ ಉಕ್ಕಿನ ಪೈಪ್‌ಗಳ ಬಗ್ಗೆ ಬಂದಿದ್ದ ಟೆಂಡರನ್ನು ಅಪ್ರೂವ್ ಮಾಡಿದ್ದಕ್ಕೆ ಕಾರಣವೇನಿತ್ತು ಎಂದು ಕೇಳುತ್ತೇನೆ ! ಈ ಬೋರ್ಡ್ ರಚನೆಯಾದಾಗ ಇದ್ದ ಚೀಫ್-ಇಂಜಿನಿಯರ್ ಇವತ್ತು ಅವರ ಚೇರ್‌ಮನ್ ಕೂಡ ಆಗಿದ್ದಾರೆ. ಇವರೇ ರಾಜ, ಮಂತ್ರಿ, ಸೇನಾಪತಿ ಎಲ್ಲ ಕೂಡ ಆಗಿದ್ದಾರೆ. ಎಲ್ಲ ಪಾತ್ರವನ್ನು ಇವರೇ ಮಾಡುತ್ತಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ಇವರೊಬ್ಬರಿಗಾಗಿ ಸರ್ಕಾರ ತಿಂಗಳಿಗೆ 5-6 ಸಾವಿರ ರೂಪಾಯಿಗಳ ವರೆಗೆ ಖರ್ಚು ಮಾಡುತ್ತಿದೆ. ಇಷ್ಟೊಂದು ಹಣ ಬೇರೆ ಕಡೆ ಸಂಪಾದನೆ ಮಾಡುವುದಕ್ಕೆ ಇವರಿಗೆ ಸಾಧ್ಯವಿಲ್ಲ. ಈ ವಿಚಾರದಲ್ಲಿ ಒಂದು ಪ್ರಕರಣವನ್ನೇ ನಡೆಸಿದ್ದಾರೆಂದು ಹೇಳಿದರೆ ತಪ್ಪಾಗಲಾರದು ತಮಗೆ ಇಷ್ಟಬಂದಂತೆ ಈ ಚೇರ್‌ಮನ್ ನಡೆದುಕೊಳ್ಳುತ್ತಿದ್ದಾರೆ. ಈ ಬೋರ್ಡ್‌ನಲ್ಲಿ ಚೇರ್ಮನ್ ಅಲ್ಲದೆ ಒಬ್ಬರು ಲಾಯರ್, ಸರ್ಕಾರ ನಾಮಿನೇಟ್ ಮಾಡಿದ ಸದಸ್ಯರು, ಮತ್ತು ರಿಟೈರ್ ಆದಂತಹ ಒಬ್ಬರು ಚೀಫ್ ಇಂಜಿನಿಯರ್ ಇದ್ದಾರೆ. ಅಲ್ಲದೆ ಚೇರ್‌ಮನ್‌ಗೆ ಸಹಾಯ ಮಾಡಲು ನಾಲ್ಕು ಜನ ಚೀಫ್ ಇಂಜಿನಿಯರ್‌ಗಳು, ಮತ್ತು ಒಬ್ಬರು ಟೆಕ್ನಿಕಲ್ ಅಸಿಸ್ಟೆಂಟ್ ಕೂಡ ಇದ್ದಾರೆ. ಇವರೆಲ್ಲರೂ ಕೂಡ ಸೇರಿ ಮೊದಲಿನ ಟೆಕ್ನಿಕಲ್ ರಿಪೋರ್ಟ್ ಪ್ರಕಾರ ಉಕ್ಕು ಮತ್ತು ಪ್ರಿಸ್ಟ್ರೆಸ್ಡ್ ಕಾಂಕ್ರೀಟ್ ಪೈಪ್ ಬಗ್ಗೆ ಟೆಂಡರ್ ಕರೆಯಬೇಕೆಂದು ತೀರ್ಮಾನ ಮಾಡಿದ್ದರೂ ಕೂಡ ವಾಟರ್‌ಬೋರ್ಡ್ ಚೇರ್ಮನ್ನರವರು ಎರಡು ರೀತಿಯ ಪೈಪುಗಳ ಬಗ್ಗೆ ಟೆಂಡರ್ ಕರೆದರು. ಈ ರೀತಿ ಕರೆಯುವುದಕ್ಕೆ ಕಾರಣ ವೇನಿತ್ತು ಎಂಬ ಬಗ್ಗೆ ಮಾನ್ಯಮಂತ್ರಿಗಳು ರುಜುವಾತು ಕೊಡಬೇಕು. ಈ ವಿಚಾರದಲ್ಲಿ ವಾಟರ್ ಬೋರ್ಡ್ ಚೇರ್‌ಮನ್‌ರವರು ತಾವೊಬ್ಬರೇ ಬುದ್ಧಿವಂತರು, ಉಳಿದ ಇಂಜಿನಿಯರ್ ದಡ್ಡರು ಎಂದು ತಿಳಿದುಕೊಂಡಿರುವಂತೆ ಕಾಣುತ್ತದೆ. ಈಗ ಬೋರ್ಡಿನಲ್ಲಿರತಕ್ಕಂಥ ರಿಟೈರ್ಡ್ ಚೀಫ್ ಇಂಜಿನಿಯರ್‌ಗೂ ಮತ್ತು ಅಲ್ಲಿಯ ಚೇರ್‌ಮನ್‌ಗೂ ಕೆಲವೊಂದು ವಿಷಯಗಳಲ್ಲಿ ಭಿನ್ನಾಭಿಪ್ರಾಯ ಬಂದು ಅವರು ಮೀಟಿಂಗ್‌ಗೆ ಬರುತ್ತಿಲ್ಲ ಎಂದು ಕೇಳಿದ್ದೇನೆ. 1969ನೇ ಡಿಸೆಂಬರ್ ತಿಂಗಳಿಂದ ಮೀಟಿಂಗ್‌ಗೆ ಹೋಗುವುದನ್ನು ನಿಲ್ಲಿಸಿದ್ದಾರೆಂದು ಕೇಳಿದ್ದೇನೆ. ಇದಕ್ಕೆ ಕಾರಣವೇನು ಎಂಬುದನ್ನು ಮುಖ್ಯಮಂತ್ರಿಗಳು ಕಾಗದ ಬರೆದು ತಿಳಿಸಿದ್ದಾರೆಯೇ, ವಿಚಾರವಿನಿಮಯ ಮಾಡಿದ್ದಾರೆಯೇ ಎಂದು ಕೇಳುತ್ತೇನೆ. ತಜ್ಞರು ಕೊಟ್ಟಿರತಕ್ಕಂಥ ವರದಿಗೆ ವಿರುದ್ಧವಾಗಿ ಎಲ್ಲ ಉಕ್ಕಿನ ಪೈಪ್ ಬಗ್ಗೆ ಟೆಂಡರ್ ಅಂಗೀಕರಿಸಿರುವುದನ್ನು ನೋಡಿದರೆ ಸರ್ಕಾರದ ಹಣವನ್ನು ನಿಜವಾಗಿಯೂ ಕೆಲವರು ಸೇರಿಕೊಂಡು ದೋಚುವುದಕ್ಕೆ ಹೊಂಚು ಹಾಕಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ದೊಡ್ಡ ದೊಡ್ಡ ತಜ್ಞರು ಕೊಟ್ಟಿರತಕ್ಕಂಥ ವರದಿಗೆ ವಿರುದ್ಧವಾಗಿ ಚೇರ್‌ಮನ್ ಅವರು ಯಾವುದೋ ಒಂದು ಕಂಪನಿಗೆ ಸಹಾಯ ಮಾಡಬೇಕೆಂದು ಹೊರಟಿದ್ದಾರೆ. ಇದಕ್ಕೆ ಸರ್ಕಾರ ಮಣಿಯಬಾರದು. ಎರಡು ರೀತಿಯ ಪೈಪ್‌ಗಳ ಬಗ್ಗೆ ಟೆಂಡರ್ ಕರೆಯುವ ಪ್ರಮೇಯ ಏನಿತ್ತು ಎಂದು ಕೇಳುತ್ತೇನೆ. ಕರೆದ ಮೇಲೆ ಎಲ್ಲ ಉಕ್ಕಿನ ಪೈಪ್ ಸಪ್ಲೈ ಬಗ್ಗೆ ಟೆಂಡರನ್ನು ಒಪ್ಪಿಕೊಂಡು ಉಕ್ಕು ಮತ್ತು ಪ್ರಿಸ್ಟ್ರೆಸ್ಡ್ ಕಾಂಕ್ರೀಟ್ ಪೈಪ್ ಬಗ್ಗೆ ಬಂದಿದ್ದ ಟೆಂಡರ್‌ಗಳನ್ನು ವಜಾ ಮಾಡಿದ್ದು ಏತಕೆ ? ಟೆಂಡರ್ ಕರೆದ ಮೇಲೆ ಬೇಡ ಎಂದು ಹೇಳುವ ಉದ್ದೇಶವಾದರೂ ಏನು ! ಎಲ್ಲ ಉಕ್ಕಿನ ಪೈಪ್ ಬಗ್ಗೆ ಟೆಂಡರ್ ಒಪ್ಪಿಕೊಂಡಿರುವುದರಿಂದ ಫಾರಿನ್ ಎಕ್ಸ್‌ಚೇಂಜ್ ಬಹಳ ಹೋಗುತ್ತದೆ. ಇದರಿಂದ ಮುಂದೆ ಸಾವಿರ ಗ್ಯಾಲನ್ ನೀರಿನ ದರ ಬಹಳ ಜಾಸ್ತಿಯಾಗುತ್ತದೆ. ಇದು ಬೆಂಗಳೂರು ನಾಗರೀಕರಿಗೆ ಬಹಳ ದುಭಾರಿಯಾಗುತ್ತದೆ. ಇಲ್ಲಿ ಎರಡು ಮುಖ್ಯ ಅಂಶಗಳಿವೆ, ಒಂದನೆಯದು ಬೆಂಗಳೂರು

ನಾಗರೀಕರಿಗೆ ಕಡಿಮೆ ದರದಲ್ಲಿ ನೀರನ್ನು ಒದಗಿಸುವುದು ಮತ್ತು ಕಾವೇರಿನದಿಯಿಂದ ನೀರನ್ನು ಆದಷ್ಟು ಕಡಿಮೆ ವೆಚ್ಚದಲ್ಲಿ ಬೆಂಗಳೂರಿಗೆ ಸರಬರಾಜು ಮಾಡುವುದು ಈ ಎರಡು ಮುಖ್ಯ ಅಂಶಗಳನ್ನು ಬದಿಗೊತ್ತಿ ಎಲ್ಲ ಉಕ್ಕಿನ ಪೈಪ್ ಸರಬರಾಜಿನ ಬಗ್ಗೆ ಟೆಂಡರನ್ನು ಅಂಗೀಕರಿಸಿದ್ದಾರೆ. ಈ ಬಗ್ಗೆ ಕಾಮನ್‌ಸೆನ್ಸ್ ಇರತಕ್ಕ ಪ್ರತಿಯೊಬ್ಬ ಮನುಷ್ಯನೂ ವಿಚಾರ ಮಾ ಬೇಕಾಗಿದೆ. ನಾನು ಇಂಜಿನಿಯರ್ ಅಲ್ಲದಿರಬಹುದು, ಆದರೆ ವಿಷಯವನ್ನು ತಿಳಿಯುವ ಶಕ್ತಿ ನನಗೆ ಇದೆ. ಈ ಬಗ್ಗೆ ಒಂದು ಜ್ಯುಡಿಷಿಯಲ್ ಎನ್‌ಕ್ವೈರಿಯನ್ನು ಮಾಡಿದರೆ ನಾನು ಸಾಕ್ಷಿ ಕೊಡುತ್ತೇನೆ. ಸರಿಯಾದ ಸಾಕ್ಷಿ ಕೊಡುವುದಕ್ಕೆ ನನಗೆ ಸಾಧ್ಯವಾಗದಿದ್ದರೆ ನಾನು ರಾಜೀನಾಮೆಯನ್ನು ಕೊಡುತ್ತೇನೆ ಆದ್ದರಿಂದ ಜ್ಯುಡಿಷಿಯಲ್ ಎನ್‌ಕ್ವೈರಿಯನ್ನು ಮಾಡಲೇಬೇಕು. ಇವತ್ತು ಇ.ಸಿ.ಸಿ. ಕಂಪನಿಯ ಮೇಲೆ ಸರ್ಕಾರದ ಕೃಪಾಶ್ರಯ ಬಿದ್ದಿದೆ. ಈ ಕಂಪನಿಯವರು ಅರ್ನೆಸ್ಟ್ ಮನಿ ಡಿಪಾಸಿಟ್ ಕೊಟ್ಟಿಲ್ಲ. ಇನ್‌ಕಂ ಟ್ಯಾಕ್ಸ್ ಕ್ಲಿಯರೆನ್ಸ್ ಸರ್ಟಿಫಿಕೇಟ್ ಕೊಟ್ಟಿಲ್ಲ, ಸೇಲ್ಸ್ ಟ್ಯಾಕ್ಸ್ ಕ್ಲಿಯರೆನ್ಸ್ ಸರ್ಟಿಫಿಕೇಟ್ ಕೊಟ್ಟಿಲ್ಲ; ಆದರೂ ಕೂಡ ಈ ಕಂಪನಿಗೆ ಕೆಲಸ ವಹಿಸಿದ್ದೀರಿ, ಇನ್-ಕಂಪ್ಲೀಟ್ ಟೆಂಡರ್‌ನ್ನು ಯಾವ ಆಧಾರದ ಮೇಲೆ ಅಪ್ರೂವ್ ಮಾಡಲಾಯಿತು ಎಂದು ಕೇಳುತ್ತೇನೆ. ಅಲ್ಲದೆ ಈ ಕಂಪನಿಯವರು ಬೇರೆ ಕಂಪನಿಯವರಿಗಿಂತ ಜಾಸ್ತಿ ದರವನ್ನು ನಮೂದು ಮಾಡಿದ್ದರೂ ಕೂಡ ಇವರ ಟೆಂಡರ್‌ನ್ನು ಅಂಗೀಕಾರ ಮಾಡಿದ್ದೀರಿ. ಇದೇ ರೀತಿ ಸರ್ಕಾರ ಮುಂದುವರೆದರೆ ನಾಳೇ ದಿವಸ ಸರ್ಕಾರದ ಮೇಲಿರುವ ನಂಬಿಕೆ ಜನರಲ್ಲಿ ಹೊರಟು ಹೋಗುತ್ತದೆ. ಕಡಿಮೆ ಟೆಂಡರ್ ಯಾರು ಹಾಕಿರುತ್ತಾರೋ ಅವರದ್ದನ್ನು ಒಪ್ಪಿಕೊಳ್ಳದೆ ಯಾರು ಹೆಚ್ಚಿನ ದರವನ್ನು ನಮೂದು ಮಾಡಿರುತ್ತಾರೋ ಅವರದ್ದನ್ನು ಒಪ್ಪಿಕೊಳ್ಳುವುದಾದರೆ ಸರ್ಕಾರ ನಿಯಮವನ್ನು ಸರಿಯಾಗಿ ಅನುಸರಿಸುತ್ತಿಲ್ಲವೆಂದು ಹೊರಗಿನವರಿಗೆ ಗೊತ್ತಾಗುತ್ತದೆ. ಸರ್ಕಾರದ ಕೃಪೆ ಇದ್ದವರಿಗೆ ಕೆಲಸ ಸಿಗುತ್ತದೆ ಎಂದು ಹೊರಗಿನವರು ತಿಳಿದುಕೊಂಡು ಟೆಂಡರ್ ಹಾಕುವುದನ್ನೇ ನಿಲ್ಲಿಸಿಬಿಡುತ್ತಾರೆ. ಈಗಾಗಲೇ ಹೊರಗಿನ ಕಂಟ್ರಾಕ್ಟ್‌ದಾರರು ನಮ್ಮ ರಾಜ್ಯಕ್ಕೆ ಬರುವುದನ್ನು ಬಿಟ್ಟಿದ್ದಾರೆ ಇವತ್ತು ಸರ್ಕಾರದ ಕೃಪಾಶ್ರಯದಲ್ಲಿ ಇರತಕ್ಕ ಶಂಕರ್‌ನಾರಾಯಣ ಕನ್‌ಸ್ಟ್ರಕ್ಷನ್ ಕಂಪನಿ, ಲಕ್ಷ್ಮಣದಾಸ್ ಕಂಪನಿಗಳ ಜೊತೆಗೆ ಈ ಇ.ಸಿ.ಸಿ. ಕಂಪನಿಯೂ ಕೂಡ ಸೇರಿದೆ ಎಂದು ಹೇಳಬಹುದು. ಪ್ರಾಮಾಣಿಕವಾಗಿ ಕೆಲಸ ಮಾಡುವವರಿಗೆ ಈ ರಾಜ್ಯದಲ್ಲಿ ಕೆಲಸ ಸಿಗುವುದು ಕಷ್ಟವಾಗಿದೆ. ಇ.ಸಿ.ಸಿ. ಕಂಪನಿಗೆ ಪರೋಕ್ಷವಾಗಿ ಮಂತ್ರಿಗಳ ಉತ್ತೇಜನ ಇದೆ. ಇವತ್ತು ಕೇವಲ 20 ಲಕ್ಷ ರೂಪಾಯಿಗಳ ಬ್ಯಾಂಕ್ ಗ್ಯಾರಂಟಿ ಮೇಲೆ ಇ.ಸಿ.ಸಿ. ಕಂಪನಿಗೆ ಈ ಕೆಲಸ ವಹಿಸಿಕೊಡುತ್ತೇವೆಂದು ಮತ್ತು ಸ್ಟೀಲ್‌ನ್ನು ಸರ್ಕಾರದವರೇ ಸಪ್ಲೈಮಾಡುತ್ತಾರೆಂದು ಹೇಳುತ್ತಿದ್ದಾರೆ. ಇದರಿಂದ ಫಾರಿನ್ ಎಕ್ಸ್‌ಚೇಂಜ್ ಬಹಳ ಬೇಕಾಗುತ್ತದೆ. ಏಕೆಂದರೆ ಉಕ್ಕನ್ನು ಹೊರದೇಶದಿಂದ ತರಿಸಬೇಕಾಗುತ್ತದೆ ಕಾವೇರಿ ನದಿಯಿಂದ ಬೆಂಗಳೂರಿಗೆ ನೀರನ್ನು ತರಬೇಕಾದರೆ 53 ಮೈಲಿ ಉದ್ದದ ಪೈಪನ್ನು ಹಾಕಬೇಕಾಗಿದೆ. ಇದಕ್ಕೆ ಸ್ಟೀಲ್ ಸಪ್ಲೈ ಬಹಳ ಬೇಕಾಗುತ್ತದೆ. ಪ್ರೆಶರ್ ಎಷ್ಟು ಇರಬೇಕು ಎಂಬುದನ್ನು ಟೆಕ್ನಿಕಲ್ ಬೋರ್ಡಿನವರು ವಿಚಾರವಿನಿಮಯ ಮಾಡಿದ್ದಾರೆ. ಅದರ ಪ್ರಕಾರ 10ರಿಂದ 100 ಅಡಿಯವರೆಗೆ ಪ್ರೆಷರ್ ಎಷ್ಟು ಇರಬೇಕು, 100 ಅಡಿಗಳಿಂದ 300 ಅಡಿಗಳವರೆಗೆ ಪ್ರೆಷರ್ ಎಷ್ಟು ಇರಬೇಕು ಎಂಬುದನ್ನು ಬುಕ್‌ಲೆಟ್‌ನಲ್ಲಿ ವಿವರವಾಗಿ ಕೊಟ್ಟಿದ್ದಾರೆ. ಇಂತಹ ಒಂದು ಕೆಲಸವನ್ನು ಇದುವರೆಗೆ ಮಾಡಿದ ಅನುಭವ ಇ.ಸಿ.ಸಿ. ಕಂಪನಿಯವರಿಗೆ ಇಲ್ಲ. ಇಂತಹ ಕೆಲಸವನ್ನು ಮಾಡಿ ಅನುಭವವಿರುವ ಕಂಪನಿಯೆಂದರೆ ಫ್ರೆಂಚ್ ಫರ್ಮ್ ಒಂದೇ ಒಂದು. ಈ ವಿಚಾರ ದೆಹಲಿಯ ಸೆಕ್ರೆಟೇರಿಯಟ್‌ನಲ್ಲಿ ಕೂಡ ನಮೂದಾಗಿದೆ.

7-00 P.M.

ಹಾಗಿದ್ದಾಗ್ಯೂ ಕೂಡ ಈ ಪ್ರೈಪ್ ಕಂಪೆನಿಯವರನ್ನು ಬೇಡ ಎಂದು ಏಕೆ ಹೇಳಿದರು? ಬನ್ನಿ ಅಂಡ್ ಕಂಪೆನಿಯವರು ಮೊದಲು ಒಂದು ರಿಪೋರ್ಟ್ ಕೊಟ್ಟು ಅವರು ದುಡ್ಡನ್ನು ಹೊಡೆದುಕೊಂಡು ಹೋದರು. ಈ ದಿವಸ ನಾನು ಹೇಳುತ್ತೇನೆ ಪಾಶ್ಚಿಮಾತ್ಯ ರಾಷ್ಟ್ರಗಳಿಂದ ಅಂದರೆ ಇಂಗ್ಲೆಂಡ್, ನ್ಯೂಯಾರ್ಕ್ ಇಂಥ ಕಡೆಗಳಿಂದ ಒಂದು ವರ್ಲ್ಡ್ ಸಿಂಪೋಜಿಯಂನ್ನು ಕರೆಸಿ, ಅವರ ಮುಂದೆ ಆ ಫೇರ್ಮನ್ ಏನು ಹೇಳುತ್ತಾರೆಂಬುದನ್ನು ಇಡಿ, ಅವರು ಹೇಳುತ್ತಿರುವುದು ಸರಿಯಿಲ್ಲ ಎಂದರೆ ಅವರನ್ನು ಅಲ್ಲಿಂದ ತಗೆದುಹಾಕಿ ಅವರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಿ; ಇಲ್ಲ ನಾವು ಇಲ್ಲಿ ಶಾಸನ ಸಭಾಸದಸ್ಯರಾಗಿ ಹೇಳುತ್ತಿರುವುದು ಸರಿಯಿಲ್ಲ ಅಂತ ಅವರು ಹೇಳಿದರೆ ನಾನು ನನ್ನ ಸದಸ್ಯತ್ವಕ್ಕೆ ರಾಜೀನಾಮೆ ಕೊಡುತ್ತೇನೆ. ನಮ್ಮವರು 1200 ಮಿಲಿಮೀಟರಿಗೆ ಮ್ಯಾಗ್ಸಿಮಂ ಎಚ್.ಎಚ್. ಇ. ಡಿ. ಪೆ ಷರ್ ವಿತ್‌ಸ್ಟ್ಯಾಂಡ್ ಮಾಡಲು 175 ಮೀಟರ್ಸ್ ಬೇಕೆಂದು ಹೇಳುತ್ತಾರೆ. ಅದೇ ಫ್ರೆಂಚ್ ಫರ್ಮಿನವರು 1600 ಮಿಲಿಮೀಟರಿಗೆ 400 ಮೀಟರ್ಸ್ ಇರಬೇಕೆಂದು ಹೇಳುತ್ತಾರೆ. ಹ್ಯೂಂ ಪೈಪ್ ಕಂಪನಿಯವರು 330 ಮೀಟರ್ಸ್ ಇರಬೇಕೆಂದು ಹೇಳುತ್ತಾರೆ. ಹೀಗಿರುವಾಗ

(ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ)

ನಮ್ಮವರು ಹೇಳತಕ್ಕ 1200 ಮಿಲಿಮೀಟರ್ ಪೈಪನ್ನು 175 ಮೀಟರ್ ತಡೆಯುತ್ತದೆಂದರೆ ಯಾವ ಟೆಕ್ನಿಕಲ್ ಮ್ಯಾನ್ ಇದನ್ನು ಒಪ್ಪುತ್ತಾರೆ? ಸೈನ್ಸ್ ಈಸ್ ಆ್ಯನ್ ಓಪನ್ ಟ್ರೂತ್. ಇದನ್ನು ಅಲ್ಲಗಳೆಯುವುದಕ್ಕಾಗುವುದಿಲ್ಲ. ನಾನು ಹಿಂದೆ ಇದೇ ವಿಚಾರದಲ್ಲಿ ಒಂದು ಪ್ರಶ್ನೆ ಕೇಳಿದ್ದಾಗ ಅದಕ್ಕೆ ಒಂದು ಉತ್ತರವನ್ನು ಒದಗಿಸಿದರು. ಆ ಉತ್ತರದಲ್ಲಿ ಅವರಿಗೆ ಒಂದು ಅಡ್ವಾನ್‌ಟೇಜಿತ್ತು ಎಂದು ಆ ಉತ್ತರದಲ್ಲಿ ತಿಳಿಸಿದ್ದಾರೆ. ಆ ಅಡ್ವಾನ್‌ಟೇಜ್ ಏನೆಂದರೆ—ಅವರ ಟೆಂಡರು ಸ್ಟೀಲ್‌ಪೈಪುಗಳ ಬಗ್ಗೆ ಬಹಳ ಅಡ್ವಾನ್‌ಟೇಜಾಗಿದ್ದುದರಿಂದ ಅವರ ಟೆಂಡರನ್ನು ಅಕ್ಸೆಪ್ಟ್ ಮಾಡಲಾಯಿತೆಂದು ಹೇಳಿದ್ದಾರೆ. ಆ ಅಡ್ವಾನ್‌ಟೇಜೇನು ಎಂದು ಕೇಳಿದ್ದಕ್ಕೆ ಉತ್ತರವಿಲ್ಲ. ಈಗ ಯಾರಾದರೂ ಹೇಳಲಿ. ಈ ವಿಚಾರಗಳೆಲ್ಲಾ ಹೀಗಿರುವಾಗ ಅವರು ಇ. ಸಿ. ಸಿ. ಕಂಪನಿಗೆ ಏಕೆ ಕೊಟ್ಟರು? ನನ್ನ ಕೇಳಿದರೆ ಆ ವ್ಯವಹಾರದಲ್ಲಿ ಮಂತ್ರಿಗಳಿಗೂ, ಅಲ್ಲಿರತಕ್ಕ ಛೇರ್ಮನ್ನರಿಗೂ ಮತ್ತು ಆ ಬೋರ್ಡಿನ ಸದಸ್ಯರಿಗೂ ಪಾಲಿದೆ ಎಂದು ಹೇಳುತ್ತೇನೆ. ಇದು ಯಾರಿಗಾದರೂ ಗೊತ್ತಾಗುವಂಥ ವಿಚಾರ. ಒಟ್ಟಿನಲ್ಲಿ ಆ ಇ.ಸಿ.ಸಿ. ಅವರ ಬಗ್ಗೆ ಆ ಬೋರ್ಡಿನ ಛೇರ್ಮನ್ನರು ತಾಳಿರುವ ನಿಲುವು ಸರಿಯಾದುದಲ್ಲ—ಅದು ತುಂಬಾ ಸಂಶಯಾಸ್ಪದವಾದುದಾಗಿದೆ. ಆದ್ದರಿಂದ ನಾವು ಇದರ ಬಗ್ಗೆ ಒಂದು ಜುಡಿಷಿಯಲ್ ಎನ್‌ಕ್ವೈರಿಯನ್ನು ನಡೆಸಬೇಕೆಂದು ಕೇಳುತ್ತಿದ್ದೇವೆ. ಈ ವ್ಯವಹಾರ ಮೊದಲು 8 ಕೋಟಿ ರೂಪಾಯಿಗಳಿದ್ದುದು ಈಗ 13 ಕೋಟಿಗೇರಿದೆ. ಬೆಂಗಳೂರಿನ ನಾಗರೀಕರಿಗೆ ಒಂದು ಸಾವಿರ ಗ್ಯಾಲನ್ನಿಗೆ 2 ರೂಪಾಯಿಗಳು ಇರಬೇಕಾದುದನ್ನು ಇವರು 4 ರೂಪಾಯಿಗೇರಿಸಿದ್ದಾರೆ. ಇದು ಯಾವ ನ್ಯಾಯ? ಸಾವಿರಾರು ವರ್ಷಗಳಿರತಕ್ಕ ಪಟ್ಟಣ ಇದು. ಇಲ್ಲಿಯ ಜನರು ಸತ್ತರೂ ಸಾಯಲಿ, ಅವರಿಗೆ ತೊಂದರೆ ಆದರಾಗಲಿ. ಆದರೆ ಆ ಫರ್ಮಿನವರನ್ನು ಮಾತ್ರ ಉದ್ಧಾರ ಮಾಡಬೇಕೆಂದು ಸರ್ಕಾರದವರು ಅವರಿಗೆ ಅನುಕೂಲ ಮಾಡಲು ಹೊರಟಿದ್ದಾರೆ. ಜನರ ಅನುಕೂಲಕ್ಕಾಗಿ ಇವರು ಕೆಲಸ ಮಾಡುತ್ತಿಲ್ಲ. ಇವರು ಮೊದಲು ಅಲ್ಲಿ ಮೂರು ನಿರ್ಣಯಗಳನ್ನು ಮಾಡಿದರು. ಮೊದಲನೆಯ ನಿರ್ಣಯದಲ್ಲಿ ಇ.ಸಿ.ಸಿ ಕಂಪನಿಗೆ ಕೆಲಸವನ್ನು ಕೊಡಬೇಕೆಂದು ತೀರ್ಮಾನ ಮಾಡಿದರು. ಎರಡನೇ ನಿರ್ಣಯದಲ್ಲಿ ಅವರಿಗೆ ಆ ಜಕೋಶೊ ವೇಕಿಯಾದವರು ಸ್ಟೀಲನ್ನು ಸಪ್ಲೈಮಾಡುವುದಕ್ಕಾಗುವುದಿಲ್ಲ ಎಂದು ಹೇಳಿದ್ದರಿಂದ ಅವರ ಟೆಂಡರನ್ನು ಕ್ಯಾನ್ಸಲ್ ಮಾಡಿ ಎಂದು ಮಾಡಿದರು. ಅಲ್ಲದೆ ಅವರು ಕೊಟ್ಟಿದ್ದ ಬ್ಯಾಂಕ್‌ಗ್ಯಾರಂಟಿಯನ್ನು ಮುಟ್ಟುಗೋಲು ಹಾಕಿಕೊಳ್ಳಬೇಕೆಂದು ತೀರ್ಮಾನ ಮಾಡಿದ್ದರು. ಆ ನಂತರ ಮೂರನೆ ನಿರ್ಣಯದಲ್ಲಿ ಇಂಡಿಯನ್ ಹ್ಯೂಂ ಪೈಪ್ ಕಂಪೆನಿಯ ಟೆಂಡರ್ ಒಪ್ಪಿಕೊಂಡು—ಕಾಂಟ್ರಾಕ್ಟ್ ಕೊಡಬೇಕೆಂದು ತೀರ್ಮಾನ ಮಾಡಿದರು. ಅಷ್ಟು ಹೊತ್ತಿಗೆ ಆ ಇ.ಸಿ.ಸಿ ಕಂಪೆನಿಯ ಕಡೆಯಿಂದ ಪಬ್ಲಿಕ್ ರಿಲೇಷನ್ ಮ್ಯಾನ್ ಎನ್ನತಕ್ಕ ಒಬ್ಬ ವ್ಯಕ್ತಿ ಬಂದು ಈ ಬೋರ್ಡಿನ ಛೇರ್ಮನ್ನರ ಮನೆಗೆ ಮತ್ತು ಸದಸ್ಯರ ಮನೆಗಳಿಗೆ ತಿರುಗುವುದಕ್ಕೆ ಪ್ರಾರಂಭ ಮಾಡಿದ. ಆ ಸಂದರ್ಭದಲ್ಲಿ ಬೋರ್ಡಿನ ಛೇರ್ಮನ್ನರಾದ ಆ ಚೀಫ್ ಇಂಜಿನಿಯರು ಮೊದಲು ಈ ಇ.ಸಿ.ಸಿ. ಕಂಪೆನಿಯವರಿಗೆ ಸ್ಟೀಲನ್ನು ಸಪ್ಲೈಮಾಡುವುದಕ್ಕಾಗುವುದಿಲ್ಲ ಎಂದು ಹೇಳಿದ್ದವರು ಆ ವ್ಯಕ್ತಿ ಬಂದು ಇವರ ಮನೆಯಲ್ಲಿ ಇವರನ್ನು ಕಂಡ ಕೂಡಲೇ ಅವರ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ತೀರ್ಮಾನ ಮಾಡಿದ್ದನ್ನು ಕೂಡ ಮರೆತು ಅವರೇ ಇ.ಸಿ.ಸಿ. ಅವರಿಗೆ ಬೋರ್ಡಿನವರೇ ಏಕೆ ಸ್ಟೀಲನ್ನು ಸಪ್ಲೈ ಮಾಡಬಾರದು ಎಂಬ ವಾದವನ್ನು ಎತ್ತಿದರು. ಈ ವಾದದಿಂದಲೇ ನಮಗೆಲ್ಲ ಅವರ ಈ ಡೀಲಿಂಗ್ಸ್‌ನಲ್ಲಿ ತುಂಬಾ ಅನುಮಾನವುಂಟಾಗಿದೆ. ಇವರು ಮೊದಲು ಸ್ಟೀಲನ್ನು ಒದಗಿಸುವುದಕ್ಕಾಗುವುದಿಲ್ಲವೆಂದು ಹೇಳಿದ್ದವರು ಈಗ ಹೇಗೆ ಅದನ್ನು ಒದಗಿಸುತ್ತೇವೆಂದರು? ನಮ್ಮ ಭದ್ರಾವತಿಯಲ್ಲಿ ಎಲ್.ಪಿ. ಪ್ರೊಸೆಸಿಂಗ್ ಪ್ಲಾಂಟ್ ನಿಂತು ಹೋಗಿ ಕೆಲಸ ನಡೆಯದೆ ನಮ್ಮ ಸರ್ಕಾರದವರು ಅಸ್ಸಾಮಿನಿಂದ ಯಾವುದೋ ಒಂದು ಕಂಪೆನಿಯಿಂದ ಸ್ಟೀಲನ್ನು ಟನ್ ಒಂದಕ್ಕೆ 2,500 ರೂಪಾಯಿಗಳ ಪ್ರಕಾರ 50 ಸಾವಿರ ಟನ್ ಸ್ಟೀಲನ್ನು ಖರೀದಿ ಮಾಡಿದ್ದರು. ಈ ದಿವಸ ಆ ಇಂಟರ್‌ನ್ಯಾಷನಲ್ ಮಾರ್ಕೆಟ್ಟಿನಲ್ಲೇ ಸ್ಟೀಲಿಗೆ ಬಹಳ ಒಪ್ಪಾಟ ಇರುವಾಗ, ಸಿಕ್ಕುತ್ತಿಲ್ಲ ಅನ್ನುವಾಗ ಪ್ರಪಂಚದಲ್ಲೇ ಎಲ್ಲೂ ಸಿಕ್ಕದ ಸ್ಟೀಲನ್ನು ಈ ಛೇರ್ಮನ್ನರೇನು ಆ ಇ.ಸಿ.ಸಿ. ಅವರಿಗೆ ಸ್ವರ್ಗದಿಂದ ಇಳಿಸಿ ತಂದು ಕೊಡುತ್ತಾರೋ? ರೇಟೂ ಕೂಡ ಬಹಳ ಜಾಸ್ತಿಯಿದೆ. ಪರಿಸ್ಥಿತಿ ಹೀಗಿರುವಾಗ ಆ ಬೋರ್ಡಿನ ಮೆಂಬರುಗಳಾದವರೂ ಮೊದಲು ಸ್ಟೀಲನ್ನು ಸಿಕ್ಕುವುದಿಲ್ಲವೆಂದು ಹೇಳಿ ಈಗ ಅದನ್ನು ಸಪ್ಲೈಮಾಡುತ್ತೇವೆಂದು ಹೇಳುತ್ತಿದ್ದೀರಲ್ಲಾ ಅದನ್ನು ಎಲ್ಲಿಂದ ತಂದು ಒದಗಿಸುತ್ತೀರಿ ಎಂದು ಆ ಛೇರ್ಮನ್ನರನ್ನು ಕೇಳುವುದು ಬೇಡವೇ? ಟೆಂಡರನ್ನು ಕ್ಯಾನ್ಸಲ್ ಮಾಡಿ ಆ ಕಂಪನಿಯವರ ಬಗ್ಗೆ ಆಕ್ಷನ್ ತೆಗೆದುಕೊಳ್ಳಬೇಕೆಂದು ನೋಟೀಸ್ ಕೊಟ್ಟಿದ್ದೆಲ್ಲ ಹೋಗಿ ಅವರಿಗೆ ಮತ್ತೆ ಕೆಲಸವನ್ನು ಕೊಡಬೇಕೆಂದರೆ ಅದರ ಒಳಮರ್ಮವೇನು? ಇನ್ನು ಈ ಇಂಜಿನಿಯರಿಂಗ್ ಕೆಲಸಕಾರ್ಯಗಳಲ್ಲಿ ನೆಗೋಷಿಯೇಷನ್ ಎಂದು ಕ್ಲಾಜನ್ನು ಸೇರಿಸುತ್ತಾರೆ. ಅದಂತೂ ಬಹಳ ಡೇಂಜರಸ್ ಕ್ಲಾಜ್. ಈಗಾಗಲೇ ಆ ಶರಾ

ವತಿಯಲ್ಲಿ ಇಂಥ ಕ್ಲಾಡಿನಿಂದ ಸಾಟಾ ಕಂಟ್ರಾಕ್ಟರುಗಳು ಕೆಲಸ ತೆಗೆದುಕೊಳ್ಳುವುದಕ್ಕಾಗದೆ ಖೋಟಾಜನರಿಗೆ ಅನುಕೂಲವಾಗಿ ಅವರು ಅಲ್ಲಿ ಲಕ್ಷಗಟ್ಟಲೆ ಹಣವನ್ನು ಸಂಪಾದಿಸಿದರು. ಆದರೆ ಆ ಅನ್ಯಾಯದ ಹಣವೆಲ್ಲಾ ಬೇರೆ ಕಡೆ ಕಂಟ್ರಾಕ್ಟಿನಲ್ಲಿ ಕಳೆದುಹೋಯಿತು. ಈಗಲೂ ಇದರಲ್ಲಿ ಬಹಳ ಅನುಮಾನಕ್ಕೆ ಅವಕಾಶವಾಗಿದೆ. ಆ ವರಲ್ಡ್ ಸಿಂಪೋಜಿಯಂನವರನ್ನು ಕರೆಸಲಿ ಅವರೇ ಹೇಳುತ್ತಾರೆ ಆ ಚೀಫ್ ಇಂಜಿನಿಯರ ವರ್ತನೆ ಸಂಶಯಾಸ್ಪದವಾದದ್ದು ಎಂದು ನಾನು ಆ ಸಿಂಪೋಸಿಯಂ ಮುಂದೆ ವಾದ ಮಾಡುತ್ತೇನೆ.

ಇದುವರೆಗೂ ಕೂಡ ಬೋರ್ಡಿನ ಛೇರ್‌ಮನ್ನರಾಗಲಿ ಅಥವಾ ಚೀಫ್ ಇಂಜನಿಯರುಗಳಾಗಲಿ ಏನು ಹೇಳಿದ್ದಾರೆ! ಬೆಂಗಳೂರಿಗೆ ವಾಟರ್ ಸಪ್ಲೈ ಆಗುವ ಹಿತದೃಷ್ಟಿಯಿಂದ ಖಂಡಿತ ಇದು ಸಾಧುವಾದದ್ದು ಅಲ್ಲ, ಅಪಾಯಕಾರಿಯಾದಂಥ ವಿಚಾರ, ಸರಕಾರ ಮಾಡತಕ್ಕದ್ದು ಹಾನಿಯಾಗುವ ವಿಚಾರ ಮತ್ತು 5 ಕೋಟಿ ರೂಪಾಯಿಗಳನ್ನು ಜಾಸ್ತಿ ಕೊಟ್ಟಿರುವ ವಿಚಾರ ಇದೆಲ್ಲಾ ಇದರಲ್ಲಿ ಅಡಕವಾಗಿರುವುದರಿಂದ ದಯವಿಟ್ಟು ಇದನ್ನು ಮನ್ನಾ ಮಾಡಿ 30 ಲಕ್ಷ ರೂಪಾಯಿಗಳನ್ನು ಕೊಡುವುದನ್ನು ನಿಲ್ಲಿಸಿ. ನಾನು ಹೇಳುವುದೇನೆಂದರೆ ಈ ರಿಕಾರ್ಡುಗಳನ್ನು ತರಿಸಿಕೊಂಡು ಸ್ಟಡೀ ಮಾಡಿ ನೋಡಿ. ಚೀಫ್ ಇಂಜನೀಯರನ್ನು ವಿಚಾರಣೆಗೆ ಗುರಿಪಡಿಸಲೇಬೇಕಾಗುತ್ತದೆ. ಜುಡಿಷಿಯಲ್ ಎನ್‌ಕ್ವೈರಿ ಮಾಡಿ ಕ್ರಮ ತೆಗೆದುಕೊಳ್ಳುತ್ತಾರೆ ಎಂದು ನಂಬಿ ನನ್ನ ಭಾಷಣವನ್ನು ಮುಗಿಸುತ್ತೇನೆ.

†ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಸ್ವಾಮಿ, ಇವೊತ್ತಿನ ದಿವಸ ವಾಟರ್ ಸಪ್ಲೈ ಮತ್ತು ಸೂಯರೇಜ್ ಬೋರ್ಡ್ ಮತ್ತು ಸರಕಾರದ ಕೆಲವು ಅಧಿಕಾರಿಗಳು ಸೇರಿಕೊಂಡು ಬೆಂಗಳೂರಿನ ಜನತೆಯ ಮೇಲೆ ದೊಡ್ಡದಾದಂಥ ಹೊರೆಯನ್ನು ಹೊರಿಸುವುದಕ್ಕೆ, ಅನ್ಯಾಯ ಮಾಡುವುದಕ್ಕೆ, ವಂಚನೆ ಮಾಡುವುದಕ್ಕೆ ಹೊರಟಿದ್ದಾರೆ ಎಂದು ಹೇಳಬೇಕಾಗಿದೆ. ಈ ತರಹ ಒಂದು ಭಾರಿ ಮೋಸ, ವಂಚನೆಗಳನ್ನು ಅದಷ್ಟು ತಡೆಗಟ್ಟುವುದಕ್ಕೋಸ್ಕರ ತಮ್ಮ ಗಮನವನ್ನು ಸೆಳೆಯಲು ನಾನು ಇಲ್ಲಿ ನಿಂತಿದ್ದೇನೆ. ತಮಗೆ ಗೊತ್ತಿರುವ ಹಾಗೆ ಈ ಪ್ರಶ್ನೆಯನ್ನು ನಾವು ಜನವರಿ ತಿಂಗಳಿನಲ್ಲಿ ಎತ್ತಿದ್ದೆವು. ರಾಜ್ಯಪಾಲರ ಭಾಷಣ ಆದಾಗ ಇದರ ಬಗ್ಗೆ ತಮ್ಮ ಗಮನವನ್ನು ಸೆಳೆಯಲಾಯಿತು. ವಿರೋಧ ಪಕ್ಷದ ಸದಸ್ಯರಾದ ಶ್ರೀಮಾನ್ ಶಿವಪ್ಪನವರು ಮತ್ತು ಇನ್ನೂ ಅನೇಕ ಸದಸ್ಯರು ಇದರ ಬಗ್ಗೆ ಮಾತನಾಡಿದರು. ಈ ಪ್ರಶ್ನೆ ಬಗ್ಗೆ ಜನವರಿ ತಿಂಗಳಲ್ಲಿ ಈ ಮಾನ್ಯ ಸಭೆಯಲ್ಲಿ ಚರ್ಚೆ ಆಯಿತು. ಚರ್ಚೆ ಆಗುವುದು ಮಾತ್ರವಲ್ಲ ಇದರ ಬಗ್ಗೆ ಒಂದು ಪ್ರಶ್ನೆಯನ್ನು ಸಹ ಮಾನ್ಯ ಸದಸ್ಯರೊಬ್ಬರು ವಿಧಾನಸಭೆಗೆ ಕಳುಹಿಸಿದ್ದರು. ಈ ಪ್ರಶ್ನೆಗೆ ಉತ್ತರವನ್ನೂ ಸಹ ಮಾನ್ಯ ಮಂತ್ರಿಗಳು ಕೊಟ್ಟಿದ್ದಾರೆ. ಅವರು ಕೊಟ್ಟಿರುವಂತಹ ಉತ್ತರ ಮತ್ತು ಅವರು ಹಾಕಿರುವಂಥ ಪ್ರಶ್ನೆಯನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. 28ನೇ ಜನವರಿ 1970ರಲ್ಲಿ ವಿಧಾನಸಭೆಯ ನಡೆವಳಿಕೆಗಳು, ಪೇಜ್ 515 ರಲ್ಲಿ ಈ ರೀತಿ ಇದೆ:

"Sri K. M. DASANKOP (Dharwar City).—Sir, I call the attention of the Minister of State for Municipal Administration to the acceptance by the Bangalore Water Supply and Sewerage Board of higher tender for the supply of pipes when a lower tender by narly four crores was pending with the Board."

Sri B. M. PATIL.—The Cauvery Water Supply Scheme, estimated to cost Rs. 22·4 crores, has been sanctioned in its entirety by the State Government. Once the scheme is approved by the State Government, it is entirely the responsibility and duty of the Board to execute the Scheme by exercising all or any of the powers that are vested in the Board under the Act and as per the Board's Regulations. In the actual execution of the approved schemes Government does not meddle or interfere with the actions or decisions taken by the Board which compries of eminent persons representing the technical, financial and legal interests. There is no provision

(ಶ್ರೀ ಎಂ. ಎಸ್. ಕೃಷ್ಣನ್)

in the Act enabling or requiring Government to interfere in the functions and duties of the Board, nor is there any provision under which the Board is required to obtain Government's approval of the various actions and divisions that the Board will have to take at various stages of the execution of the approved schemes. At best, Government can only interfere to issue directions or guidance on matters relating to policy. It is therefore entirely within the competence of the Board, in furtherance of the execution of an approved scheme, not only to invite tenders but also to finalise and accept the tenders. The process of inviting and finalising tenders etc,, which constitutes a part of the whole scheme that has been duly approved by Government, does not involve any questions of policy requiring the directions or guidance from Government. It is entirely left to the Board to finalise the tenders without the approval of Government.

But, if, at any stage, Government feels or is satisfied that the Board has erred grievously in taking a particular decision which is likely to cause an incalculable loss or damage to the Board's funds or properties or is likely to cause undue delay in the execution of the scheme, Government will certainly have all the authority to interfere in the matter and it will not hesitate to do so, if such an occasion were to arise.

Since some Hon'ble members of this House have made some solicitous enquiries on this subject, Goverment proposes to examine the matter further in greater detail.',

ಈ ಆಶ್ವಾಸನೆಯನ್ನು ಮಾನ್ಯ ಮಂತ್ರಿಗಳು ಜನವರಿಯಲ್ಲಿ ಕೊಟ್ಟರು. ಇನ್ನು ಜನವರಿಗೆ ಹಿಂದೆ ಏನು ಇತ್ತು ಎನ್ನುವುದರ ಬಗ್ಗೆ ಹೇಳುತ್ತೇನೆ. ಜಲಮಂಡಲಿಯವರು ಈ ಕಾವೇರಿ ನೀರುಯೋಜನೆಯ ಬಗ್ಗೆ ಇ. ಸಿ. ಸಿ. ಕಂಪನಿ ಜೊತೆಗೆ ಕಾಂಟ್ರಾಕ್ಟ್ ಮಾಡಿಕೊಂಡರು ಎಂದು ಈಗಾಗಲೇ ನನ್ನ ಮಾನ್ಯ ಮಿತ್ರರು ಹೇಳಿದ್ದಾರೆ. ನಾನು ಪುನಃ ಅದೇ ವಿಷಯವನ್ನು ತಮ್ಮ ಗಮನಕ್ಕೆ ತರಬಿಚ್ಛಿಸುವುದಿಲ್ಲ. ಆದರೂ ಸಹ ಒಂದೆರಡು ಮುಖ್ಯ ಅಂಶಗಳನ್ನು ಮಾತ್ರ ತಮ್ಮ ಗಮನಕ್ಕೆ ತರಲೇಬೇಕಾಗಿದೆ. ಮೊದಲನೆ ಪ್ರಶ್ನೆ ಬೆಂಗಳೂರಿನ ಜನ ನೀರು ಬೇಕು ನೀರು ಬೇಕು ಎಂದು ಪರಿತಪಿಸುತ್ತಾ ಇದ್ದಾರೆ. ಸರಕಾರದವರು ಕಾವೇರಿ ನದಿಯಿಂದ ನೀರನ್ನು ಕೊಡಿಸುತ್ತೇವೆ ಅಂತ ಹೇಳಿ ಆರು ವರ್ಷಗಳಾದರೂ ಇನ್ನೂ ಒಂದು ತೊಟ್ಟು ನೀರು ಸಹ ಬಂದಿಲ್ಲ. 1964ನೇ ಇಸವಿಯಲ್ಲಿ ನಮ್ಮ ಸ್ನೇಹಿತರು ಹೇಳಿದಹಾಗೆ ಒಂದು ಹೈ ಪವರ್ ಕಂಟ್ರೋಲ್ ಬೋರ್ಡ್ ಎಂದು ಮಾಡಿದರು. ಆ ಬೋರ್ಡ್‌ನಲ್ಲಿ ಯಾರು ಯಾರು ಇದ್ದರು ಎಂದರೆ, ಮಾನ್ಯ ನಿಜಲಿಂಗಪ್ಪ ನವರು ಆಗ ಚೀಫ್ ಮಿನಿಸ್ಟರ್ ಆಗಿದ್ದವರು, ಶ್ರೀಮಾನ್ ವೀರೇಂದ್ರ ಪಾಟೀಲರ ಈಗಿನ ಮುಖ್ಯ ಮಂತ್ರಿಗಳು ಆಗ ಪಿ. ಡಬ್ಲ್ಯೂ. ಡಿ. ಮಂತ್ರಿಗಳಾಗಿದ್ದರು, ಚೀಫ್ ಇಂಜನಿಯರು ಆಫ್ ದಿ ಸ್ಟೇಟ್, ಮತ್ತು ಇನ್ನೊಬ್ಬ ಇಂಜಿನಿಯರು ಮಹಾರಾಷ್ಟ್ರದವರು ಒಬ್ಬರು ಇಷ್ಟು ಜನ ಇದ್ದರು. ಇವರೆಲ್ಲರನ್ನೂ ಸೇರಿಸಿ ಒಂದು ಟೆಕ್ನಿಕಲ್ ಕಮಿಟಿ ಎಂದು ಮಾಡಿದರು. ಆ ಟೆಕ್ನಿಕಲ್ ಕಮಿಟಿಯಲ್ಲಿ ನಾಲ್ಕು ಜನ ಇಂಜನಿಯರುಗಳು ಇದ್ದರು. ಅವರಲ್ಲಿ ಚೀಫ್ ಇಂಜನಿಯರು, ರಿಟೈರ್ಡ್ ಚೀಫ್ ಇಂಜನಿಯರು, ಬೊಂಬಾಯಿನ ಒಬ್ಬರು ಎಕ್ಸ್‌ಪರ್ಟ್ ಇಂಜನಿಯರು ಮತ್ತು ಡೆಲ್ಲಿಯಿಂದ ಸೆಂಟ್ರಲ್ ಗವರ್ನಮೆಂಟ್ ಎಕ್ಸ್‌ಪರ್ಟ್ ಇಂಜನಿಯರು

ಇವರೆಲ್ಲರೂ 1964ನೇ ಇಸವಿಯಲ್ಲಿ ತೀರ್ಮಾನ ಮಾಡಿ ಪ್ರಿ ಸ್ಟ್ರೆಸ್ಡ್ ಕಾಂಕ್ರೀಟ್ ಪೈಪ್ ಹಾಕಬೇಕೆಂದು ಹೇಳಿದ್ದರು. ಪ್ರಾಜೆಕ್ಟ್ ರಿಪೋರ್ಟ್ ಪುಟ 20 ರಲ್ಲಿ ಹೀಗಿದೆ.

"Prestressed concrete pipes have been largely used in many major water supply schemes throughout the World and have proved to be a worthy and economical substitute for other materials like steel and cast iron. The pipes can be cast near the site of works and transported over relatively short distances to be laid in place. Evidence of large scale implementation of prestressed concrete pipes and years of uninterrupted service in many major water supply schemes have proved that concrete pipes are economical, efficient and involve minimum maintenance Costs. They are also competitive in relation to steel and cast iron pipes."

This is the opinion given not by some persons who do not know technical aspects of it, but by persons, who are wellversed in it.

ಇದು ಯಾರೋ ಕೆಲವರು ತಿಳಿಯದಂತಹ ಜನರ ಕೊಟ್ಟ ರಿಪೋರ್ಟ್ ಅಲ್ಲ. ಪ್ರತಿಯೊಬ್ಬರೂ, ವಿಷಯ ಚೆನ್ನಾಗಿ ತಿಳಿದುಕೊಂಡವರು ಮತ್ತು ತಜ್ಞರು, ನಮ್ಮ ರಾಜ್ಯದವರು ಮಾತ್ರವಲ್ಲ ಡೆಲ್ಲಿಯಿಂದ ಬಂದವರು, ಮಹಾರಾಷ್ಟ್ರ. ಬೊಂಬಾಯಿಯಿಂದ ಬಂದವರು ಇವರೆಲ್ಲರೂ ಸೇರಿ ವಿಚಾರ ಮಾಡಿ ಅವರ ಆಧಾರದ ಮೇರೆ ಈ ಪ್ರಿ ಸ್ಟ್ರೆಸ್ಡ್ ಕಾಂಕ್ರೀಟ್ ಪೈಪ್ಸ್ ಇರಬೇಕು ಸ್ಟೀಲ್ ಪೈಪ್ಸ್ ಬೇಡ ಎಂದು ತೀರ್ಮಾನಮಾಡಿದ್ದರು. ಈವಾಗ ಏಕೆ ಹಿಂದಕ್ಕೆ ಹೋದಿರಿ ಎಂಬುದೇ ಮುಖ್ಯ ಪ್ರಶ್ನೆ. ಇನ್ನೊಬ್ಬರು ಸಹ ಇದೇ ರೀತಿಯಲ್ಲಿ ಹೇಳಿದ್ದಾರೆ. ಅದು ಬಿನ್ನಿಯಿಲ್ ಕನ್‌ಸಲ್‌ಟೆಂಟ್ಸ್ ತಜ್ಞರು ಬಿನ್ನಿ ಕಂಪೆನಿಗೆ ಕನ್‌ಸರ್ಟೇಷನ್ ಫೀ ಎಂದು 18 ಲಕ್ಷ ರೂಪಾಯಿ ಕೊಟ್ಟಿದ್ದಾರೆ. ಇವರೂ ಸಹ ಅದೇ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಅವರು ಏನು ಹೇಳಿದ್ದಾರೆಂಬುದನ್ನು ನೋಡೋಣ.

The International Consultants Binnie Ltd., London at para 13-24 Volume I of the Report have stated as follows.—

"However properly designed and made prestressed concrete pipes present virtually no corrosion problems and make better use of locally available materials than do steel pipes with resulting saving in foreign exchange. So PSc Pipes recommended.

ಈ ಸಂದರ್ಭದಲ್ಲಿ ಇನ್ನೂ ಒಂದು ವಿಚಾರವನ್ನು ಹೇಳಬೇಕು ಎಂದರೆ ಮದ್ರಾಸಿನಲ್ಲಿ ಇದೇ ರೀತಿಯ ಒಂದು ಯೋಜನೆ ಇದೆ. 16 ಕೋಟಿ ರೂಪಾಯಿಗಳಿಗೆ ಪ್ರಿ ಸ್ಟ್ರೆಸ್ಡ್ ಕಾಂಕ್ರೀಟ್ ಪೈಪ್ ಮೂಲಕ ನೀರನ್ನು ತೆಗೆದುಕೊಂಡು ಬರಬೇಕು ಎಂದು ತೀರ್ಮಾನ ಮಾಡಿದ್ದಾರೆ. ಅಂತರ ರಾಷ್ಟ್ರೀಯವಾಗಿ ಹೆಸರಾಂತ ಒಂದು ಗ್ರೀಕ್ ಕಂಪೆನಿಯ ಜೊತೆಯಲ್ಲಿ ಒಪ್ಪಂದ ಮಾಡಿಕೊಂಡಿದ್ದಾರೆ. 16 ಕೋಟಿ ರೂಪಾಯಿ ವೆಚ್ಚದಲ್ಲಿ 145 ಮೈಲ ದೂರದಿಂದ ಪ್ರಿಸ್ಟ್ರೆಸ್ಡ್ ಕಾಂಕ್ರೀಟ್ ಪೈಪ್‌ಗಳನ್ನು ಹಾಕಿ ನೀರನ್ನು ತರಬೇಕು ಎಂದು ಮದ್ರಾಸ್ ಸರ್ಕಾರದವರು ತೀರ್ಮಾನ ಮಾಡಿ, ಅದರಂತೆ ಒಪ್ಪಂದ ಮಾಡಿಕೊಂಡಿರುವಾಗ, ನಮ್ಮ ಸರ್ಕಾರದವರು ಸ್ಟೀಲ್ ಪೈಪ್ ಇರಬೇಕು ಎಂದು ಹೇಳುತ್ತಾರೆ. ತಜ್ಞರ ಅಭಿಪ್ರಾಯವನ್ನು ಬಿಟ್ಟು ಸ್ಟೀಲ್ ಪೈಪ್ ಹಾಕಬೇಕು ಎಂದು ತೀರ್ಮಾನ ಮಾಡುವುದಕ್ಕೆ ಕಾರಣವೇನು ಎನ್ನುವುದನ್ನು ಮಾನ್ಯ ಮಂತ್ರಿಗಳು ಹೇಳಬೇಕು.

ಈ ಸಂದರ್ಭದಲ್ಲಿ ಇನ್ನೊಂದು ವಿಚಾರವನ್ನು ಹೇಳಬೇಕಾಗಿದೆ, ಮದ್ರಾಸಿನಲ್ಲಿ ಪ್ರಿ ಸ್ಟ್ರೆಸ್ಡ್ ಕಾಂಕ್ರೀಟ್ ಪೈಪ್ ಹಾಕುವ ಕೆಲಸವನ್ನು ಒಂದು ಗ್ರೀಕ್ ಸಂಸ್ಥೆ ವಹಿಸಿಕೊಂಡಿದೆ. ಇರಾನ್ ದೇಶದಲ್ಲಿ ಕೂಡ ನೀರಿನ ಪ್ರಶ್ನೆ ಬಂದಾಗ ಅದೇ ರೀತಿಯಲ್ಲಿ ಪ್ರಿ ಸ್ಟ್ರೆಸ್ಡ್ ಕಾಂಕ್ರೀಟ್ ಪೈಪ್ ಹಾಕಬೇಕು ಎಂದು ತಜ್ಞರು ಕೊಟ್ಟ ಅಭಿಪ್ರಾಯವನ್ನು ಒಪ್ಪಿಕೊಂಡಿದ್ದಾರೆ. ಪ್ರಿ ಸ್ಟ್ರೆಸ್ಡ್ ಕಾಂಕ್ರೀಟ್ ಪೈಪ್ ಉಪಯೋಗಿಸುವುದರಿಂದ ಅದಕ್ಕೆ ಬಹಳ ಕಡಿಮೆ ವೆಚ್ಚ ತಗಲುತ್ತದೆ ಎಂದು ಅವರು ಒಪ್ಪಿಕೊಂಡಿದ್ದಾರೆ. ಪ್ರಪಂಚದಲ್ಲಿ ಎಲ್ಲ ಕಡೆಯೂ ಸಹ ಇದೇ ರೀತಿ ಇದೆ. ಫ್ರೆಂಚ್

(ಶ್ರೀ ಎಂ. ಎಸ್. ಕೃಷ್ಣನ್)

ಕನ್‌ಸಾಲ್‌ಟೇಷನ್ ಸಂಸ್ಥೆ ಒಂದಿದೆ. ಅವರನ್ನು ಸಹ ಜಲಮಂಡಳಿಯವರು ಕೇಳಿದ್ದಾರೆ. ಅವರ ಅಭಿಪ್ರಾಯವನ್ನೂ ಕೇಳಿದ್ದಾರೆ. ಅಲ್ಲಿಗೆ ನಮ್ಮ ಜೆಲ್ಲಿಕಲ್ಲು, ಕಲ್ಲು ಮತ್ತು ಮರಳನ್ನು ಕಳುಹಿಸಿ ಪರಿಶೋಧನೆ ಮಾಡಲಾಯಿತು. ಅವರೂ ಕೂಡ ಸ್ಟೀಲ್ ಪೈಪ್ಸ್‌ಗಿಂತ ಪ್ರೀಸ್ಟ್ರೆಸ್ಡ್ ಕಾಂಕ್ರೀಟ್ ಪೈಪ್ ಹಾಕುವುದು ಒಳ್ಳೆಯದು ಎನ್ನುವ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ನಾನು ಈ ಸಭೆಯ ಸದಸ್ಯನಾಗಿದ್ದರೂ ಸಹ ಸ್ವಲ್ಪಮಟ್ಟಿಗೆ ಇಂಜಿನಿಯರಿಂಗ್ ವ್ಯಾಸಂಗ ಮಾಡಿದ್ದೇನೆ. ಡಿಗ್ರಿ ಪಡೆದಿದ್ದೇನೆ. ಆದರೆ ನನಗೆ ತಿಳಿದಮಟ್ಟಿಗೂ ಸಹ ಸ್ಟೀಲ್ ಪೈಪ್‌ಗಿಂತ ಪ್ರೀಸ್ಟ್ರೆಸ್ಡ್ ಕಾಂಕ್ರೀಟ್ ಪೈಪ್ ಹಾಕುವುದರಿಂದ ಎಷ್ಟೋ ಅನುಕೂಲಗಳಿವೆ. ಒಂದು ನಮ್ಮ ಕಲ್ಲು ನಮ್ಮಲ್ಲಿ ಸಿಕ್ಕುವ ಮರಳು ಕಲ್ಲು-ಎಲ್ಲವನ್ನೂ ತೆಗೆದುಕೊಂಡು ಅದು ಒಂದು ಕಡೆ ಶೇಖರಿಸಿ ಸುಖವಾಗಿ ಪ್ರೀಸ್ಟ್ರೆಸ್ಡ್ ಕಾಂಕ್ರೀಟ್ ಪೈಪ್‌ಗಳನ್ನು ಮಾಡಬಹುದು. ಸ್ಟೀಲ್ ಪೈಪ್ ಮಾಡಬೇಕಾದರೆ ಅದಕ್ಕೆ ಬೇಕಾದ ಸ್ಟೀಲ್ ಎಲ್ಲಿಂದ ತೆಗೆದುಕೊಂಡು ಬರುತ್ತಾರೆ? ನಮ್ಮ ದೇಶದಲ್ಲಿ ಅದಕ್ಕೆ ಬೇಕಾದಂಥ ಸ್ಟೀಲ್ ತಯಾರು ಮಾಡುತ್ತಿಲ್ಲ. ಸ್ವಲ್ಪಮಟ್ಟಿಗೆ ತಯಾರಾಗುತ್ತಿದ್ದರೂ ನಮಗೆ ಸಾಕುವುದಿಲ್ಲ. ನಮಗೆ ಬೇಕಾಗಿರುವುದು 50 ಸಾವಿರ ಟನ್ ಸ್ಟೀಲ್. ಅದನ್ನು ಎಲ್ಲಿಂದ ತೆಗೆದುಕೊಂಡು ಬರುತ್ತಾರೆ? ಇದು ಬಹಳ ಮುಖ್ಯವಾದ ಪ್ರಶ್ನೆ. ಅದಕ್ಕೆ ಉತ್ತರವನ್ನು ಕೊಟ್ಟಿಲ್ಲ.

ಇ. ಸಿ. ಸಿ. ಕಂಪೆನಿಯವರು ಮತ್ತು ನಮ್ಮ ಜಲಮಂಡಲಿಯವರು ಅಕ್ರಮ ಸಂಬಂಧ ಬೆಳೆಸಿದ್ದಾರೆ. ಜೆಕೊಸ್ಲೋವೇಕಿಯಾದಿಂದ ಸ್ಟೀಲ್ ತೆಗೆದುಕೊಂಡು ಬರುತ್ತಾರೆ, ಅವರು ಸ್ಟೀಲ್ ಕೊಡುತ್ತಾರೆ, ಇವರು ಪೈಪ್ ಮಾಡುತ್ತಾರೆಂದು ಹೇಳಿ ಒಂದು ಪ್ಯಾಕೇಜ್ ಡೀಲ್ ಈ ಕಂಪನಿಜೊತೆ ಮಾಡಿದರು. ಕೇಳುವುದಕ್ಕೆ ಬಹಳ ಚೆನ್ನಾಗಿದೆ. ಆದರೆ ನಿಜಾಂಶವೇನೆಂದರೆ ಜೆಕೊಸ್ಲೋವೇಕಿಯಾದವರು ಇಂಥ ಕಾಲದಲ್ಲಿ ತೆಗೆದುಕೊಳ್ಳುವ ಹಾಗಿದ್ದರೆ ಮಾತ್ರ, ನಾವು ಸಪ್ಲೈ ಮಾಡುತ್ತೇವೆ, ನಿರಂತರವಾಗಿ ಎಷ್ಟು ದಿವಸವಾದರೂ ಸಪ್ಲೈ ಮಾಡುತ್ತೇವೆಂದು ಹೇಳುವುದಕ್ಕಾಗುವುದಿಲ್ಲ. ನಮ್ಮ ಸಪ್ಲೈ ಮತ್ತು ಡಿಮಾಂಡ್ ಪರಿಸ್ಥಿತಿ ನೋಡಿ ಸಪ್ಲೈ ಮಾಡುತ್ತೇವೆಂದು ಹೇಳಿದರು. ಇ.ಸಿ.ಸಿ. ಕಂಪೆನಿ ಅದನ್ನೂ ಮರೆಮಾಚಿ ಜೆಕೊಸ್ಲೋವೇಕಿಯಾ ಪೂರ್ತಿಯಾಗಿ ನಮಗೆ ಬೇಕಾಗಿರುವ ಸ್ಟೀಲ್ ಕೊಡುತ್ತಾರೆಂದು ಸುಳ್ಳು ಹೇಳಿದರು. ಆದರೆ ಸ್ಟೀಲ್ ಸಪ್ಲೈ ಮಾಡುವುದಕ್ಕೆ ನಮ್ಮ ಕೈಯಲ್ಲಿ ಆಗುವುದಿಲ್ಲ ಎಂದು ಜೆಕೊಸ್ಲೋವೇಕಿಯಾದವರೇ ಹೇಳಿದಾಗ, ಇ.ಸಿ.ಸಿ. ಯವರು ನಮ್ಮ ಕೈಯಲ್ಲೂ ಕೆಲಸ ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿದ್ದಾರೆ. ಅವರು ಅಷ್ಟು ಹೇಳಿದಮೇಲೆ ಮರ್ಯಾದೆಯಿಂದ ಅವರನ್ನು ಕೈ ಬಿಡಬಹುದಾಗಿತ್ತು. ಆದರೆ ಮತ್ತೆ ಪುನಃ ಅವರಿಗೆ ಸ್ಟೀಲ್ ಒದಗಿಸುತ್ತೇವೆಂದು ಬೋರ್ಡಿನವರು ತೀರ್ಮಾನ ಮಾಡಲು ಯೋಚನೆ ಮಾಡುತ್ತಿದ್ದಾರೆಂದರೆ, ಇವರಿಗೆ ವಿವೇಚನೆ ಇದೆಯೇ, ಇವರು ಯೋಚನಾಪರರು, ತಜ್ಞರು ಎಂದು ಹೇಳುವುದಕ್ಕಾಗುತ್ತದೆಯೇ ಎಂದು ನನಗೆ ಬಹಳ ಶಂಕೆಯಾಗುತ್ತದೆ. ಆದ್ದರಿಂದ ಪ್ರೀಸ್ಟ್ರೆಸ್ಡ್ ಕಾಂಕ್ರೀಟ್ ಪೈಪ್ ಏಕೆ ಉಪಯೋಗಿಸಬೇಕು, ಅದರಿಂದ ಏನು ಅನುಕೂಲವಿದೆ ಎಂದು ಹೇಳುತ್ತಿದ್ದೇನೆ. ಟೆಕ್ನಿಕಲ್ ಅಂಡ್ ಫೈನಾನ್‌ಷಿಯಲ್ ಪಾಯಿಂಟ್ ತೆಗೆದುಕೊಂಡರೆ ಏನು ಅನುಕೂಲ ಎನ್ನುವುದನ್ನು ಕೂಡ ನಾನು ತಮಗೆ ಹೇಳುತ್ತಿದ್ದೇನೆ. ನಾವು ಎರಡನ್ನೂ ಹೊಂದಿಸಿ ನೋಡೋಣ. ಸ್ಟೀಲ್ ಪೈಪ್ ಮತ್ತು ಕಾಂಕ್ರೀಟ್ ಪೈಪ್ ಎರಡನ್ನೂ ಒಂದಕ್ಕೊಂದು ಹೋಲಿಸಿದರೆ ಯಾವುದನ್ನು ಉಪಯೋಗಿಸುವುದರಿಂದ ಹೆಚ್ಚು ಮಿತವ್ಯಯವಾಗುತ್ತದೆ, ಯಾವುದು ಒಳ್ಳೆಯದು ಎನ್ನುವುದನ್ನು ಸ್ವಲ್ಪ ಲೆಕ್ಕಾಚಾರ ಹಾಕಿ ನೋಡೋಣ.

ಆಗಿನ ಸಂದರ್ಭದಲ್ಲಿ ಸ್ಟೀಲ್ ಪೈಪ್ ಮಾಡಲು ಬೇಕಾಗಿದ್ದ ಕಚ್ಚಾ ಮಾಲು 33,430 ಮೆಟ್ರಿಕ್ ಟನ್ಸ್. ಅದೇ ಪ್ರೀಸ್ಟ್ರೆಸ್ಡ್ ಕಾಂಕ್ರೀಟ್ ಪೈಪ್ ಮಾಡಲು ಬೇಕಾಗಿದ್ದ ಕಚ್ಚಾಮಾಲು 92,000 ಕ್ಯೂಬಿಕ್ ಮೀಟರ್ ಕಲ್ಲು, 46,000 ಕ್ಯೂಬಿಕ್ ಮೀಟರ್ ಮರಳು, 35,000 ಟನ್ ಸಿಮೆಂಟ್, 6,000 ಟನ್ ಎಚ್.ಟಿ.ವೈರ್. ಈಗ ಸ್ಟೀಲ್ ಎಷ್ಟು ಮಾತ್ರ ಸಿಕ್ಕುತ್ತದೆ ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಷಯವೇ ಆಗಿದೆ. ಇಂಡಿಯಾ ದೇಶದಲ್ಲಿ ಸ್ಟೀಲ್ ದೊರೆಯುವ ಪರಿಸ್ಥಿತಿಯನ್ನು ಅವಲೋಕಿಸಿದರೆ ಅದು ಅನಿಶ್ಚಿತವಾಗಿದೆ. ಜೆಕೊಸ್ಲೋವೇಕಿಯಾ ಅಥವಾ ಇತರ ಕಡೆಗಳಿಂದ ಅದನ್ನು ತರುವಂಥ ಪ್ರಯತ್ನ ಮಾಡಬೇಕಾಗಿದೆ. ಆದರೆ ಅದೇ ಸಂದರ್ಭದಲ್ಲಿ ಮರಳು ಮತ್ತು ಜೆಲ್ಲಿ ನಮ್ಮ ದೇಶದಲ್ಲಿಯೇ ಬೇಕಾದಷ್ಟು ಸಿಕ್ಕುತ್ತದೆ. ಆ ಬಗ್ಗೆ ಹೇಳಬೇಕಾಗಿಲ್ಲ. ಇದಕ್ಕೆ ತಗಲುವ ವೆಚ್ಚವನ್ನು ತೆಗೆದುಕೊಂಡರೆ 33,430 ಮೆಟ್ರಿಕ್ ಟನ್ ಸ್ಟೀಲ್ ಬೆಲೆ 74 ಲಕ್ಷ ರೂಪಾಯಿ ಆಗುತ್ತದೆ. ಇದಕ್ಕೆ ವಿದೇಶೀವಿನಿಮಯ ಎಕ್ಸ್‌ಛೇಂಜ್ 476 ಲಕ್ಷ ರೂಪಾಯಿ ಸೇರಿಸಿದರೆ ಐದೂವರೆ ಕೋಟಿ ರೂಪಾಯಿ ಆಗುತ್ತದೆ. ಆದರೆ ಮರಳು, ಜಲ್ಲಿ ಇವುಗಳ ಖರ್ಚು ಸುಮಾರು ಮೂರು ಕೋಟಿ

ರೂಪಾಯಿ ಆಗುತ್ತದೆ ಆದ್ದರಿಂದಲೇ ಪಿ.ಎಸ್.ಸಿ. ಪೈಪ್ ಹಾಕಿದರೆ ಎರಡೂವರೆ ಕೋಟಿ ರೂಪಾಯಿ ಉಳಿಯುತ್ತದೆ. ಫಾರೆನ್ ಎಕ್ಸ್‌ಛೇಂಜ್ ಎಷ್ಟು ಬೇಕು ಎಂದು ಲೆಕ್ಕಾಚಾರ ಹಾಕಿದರೆ ಕಚ್ಚಾಮಾಲಿಗೆ 476 ಲಕ್ಷ ರೂಪಾಯಿ, ಮತ್ತೆ ತಜ್ಞರ ಶುಲ್ಕ ಲಾಭ ಮುಂತಾದುವು 140 ಲಕ್ಷ ರೂಪಾಯಿ, ಎಲ್ಲ ಸೇರಿ 616 ಲಕ್ಷ ರೂಪಾಯಿ ಆಗುತ್ತದೆ. ಆದರೆ ಮರಳು, ಸಿಮೆಂಟ್ ಇವುಗಳೆಲ್ಲದರ ಖರ್ಚು ಸುಮಾರು 385 ಲಕ್ಷ ರೂಪಾಯಿ ಆಗುತ್ತದೆ. ಇದರ ಜೊತೆಗೆ ಕೆಲಸವನ್ನು ಪೂರ್ತಿ ಮಾಡುವ ಕಾಲಾವಧಿಯನ್ನು ನೋಡಿದರೆ 36 ತಿಂಗಳಲ್ಲಿ ಪೂರ್ತಿ ಮಾಡಬೇಕು ಎಂದು ಹೇಳುತ್ತಾರೆ. 36 ತಿಂಗಳಲ್ಲಿ ಪೂರ್ತಿ ಮಾಡಲು ಸಾಧ್ಯವಿದೆ ಎಂದು ಹೇಳುವುದಕ್ಕಾಗುವುದಿಲ್ಲ. ಇನ್ನೂ ಸ್ವಲ್ಪ ಜಾಸ್ತಿ ಕಾಲ ಬೇಕಾಗಬಹುದು, ಕಚ್ಚಾಮಾಲು ದೊರೆಯುವುದರಮೇಲೆ 36 ತಿಂಗಳ ಕಾಲಾವಧಿ ಅವಲಂಬಿಸುತ್ತದೆ ಎಂದು ಹೇಳಿದ್ದಾರೆ. ಅದಕ್ಕೆ ಜಲಮಂಡಲಿ ಒಪ್ಪಿಕೊಂಡಿದೆ ಮತ್ತು ಸರ್ಕಾರ ಮುದ್ರೆ ಒತ್ತಿದೆ. ಮೂರು ವರ್ಷ ಎಂದು ಕಾಲಾವಧಿಯನ್ನು ಗೊತ್ತುಮಾಡುವಾಗ ಕಚ್ಚಾ ಮಾಲು ದೊರೆಯುವುದರಮೇಲೆ ಅವಲಂಬಿಸಿ ಈ ಅವಧಿಯೂ ಹೆಚ್ಚಾಗಬಹುದು. ಆದರೆ ಪ್ರೀ ಸ್ಟ್ರೆಸ್ಡ್ ಕಾಂಕ್ರೀಟ್ ಪೈಪ್‌ಗಳನ್ನು ಉಪಯೋಗಿಸಿದರೆ ಇಷ್ಟೇ ಕಾಲದಲ್ಲಿ ಮುಗಿಯುತ್ತದೆ ಎನ್ನುವುದು ಖಚಿತವಾಗಿ ಗೊತ್ತಾಗುತ್ತದೆ.

7-30 P. M.

ಈ ಪ್ರಶ್ನೆಯ ಬಗ್ಗೆ ಇಷ್ಟು ಮಾತ್ರ ಹೇಳುತ್ತೇನೆ. ಮೂರು ವರ್ಷಗಳಲ್ಲಿ ಕೆಲಸ ಪೂರ್ತಿ ಮಾಡುತ್ತೇವೆಂದು ಬೇರೆ ಕಂಟ್ರಾಕ್ಟರುಗಳು ಹೇಳಿದ್ದಾರೆ. ಹೀಗಿರುವಾಗ, ಪ್ರಿಸ್ಟ್ರೆಸ್ಡ್ ಕಾಂಕ್ರೀಟ್ ಪೈಪ್ಸ್‌ಗೆ ಕಡಿಮೆ ಬೆಲೆ ಇರುವಾಗ ಏಕೆ ಅದನ್ನು ಉಪಯೋಗಮಾಡಬಾರದು ?' ಇಂದು ಸ್ಟೀಲ್ ಪೈಪ್ಸ್ ಬೇಕೇಬೇಕು ಎಂದು ಹೇಳುತ್ತಿದ್ದಾರೆ. ಇದರಲ್ಲಿ ಅರ್ಥವೇನು ? ಮರ್ಮವೇನು ? ಎರಡನೆಯದು ಮುಖ್ಯವಾದ ಪ್ರಶ್ನೆ—ಇರುವುದು ಹೋದಸಲ ಹೇಳಿದ್ದೇವೆ. ಆಗ ತಾವು ಪಿ.ಎಸ್.ಸಿ. ಪೈಪ್‌ನಿಂದ ಮಾಡುವುದಕ್ಕಾಗುವುದಿಲ್ಲ, ಸ್ಟೀಲ್ ಪೈಪ್‌ಗಳೇ ಬೇಕು ಎಂದು ಅರ್ಥ ಬರುವ ರೀತಿಯಲ್ಲಿ ಹೇಳಿದ್ದೀರಿ. ಅದು ತಜ್ಞರ ಅಭಿಪ್ರಾಯವಲ್ಲ, ಇಂಜನಿಯರುಗಳ ಅಭಿಪ್ರಾಯವಲ್ಲ, ಲೇ ಮ್ಯಾನ್ಸ್ ಒಪೀನಿಯನ್. ಅದನ್ನು ಹೇಳುವುದಕ್ಕೆ ಕಾರಣವೇನಿದೆ. ನೀರನ್ನು ಪಂಪ್‌ಮಾಡಲು ಸರಿಯಾದ ಹೆಡ್ ಇಲ್ಲ ಎಂದು ಹೇಳಲಾಗುತ್ತಿದೆ. ಹೆಡ್ ವಿಷಯದಲ್ಲಿ ಅಂತರ ರಾಷ್ಟ್ರೀಯ ಅಭಿಪ್ರಾಯ ಕೂಡ ಇದೆ. ನಮಗೆ ಬೇಕಾಗಿರುವುದು 500 ಅಡಿಗಳ ಹೆಡ್ ಅದು ಕಂಟಿನ್ಯೂಯಸ್ ಆಗಿರುವುದು—ಎಂದು ನೀವು ಹೇಳಿರುವುದು ಸರಿಯಲ್ಲ. ನಿಜವಾಗಿ ಕಾವೇರಿ ಯೋಜನೆಯಲ್ಲಿ ನನಗೆ ತಿಳಿದಮಟ್ಟಿಗೆ 7 ಮೈಲಿಗೆ 0 ಇಂದ 100 ಅಡಿಗಳ ಹೆಡ್ ಇರುವುದು. 35 ಮೈಲಿ 100 ರಿಂದ 300 ಅಡಿಗಳವರೆಗೆ ಹೆಡ್ ಇದೆ, 5 ಮೈಲಿಗೆ 300 ರಿಂದ 500 ಅಡಿಗಳ ಹೆಡ್ ಇರುವುದು, 500 ಅಡಿಗಳ ಮೇಲೆ 6 ಮೈಲಿ ಮಾತ್ರ ಇದೆ. ಈ 6 ಮೈಲಿಗಳಿಗೆ ಬೇಕಾದರೆ ಸ್ಟೀಲ್ ಪೈಪ್ ಉಪಯೋಗಿಸಬಹುದು. ಅಂತರರಾಷ್ಟ್ರೀಯ ತಜ್ಞರೂ ಪಿ.ಎಸ್.ಪಿ. ಪೈಪನ್ನು ಉಪಯೋಗಿಸಬಹುದು ಎಂದು ಹೇಳುವಾಗ ನೀವೇಕೆ ಸ್ಟೀಲ್ ಪೈಪ್ ಬೇಕೆನ್ನುತ್ತೀರಿ ? ನಮಗೆ ಮೋಸ ಮಾಡಲು ಏನೋ ಹೇಳುತ್ತಿದ್ದೀರಿ ಎಂದರೆ ತಪ್ಪಾಗಲಾರದು. ಫ್ರೆಂಚ್ ಫರ್ಮ್ ಒಂದು ಇದೇರೀತಿಯ ಕಂಟ್ರಾಕ್ಟ್ ತೆಗೆದುಕೊಂಡು 420 ಮೀಟರ್ನ್ ಹೆಡ್‌ವರೆಗೆ ಪಿ.ಎಸ್.ಸಿ. ಪೈಪ್ ಉಪಯೋಗಮಾಡುತ್ತಿದ್ದಾರೆ. 1,260 ಅಡಿಗಳವರೆಗೆ ಪಿ.ಎಸ್.ಪಿ. ಪೈಪು ಹಾಕಿ ಇಂದು ತೋರಿಸುತ್ತಿದ್ದಾರೆ. ಹೀಗಿರುವಾಗ ಸ್ಟೀಲ್ ಪೈಪೇ ಏಕೆ ಉಪಯೋಗಿಸಬೇಕು ? ಏಕೆ ಪಿ.ಎಸ್.ಪಿ. ಪೈಪು ಆಗುವುದಿಲ್ಲ, ಕಾರಣ ಗೊತ್ತಿಲ್ಲ. ಅವರು ಮಾಡಿರಬೇಕಾದರೆ ಅವರು ನಿಮ್ಮನ್ನು ಕೇಳಿದಾಗ ನೀವೇಕೆ ಅದನ್ನು ಒಪ್ಪಿಕೊಳ್ಳಬಾರದು ? ಹತ್ತು ವರ್ಷಗಳ ಗ್ಯಾರಂಟಿ ಕೂಡ ಕೊಟ್ಟಿದ್ದಾರೆ. ಹಾಗಿರುವಾಗ ನೀವು ಮಾಡುವುದಕ್ಕಾಗುವುದಿಲ್ಲವೆಂದು ಹೇಳುವುದು ಸರಿಯಲ್ಲ. ಹೆಡ್ ವಿಷಯದಲ್ಲಿ ತಪ್ಪು ತಿಳವಳಿಕೆ ಬೇರೆ ಇದೆ. ಒಂದು ಸಾವಿರ ಅಡಿಯವರೆಗೆ ಬೇರೆ ದೇಶದಲ್ಲಿ ಮಾಡಿದ್ದಾರೆ, ಇಲ್ಲಿ 500ರ ವರೆಗೆ ಮಾತ್ರ ಇರುವುದು. ಹೀಗಿರುವಾಗ ಬಹಳ ಸಲಭವಾಗಿ ಉಪಯೋಗಮಾಡಬಹುದು. ನಮ್ಮನ್ನು ಕನ್‌ಫ್ಯೂಸ್ ಮಾಡುವುದಕ್ಕೆ ಟೆಕ್ನಿಕಲ್ ಒಪೀನಿಯನ್ ಈ ರೀತಿ ಕೊಟ್ಟಿದ್ದಾರೆ ಎಂದು ಹೇಳುತ್ತಿದ್ದೀರಿ. ಪಿ.ಎಸ್.ಪಿ. ಪೈಪುಗಳ ಬೆಲೆ ಜಾಸ್ತಿ ಏನೇನೋ ಹೇಳಿ ತಮಗೆ ಮೋಸ ಮಾಡಲು ಪ್ರಯತ್ನಪಡುತ್ತಿದ್ದೀರಿ. ಅದು ಬಿಟ್ಟು ಆಳವಾಗಿ ನೀವು ಅಭ್ಯಾಸಮಾಡಬೇಕೆಂದು ವಿನಯವಾಗಿ ಕೇಳಿಕೊಳ್ಳುತ್ತೇನೆ. ಹಾಗೆ ಮಾಡಿದರೆ ಮೋಸ ಗೊತ್ತಾಗುವುದು.

ಇನ್ನೊಂದು ವಿಷಯ ತಮ್ಮ ಗಮನಕ್ಕೆ ತರುತ್ತೇನೆ. ಈಗ ಮೊದಲು ಟೆಂಡರು ಕರೆಯಿ

ಶ್ರೀ ಎಚ್. ಎನ್. ನಂಜೇಗೌಡ.—ಬಹಳ ಮುಖ್ಯವಾದ ವಿಷಯಗಳನ್ನು ಗಮನಕ್ಕೆ ತರಬೇಕಾಗಿರುವುದರಿಂದ ನಾಳೆಗೆ ಮುಂದುವರಿಸುವುದು ಕ್ಷೇಮ. ನಾಳೆ ಮುಂದುವರೆಸಿ.

ಶ್ರೀ ಬಿ. ಪಿ. ಗಂಗಾಧರ್.—ಇದು ನಿಲುವಳಿ ಸೂಚನೆಯಾದ್ದರಿಂದ ನಾಳೆ ತೆಗೆದುಕೊಳ್ಳಬಹುದು.

ಶ್ರೀ ಆರ್. ದಯಾನಂದಸಾಗರ್.—ಇದು ಬಹಳ ಗಹನವಾದ ವಿಷಯ, ಸುಮಾರು 5 ಕೋಟಿ ರೂಪಾಯಿ ಸಾರ್ವಜನಿಕ ಹಣದ ವಿಷಯ, ಎಲ್ಲರೂ ಇರುವಾಗ ಚರ್ಚೆಮಾಡಿದರೆ ಒಳ್ಳೆಯದು.

ಶ್ರೀ ಬಿ. ರಾಚಯ್ಯ.—ಮುಂದಕ್ಕೆ ಹೋದರೆ ಇದರ ಪ್ರಾಮುಖ್ಯತೆ ಹೋಗುವುದು.

ಉಪಾಧ್ಯಕ್ಷರು.—ಇದು ಬಹಳ ಮುಖ್ಯವಾದ ವಿಷಯ, ಇವತ್ತೇ ತೆಗೆದುಕೊಳ್ಳಬೇಕು ಎಂದು ಹೇಳಿದರು. ಅಲ್ಲದೆ ನಾಳೆ ಬಿಲ್ಸ್ ಇವೆ, ಮಾರ್ನಿಂಗ್ ಸೆಷನ್ ಇದೆ, ಮುಂದಿನ ತಿಂಗಳು ಒಂದನೆಯ ತಾರೀಖಿನಿಂದ 5ನೇ ತಾರೀಖಿನವರೆಗೆ ಕೂಡುವುದಿಲ್ಲ, ಮಧ್ಯೆ ರಜ ಬರುವುದು, 5ನೇ ತಾರೀಖು ಮೀಟ್ ಮಾಡುತ್ತೇವೆ. ನೀವು 30 ರೊಳಗೆ ಮುಗಿಸಬೇಕೆಂದು ಹೇಳಿದಿರಿ. ನಿಮ್ಮ ಲೀಡರ್ ಹಾಗೆ ಹೇಳಿದ್ದರಿಂದ ಇವತ್ತೇ ಅವಕಾಶ ಕೊಡಲಾಯಿತು. ಎಂಟೂವರೆವರೆಗೆ ಕೂಡಲು ನಾನು ತಯಾರಿದ್ದೇನೆ. ನಾಳೆ ಚುನಾವಣೆ ಬೇರೆ ಇದೆ.

ಶ್ರೀ ಎಂ. ಎಸ್. ಕೃಷ್ಣನ್ —ನಾನು ಎರಡು ಮುಖ್ಯ ವಿಷಯಗಳನ್ನು ಗಮನಕ್ಕೆ ತರುತ್ತೇನೆ. ಟೆಂಡರುಗಳನ್ನು ಕರೆದಿಲ್ಲ, ಪಾಲಿಸಿ ಡೈರೆಕ್ಟಿವ್ಸ್ ಮಾತ್ರ ನಾವು ಕೊಡಬಹುದು ಎಂದು ಹೇಳಿದಾ

ಕಾಸ್ಟ್ ಕೂಡ ಕಂಪಾರಿಸನ್ ಹೇಳಿದೆ. ವಾಟರ್ ಸಪ್ಲೈ ಬೋರ್ಡಿನಲ್ಲಿ ಒಬ್ಬರು ತಜ್ಞರು ಇದ್ದರೂ ಸಹ why is it that the Water Supply Board has accepted the highest tender? ಎನ್ನುವುದು ಒಂದು ಮುಖ್ಯವಾದ ಪ್ರಶ್ನೆ. ನಮಗೆ ಹಿಂದಿನ ಟೆಂಡರುಗಳು ಯಾವುವು ಎಂಬ ವಿಷಯ ಗೊತ್ತಿದೆ. ಅವು ಯಾವುವು ಎಂದರೆ : There were four tenders for all-steel pipes and two for all-concrete pipes. A french firm's Bonna and Soce a tender was for Rs. 7.98 crores and H.H.F. and N.P.C.C. Government of India concern gave tender for Rs. 8.02 crores.

ಇದರಲ್ಲಿ ಬಹಳ ಮುಖ್ಯವಾದ ಒಂದು ಪಾಲಿಸಿ ಪ್ರಶ್ನೆ ಬರುತ್ತದೆ, ಅದು ಏನೆಂದರೆ: Is this Govrnment interested in seeing that public sector Corporations and proects develop in our country or is this Government interested in helping a pjeate individual ? Sir, another firm N.B.C.C. (Madras) had given a teriv for Rs. 11.7 crores. ಎಚ್.ಎಚ್.ಎಫ್. 8.02 ಕೋಟಿ ರೂಪಾಯಿಗಳಿಗೆ ಕೊಟ್ಟಿದ್ದರು ಎನ್. ಬಿ. ಸಿ. ಅವರು 11.7 ಕೋಟಿ ರೂಪಾಯಿಗಳಿಗೆ ಕೊಟ್ಟಿದ್ದರು, ಇವರದನ್ನು ಬಿಟ್ಟು ಇಸಿಸಿಗೆ ಕೊಡುವುದರಲ್ಲಿ ಏನು ಅರ್ಥವಾಗುತ್ತದೆ : The Board has given up its policy; the Government is opposed to public sector development because the Congress-O decided against the public scetor at its Faridabad session. You are only enriching individual contctors ; you want to enrich your organisation for the coming elections. You are enriching few Ministers and Chairman and Members of the Water Supply Board who have behaved in a very suspicious manner. Otherwise, there cannot be any reason as to why you should not have accepted the other lowest tender ? This is a matter of policy. The economics of public sector vs. private sector has already been debated in our country. If there is a public sector corporation to do the job well why should we not etrnst the work to them ? The public sector has been doing good job at Madras and other places. Therefore Sir, there should be a direct probe as to why the contract was given to E.C.C. even though their tender was the highest. This firm had entered into a contract and when gave up the contract. When it came to know that contract may be given to somebody else, it again reduced the tender amount by one crores over-night. Was it correct on the part of this Board to accept the tender of such a firm. Honesty demanded on the

part of the Water Supply Board that once a person who entered into a contract has given up the contract, they should have called for fresh tenders. They should have also taken severe action against the E.C.C. Instead of that, they have entrusted the work again to the E.C.C. and didn't care to call for fresh tenders. Where is Honesty ?

On the question on second tender you have miserably failed. The Advocate of the Board has stated that action must be taken. When the Advocate has stated so, where was the necessity to refer it to another member of the Board who happens to be an, Advocate. After all, he is a party to the contract already entered into with E.E.C, He says that no action need be taken against E.E.C. That is why I say that there is something fishy. It is nothihg but dishonesty and downright corruption. Therefore, this whole transaction must be scrapped. Today in the morning in answer to a question of Sri T. R. Shamanna you have stated that as per the agreement executed with firm there is a cluase for payment of 5 per cent of the tendered amount as interest bearing advance after the issue of work order. ಯಾರಾದರೂ ಇದನ್ನು ತಿಳಿದಂಥಾವರು ನೋಡಿದರೆ ಈ ಕಾಂಟ್ರ್ಯಾಕ್ಟ್ ಮಾಡಿರುವುದು ಹಾಸ್ಯಾಸ್ಪದವಾಗಿದೆ ಎನ್ನುತ್ತಾರೆ. ನೀವು ಅವರಿಂದ ಡಿಪಾಸಿಟ್ ತೆಗೆದುಕೊಳ್ಳಲಿಲ್ಲ. ಅರ್ನೆಸ್ಟ್ ಮನಿಗೆ ಬ್ಯಾಂಕ್ ಗ್ಯಾರಂಟಿ ಕೊಟ್ಟಿದ್ದಾರೆ. ಅವರಿಗೆ 30 ಲಕ್ಷ ರೂಪಾಯಿ ಅಡ್ವಾನ್ಸ್ ಕೊಡುವುದು ಎಂದರೆ ಅರ್ಥ ಏನು ? ಅವರಿಗೆ ಇನ್‌ವೆಸ್ಟ್ ಮಾಡುವುದಕ್ಕೆ ಕ್ಯಾಪಿಟಲ್ ಇಲ್ಲ. [illegible] ಲಕ್ಷ ತೆಗೆದುಕೊಂಡು ಕೆಲಸ ಮಾಡಬೇಕು. ಎಂದರೆ ಅರ್ಥ ಏನು ? ಯಾರ ಯಾರ ಕೈ ಎಷ್ಟೆಷ್ಟು ಬೆಚ್ಚಗೆ ಆಗಿದೆಯೋ ಆಗುತ್ತದೆಯೋ ಗೊತ್ತಿಲ್ಲ. ಎಷ್ಟೆಷ್ಟು ಲಕ್ಷ ರೂಪಾಯಿ ಯಾರ್ಯಾರಿಗೆ ಹೋಗುತ್ತದೋ ನನಗೆ ಗೊತ್ತಿಲ್ಲ. ಇದರಲ್ಲಿ ನನಗೆ ಸಂಶಯ ಇದೆ. ಇದನ್ನು ರಾಜಕೀಯಕ್ಕೆ ಉಪಯೋಗಿಸಿಕೊಂಡಿದ್ದಾರೆ, ಅದಕ್ಕಾಗಿ ಇದು ನಡೆಯುತ್ತಿದೆ. 30ಲಕ್ಷ ರೂಪಾಯಿ ಕೊಡಬೇಕು ಎಂದು ಏನು ತೀರ್ಮಾನ ಮಾಡಿದ್ದಾರೋ ಅದನ್ನು ನಿಲ್ಲಿಸಬೇಕು. ಈ ಬೋರ್ಡಿನ ಅಧಿಕಾರಾವಧಿ 29ನೇ ತಾರೀಖು ಮುಗಿದುಹೋಗುತ್ತದೆ. ಕಡೇ ದಿವಸ ಎಷ್ಟು ಸಿಗುತ್ತದೋ ಅಷ್ಟು ದೋಚಿಕೊಂಡು ಹೋಗೋಣ ಎಂದು ಮಾಡಿದ್ದಾರೆ. You must interfere immediately. This is a policy matter in which the people of Bangalore will sustain heavy loss. What will this mean if it is executed now ? You are going to supply steel add E.E.C. will just do the work. Why should it do ? Our unemployed engineers will be able to do much better under the guidance of the P.W.D And what would be the cost of it ? You do not know the steel supply position, The cost will go on increasing. Has Sri Veerendra Patil got into any underhand dealing with some Japanese firm to get steel ? More than all the cost of water will increase. ಮಾನ್ಯ ಮಂತ್ರಿಗಳು ಹೇಳಿದಹಾಗೆ ಕಾಸ್ಟ್ ಆಫ್ ವಾಟರ್ 1960ರಲ್ಲಿ ಎಸ್ಟಿಮೇಟ್ ಮಾಡಿದಾಗ 1000 ಗ್ಯಾಲನ್ಸ್‌ಗೆ 1.12 ಪೈಸೆ, 1964ರಲ್ಲಿ 1.94 ಪೈಸೇ, 1966ರಲ್ಲಿ ವರ್ಲ್ಡ್ ಬ್ಯಾಂಕ್‌ನವರು ಪ್ರಾಜೆಕ್ಟ್ ಮಾಡಿದಾಗ 2 ರೂಪಾಯಿ 68 ಪೈಸೆ ಆಯಿತು, ಇದನ್ನು ಇ.ಸಿ.ಸಿ. ಕಂಪನಿಯವರು ಮಾಡಿದರೆ 4 ರೂಪಾಯಿಗಿಂತಲೂ ಜಾಸ್ತಿ ಆಗುತ್ತದೆ. ಅದು ಇನ್ನೂ 6 ರೂಪಾಯಿ ಕೂಡ ಆಗಬಹುದು. ದಯಮಾಡಿ ಹೀಗೆ ಮಾಡಬೇಡಿ ಎಂದು ನಾನು ಕೇಳಿಕೊಳ್ಳುತ್ತೇನೆ. You conduct a Judicial probe into the whole matter. I support the demand for scrapping the Water Board and entrust the supply of water to the Bangalore Corporation and get the Cauvery Scheme executed by the P.W.D.

†ಶ್ರೀ ಎಚ್. ಎನ್. ನಂಜೇಗೌಡ (ಅರಕಲಗೂಡು).—ಮಾನ್ಯ ಅಧ್ಯಕ್ಷರೇ, ತಮ್ಮ ಗಮನವನ್ನು ಹಾಗೂ ಶ್ರೀಮಾನ್ ಅಗ್ನಿಹೋತ್ರಿಯವರ ಗಮನವನ್ನು 28ನೇ ಜನವರಿ 1970ರಂದು ಏನು

(ಶ್ರೀ ಎಚ್. ಎನ್. ನಂಜೇಗೌಡ)

ಹೇಳಿದರೋ ಅದರ ಕಡೆಗೆ ಸೆಳೆಯುವುದಕ್ಕೆ ಇಷ್ಟಪಡುತ್ತೇನೆ. ಅದರಲ್ಲಿ ಈ ಅಪಾದನೆಗಳು ಮಾಡಿದ್ದಕ್ಕೆ ಉತ್ತರವಾಗಿ ಹೀಗೆ ಹೇಳಿದ್ದಾರೆ.

"ಬೋರ್ಡ್‌ನವರು ಟೆಂಡರ್‌ಗಳು ಬಂದಿದ್ದನ್ನು ಕೂಲಂಕಷವಾಗಿ ಚರ್ಚೆಮಾಡಿ ಒಂದು ನಿರ್ಣಯತೆಗೆದುಕೊಂಡಮೇಲೆ ಒಬ್ಬ ಸದಸ್ಯರು ಅದನ್ನು ಪ್ರೊಟೆಸ್ಟ್ ಮಾಡಿದ್ದಾರೆ ಅದನ್ನು ಪರಿಶೀಲನೆ ಮಾಡುತ್ತಾ ಇದ್ದೇವೆ. ಮತ್ತು ನಮ್ಮ ಸರ್ಕಾರದ ಹಿತದೃಷ್ಟಿಯಿಂದ, ಬೆಂಗಳೂರು ನಗರದ ಹಿತದೃಷ್ಟಿಯಿಂದ ಏನು ಮಾಡುವುದಕ್ಕೆ ಸಾಧ್ಯವಿದೆ ಎನ್ನುವುದನ್ನು ಯೋಚನೆ ಮಾಡುತ್ತಾ ಇದ್ದೇವೆ ಅಂತ ಇಷ್ಟು ಮಾತ್ರ ಹೇಳಿ ಇದರ ಬಗ್ಗೆ ಕ್ಷಮೆ ಬೇಡುತ್ತೇನೆ * * *

ಶ್ರೀಮಾನ್ ನಂಜೇಗೌಡರು ಕೆಲವು ವಿಚಾರಗಳನ್ನು ಹೇಳಿದ್ದಾರೆ, ಯಾವುದೋ ಒಂದು ಇ.ಸಿ.ಸಿ. ಕನ್‌ಸ್ಟ್ರಕ್ಷನ್ ಕಂಪೆನಿ, ಬೆಂಗಳೂರು ವಾಟರ್ ಸಪ್ಲೈ ಬೋರ್ಡ್‌ಗೆ ಟೆಂಡರ್ ಹಾಕಿದ್ದಾರೆ, ಆ ಕಂಪನಿಯ ಮ್ಯಾನೇಜಿಂಗ್ ಡೈರೆಕ್ಟರ್ ಶಂಕರ ಬೇಣಿ ಎನ್ನುವವರು ಒಬ್ಬ ರಿಲೇಷನ್ ಇದ್ದಾರೆಂದು ಹೇಳಿದ್ದಾರೆ. ಇನ್ನು ನಾನು ಜುಡಿಷಿಯಲ್ ಎನ್‌ಕ್ವೈರಿ ಮಾಡಿಸಬೇಕು. ನನಗೆ ಅವರಿಗೆ ಯಾವ ತರಹ ನೆಂಟಸ್ತನ. ರಿಲೇಷನ್ ಇಲ್ಲ. ನನಗೂ ಶ್ರೀಮಾನ್ ಶಿವಪ್ಪನವರಿಗೂ ಏನು ರಿಲೇಷನ್‌ಷಿಪ್ ಇದೆಯೋ ಅದೇ ರಿಲೇಷನ್ ಇದೆ, ನನಗೂ ಶ್ರೀ ಸಿದ್ದವೀರಪ್ಪನವರಿಗೂ ಏನು ರಿಲೇಷನ್‌ಷಿಪ್ ಇದೆ ಅಷ್ಟು ರಿಲೇಷನ್‌ಷಿಪ್ ಇದೆ"

"ಅಷ್ಟೇ ಅಲ್ಲ ಅದರ ಜೊತೆಗೆ ಬೆಂಗಳೂರು ನಗರದ ಹಿತದೃಷ್ಟಿಯಿಂದ ಏನು ಮಾಡುವುದಕ್ಕೆ ಸಾಧ್ಯವಿದೆ ಎನ್ನುವುದನ್ನು ಯೋಚನೆ ಮಾಡುತ್ತಾ ಇದ್ದೇವೆ" ಎಂದು ಹೇಳಿದರು. ಬಹುಶಃ ಬೆಂಗಳೂರಿನ ಇ.ಸಿ.ಸಿ. ಕಂಪನಿಗೆ ರಕ್ಷಣೆ ಕೊಡುವುದು, ಇ.ಸಿ.ಸಿ. ಕಂಪನಿಗೆ ಲಾಭ ಮಾಡುವುದು, ಬೆಂಗಳೂರು ನಗರದ ಹಿತದೃಷ್ಟಿಯಿಂದ ಏನು ಭಾವನೆ ಮಾಡಿದ್ದಾರೋ ಏನೋ ನನಗೆ ಗೊತ್ತಿಲ್ಲ. ವಾಟರ್ ಸಪ್ಲೈ ಅಂಡ್ ಸೂಯರೇಜ್ ಬೋರ್ಡ್, ಅದು ಸ್ಟ್ಯಾಚ್ಯೂಟರಿ ಬೋರ್ಡ್ ಎಂದು ಅವರು ಹೇಳಿದ್ದಾರೆ. ನಾನು ಒಪ್ಪಿಕೊಳ್ಳುತ್ತೇನೆ. ಈಗ ಇಲ್ಲಿರತಕ್ಕ ಸದಸ್ಯರು ಇಷ್ಟು. ಯಾವ ಉದ್ದೇಶಕ್ಕಾಗಿ ಈ ಬೋರ್ಡನ್ನು ಮಾಡಿದ್ದೇವೋ ಅಂದರೆ ಜನತೆಯ ಹಿತದೃಷ್ಟಿಯಿಂದ ಬೋರ್ಡಿನ ಸದಸ್ಯರು ವರ್ತಿಸಿಲ್ಲ ಎಂದು ಹೇಳುತ್ತೇನೆ. ಅದು ಒಂದು ಸ್ಟ್ಯಾಚ್ಯೂಟರಿ ಬೋರ್ಡ್ ಆಗಿರುವುದರಿಂದ ಅದರ ಆಂತರಿಕ ವ್ಯವಹಾರದಲ್ಲಿ ನಾವು ಪ್ರವೇಶ ಮಾಡುವುದಿಲ್ಲ ಎಂದು ಹೇಳಬಹುದು. ಅಗ್ನಿಹೋತ್ರಿಯವರೂ ಹೇಳಬಹುದು. 1964 ವಾಟರ್ ಸಪ್ಲೈ ಅಂಡ್ ಸೂಯರೇಜ್ ಆಕ್ಟ್ ಸೆಕ್ಷನ್ ಸಬ್ ಸೆಕ್ಷನ್ (5) ಈ ರೀತಿ ಇದೆ.

6 (5) "If the Board fails to carry out its functions. or refuses or fails to follow the directions issued by the State Government under this Act, the State Government may remove the Chairman and members of the Board and appoint a Chairman and members in their places"

ಇದು ಒಂದು ಪ್ರಾವಿಷನ್ ಇದೆ. ಇದರಂತೆ ಸರ್ಕಾರ ಇನ್‌ಸ್ಟ್ರಕ್ಷನ್ಸ್ ಕೊಡಬಹುದು. ಸರ್ಕಾರ ಇನ್‌ಸ್ಟ್ರಕ್ಷನ್ಸ್ ಕೊಡದೇ ಇದ್ದರೆ ಏನು ಅರ್ಥ !

ಇನ್ನು ಸೆಕ್ಷನ್ 7ರ ಪ್ರಕಾರ "Power of State Government to declare certain transactions void". ಅಂತ ಇದೆ. ಸೆಕ್ಷನ್ 7ರ ಪ್ರಕಾರ ಬೋರ್ಡ್‌ನವರು ಮಾಡಿದಂಥ ಕೆಲವು ಟ್ರಾನ್ಸಾಕ್ಷನ್ಸ್ ಏನು ಇದೆ ಅದನ್ನು void ಎಂದು ಡಿಕ್ಲೇರ್ ಮಾಡಬಹುದು.

ಇನ್ನು ಸೆಕ್ಷನ್ 7 ರ ಪ್ರಕಾರ ಬೋರ್ಡಿನವರು ಮಾಡಿದ್ದಂಥ ಕೆಲವು ಟ್ರಾನ್ಸಾಕ್ಷನ್ಸ್ ಏನಿವೆಯೋ ಅವನ್ನು ವಾಯ್ಡ್ ಎಂದು ಸರ್ಕಾರದವರು ಡಿಕ್ಲೇರ್ ಮಾಡುವುದಕ್ಕೆ ಆಗುತ್ತದೆಯೇ ಎನ್ನುವ ಪ್ರಶ್ನೆ ಈಗಿರುವುದು. ಸೆಕ್ಷನ್ 7 ಸಬ್ ಸೆಕ್ಷನ್ (2) ನಲ್ಲಿ ಈ ರೀತಿ ಹೇಳಿದೆ.

"A District Judge nominated under sub-section (1) shall, before making his report under that sub-section to the State

Government in relation to any transaction, give all parties interested in the transaction a reasonable opportunity of being heard.''

8-00 P. M.

ಇದರಂತೆ ಒಬ್ಬ ಡಿಸ್ಟ್ರಿಕ್ಟ್ ಜಡ್ಜ್ ಮಟ್ಟದಲ್ಲಿರುವವರನ್ನು ನೇಮಕಮಾಡಿ ಅವರಿಂದ ಇದರ ಬಗ್ಗೆ ಎನ್‌ಕ್ವೈರಿ ನಡೆಸಬೇಕು. ಇನ್ನು ಸೆಕ್ಷನ್ 6 ಸಬ್ ಸೆಕ್ಷನ್ (ಡಿ) ಮತ್ತು (ಇ) ನಲ್ಲಿ ಈ ರೀತಿ ಹೇಳಿದೆ.

''(*d*) becomes or seeks to become a member of Parliament or any State Legislature or any local authority or (e) in the opinion of the State Government

* * *

(iii) has so abused his position as a member as to render his continuance on the Board detrimental to the interests of the general public.''

ಇದನ್ನು ಏತಕ್ಕೆ ನಿಮ್ಮ ಗಮನಕ್ಕೆ ತರುತ್ತಿದ್ದೇನೆಂದರೆ, ಇದರಲ್ಲಿ ಸಾರ್ವಜನಿಕರ ಹಿತದೃಷ್ಟಿಯಿಂದ ಹಾಗೂ ಬಡವರ ಹಿತದೃಷ್ಟಿಯಿಂದ ನೀವು ವರ್ತಿಸಿದ್ದೀರಾ ಎಂದು ಇರತಕ್ಕ ಪ್ರಶ್ನೆ ಈಗ ವಾಟರ್ ಸಪ್ಲೈ ವರ್ಕ್‌ಗೋಸ್ಕರ ಒಂದು ಟೆಂಡರನ್ನು ಕರೆದರು. ಆ ಟೆಂಡರ್‌ನಲ್ಲಿ ನಾನು ತಿಳಿದು ಕೊಂಡಿರುವ ಪ್ರಕಾರ ಆಲ್ ಸ್ಟೀಲ್ ಅಥವಾ ಕಾಂಬಿನೇಷನ್ ಆಫ್ ಸ್ಟೀಲ್ ಅಂಡ್ ಪ್ರೀ ಸ್ಟ್ರೆಸ್ಡ್ ಕಾನ್‌ಕ್ರೀಟ್ ಪೈಪ್ಸ್ ಸಪ್ಲೈ ಮಾಡಬೇಕೆಂಬುದು ಇವೆರಡೂ ಇಲ್ಲ. ಕ್ಯಾಷ್ ಅಡ್ವಾನ್ಸ್ ಕೊಡ ತಕ್ಕದ್ದು ಎಂಬ ಕ್ಲಾಜು ಟೆಂಡರ್ ನೋಟಿಫಿಕೇಷನ್ನಿನಲ್ಲಿ ಇಲ್ಲ. ಸ್ಟೀಲ್ ಪೈಪ್ಸ್‌ಗೆ ಕೊಟೇಷನ್ ಕೊಡಿ ಎಂದೂ ಸಹ ಹೇಳಲಿಲ್ಲ. ಅಥವಾ ಕಾಂಬಿನೇಷನ್ ಆಫ್ ಸ್ಟೀಲ್ ಅಂಡ್ ಪ್ರೀ ಸ್ಟ್ರೆಸ್ ಕಾನ್‌ಕ್ರೀಟ್ ಪೈಪ್ಸ್‌ಗೆ ಕೊಡಿ ಎಂದೂ ಸಹ ಹೇಳಲಿಲ್ಲ. ಅದಕ್ಕಾಗಿ ಆಲ್ ಸ್ಟೀಲ್ ಪೈಪ್ಸ್‌ಗೆ ನಾಲ್ಕು ಟೆಂಡರುಗಳು ಬಂದವು. ಕಾಂಬಿನೇಷನ್ ಆಫ್ ಸ್ಟೀಲ್ ಅಂಡ್ ಪ್ರೀ ಸ್ಟ್ರೆಸ್ಡ್ ಕಾನ್ ಕ್ರೀಟ್ ಪೈಪ್ಸ್‌ಗೂ ಕೆಲವರು ಟೆಂಡರ್ ಕೊಟ್ಟರು. ಇದಕ್ಕೆ ಬಹುಶಃ ಒಂದು ಟೆಕ್ನಿಕಲ್ ಕಮಿಟಿ ಇರಬೇಕು. ಆಲ್ ಸ್ಟೀಲ್ ಪೈಪುಗಳನ್ನು ತೆಗೆದುಕೊಳ್ಳಬೇಕು ಕಾಂಕ್ರೀಟ್ ಪೈಪುಗಳನ್ನು ತೆಗೆದು ಕೊಳ್ಳಕೂಡದು ಎಂಬುದಾಗಿ ಸೂಚನೆಯನ್ನು ಟೆಂಡರ್ ರಿಸೀವ್ ಮಾಡಿ ಎಲ್ಲಾ ಆದಮೇಲೆ ಆ ಕಮಿಟಿಯವರು ಏತಕ್ಕೆ ಕೊಟ್ಟರು ? ಏನು ಕಾರಣದಿಂದ ಕೊಟ್ಟರು ? ಇದರಿಂದ ಜನಗಳಲ್ಲಿ ಬಹಳ ಅಶಾಂತಿ ಆಗಿದೆ. ಮಂಗಳೂರು ವಾಟರ್ ಸಪ್ಲೈ ಸ್ಕೀಂಗೆ ಟೆಂಡರ್ ಕೊಡುವಾಗಲೂ ಅಲ್ಲಿ ಏಕೆ ಸ್ಟೀಲ್ ಪೈಪಿಗೆ ಚೇಂಜ್ ಮಾಡಿದರೋ ಗೊತ್ತಿಲ್ಲ. ಕಂಟ್ರಾಕ್ಟ್ ಕೊಟ್ಟಮೇಲೆ ಆ ರೀತಿ ಯಾಗಿ ಚೇಂಜ್ ಮಾಡಿದ್ದಾರೆ. ಇದಾದಮೇಲೆ ಈಗ ಟೆಕ್ನಿಕಲ್ ಕಮಿಟಿಯವರು ಹೇಳಿದರು ಎಂಬುದಾಗಿ ಹೇಳಿ, ಆಲ್ ಸ್ಟೀಲ್ ಪೈಪುಗಳನ್ನು ಸಪ್ಲೈ ಮಾಡುವುದಕ್ಕೆ ನಾಲ್ಕು ಫರ್ಮ್ಸ್ ಇದ್ದರೂ ಶಂಕರನಾರಾಯಣ ಕನ್‌ಸ್ಟ್ರಕ್ಷನ್ ಕಂಪನಿಯವರಿಗೆ ಕೆಲಸದಲ್ಲಿ ಅನುಭವ ವಿಲ್ಲವೆಂತಲೂ, ಎನ್. ಪಿ. ಸಿ. ಸಿ. ಯವರು ಟೈಮಿಗೆ ಸರಿಯಾಗಿ ಟೆಂಡರ್ ಕೊಡಲಿಲ್ಲವೆಂತಲೂ ಮತ್ತು ಐ. ಎಚ್. ಪಿ. ಸಿ. ಯವರಿಗೆ ಇನ್ನಾವ ಕಾರಣವನ್ನೋ ಹೇಳಿ ಅವರಿಗೆ ಈ ಕೆಲಸವನ್ನು ಕೊಡಲಿಲ್ಲ. ನಂತರ ಇ. ಸಿ. ಸಿ. ಯವರಿಗೆ ಈ ಕೆಲಸವನ್ನು ಕೊಟ್ಟರೆಂಬುದಾಗಿ ಉತ್ತರದಲ್ಲಿ ಏನೋ ಹೇಳುತ್ತಾರೆ. 13 ಕೋಟಿ ರೂಪಾಯಿಗಳಿಗೆ ಇ. ಸಿ. ಸಿ. ಕಂಪನಿಯವರಿಗೆ ಹೇಗೆ ಕೊಟ್ಟರು ? ಇಷ್ಟು ಆದಮೇಲೆ ಸ್ಟೀಲ್ ರೇಟ್ ರೈಜ್ ಆಯಿತು ಎಂದು ಆ ಕಂಪನಿಯವರು ಮುಂದೆ ಬರಲಿಲ್ಲ. ಅದಕ್ಕಾಗಿ ಅವರ ಮೇಲೆ ಆಕ್ಷನ್ ತೆಗೆದುಕೊಳ್ಳಬೇಕೆಂದು ಲೀಗಲ್ ಅಡ್ವೈಜರಿ ಕಮಿಟಿಯವರು ಹೇಳಿರಲಿಲ್ಲವೇ ? ನಿಮ್ಮ ಬೋರ್ಡಿನವರು ರಿಜಾರ್ಟ್ ಮಾಡಿ ಎಡನೆಯಸಾರಿ ಅವರ ಮೇಲೆ ಕ್ರಮ ಕೈಬಿಡಬೇಕೆಂದು ಹೇಳಿರಲಿಲ್ಲವೇ ? ನಿಮ್ಮ ಬೋರ್ಡಿನವರು ಇದರಿಂದ ಪ್ರಾಮಾಣಿಕರಾಗಿ ವರ್ತಿಸಿದ್ದಾರೆಯೇ ? ಸೆಕ್ಷನ್ 7ರ ಪ್ರಕಾರ ಒಬ್ಬ ಜಡ್ಜನ್ನು ನೇಮಕಮಾಡಿ ಅದನ್ನು ಎನ್‌ಕ್ವೈರಿ ಮಾಡುವುದಕ್ಕೆ ನಿಮಗೆ ಅಧಿಕಾರವಿರಲಿಲ್ಲವೇ ? ಅದರ ಬಗ್ಗೆ ಉತ್ತರ ಕೊಡಬೇಕು. ಇದಾದಮೇಲೆ ನಿಮ್ಮ ಬೋರ್ಡಿನವರು ನಿಮ್ಮ ಚೇರ್‌ಮನ್ನರಿಗೆ ಅಧಿಕಾರ ಕೊಡಲಿಲ್ಲವೇ ? ಇವರ ಮೇಲೆ ಕ್ರಮ ತೆಗೆಕೊಳ್ಳಬಹುದಾಗಿತ್ತು. ಅದನ್ನು ಬೇಡವೆಂದು ಹೇಳಲಿಲ್ಲವೇ ? ಈ ವಿಚಾರವಾಗಿ ನಾನು ಸುಮಾರು 6 ತಿಂಗಳಿಂದಲೂ ಈ ಸರ್ಕಾರದವರನ್ನು ಕೇಳುತ್ತಿದ್ದೇನೆ. ಈಗ ತೀರ್ಮಾನಮಾಡುವ

(ಶ್ರೀ ಎಚ್. ಎನ್. ನಂಜೇಗೌಡ)

ಕಾಲದಲ್ಲಿ ನಿಮ್ಮ ಚೇರ್‌ಮನ್ ಬೊಂಬಾಯಿಗೆ ಹೋದರು ಮತ್ತು ಬೋರ್ಡಿನವರಿಗೆ ಅವರೇ ಸಲಹೆ ಕೊಟ್ಟರು ಮತ್ತು ಅದು ಘನವಾದ ಕಂಪನಿ ಎಂದು ಹೇಳಿದರು. ಇ. ಸಿ. ಸಿ. ಕಂಪನಿಯವರಮೇಲೆ ಕ್ರಮಗಳನ್ನು ನಡೆಸಬಾರದೆಂದು ಹೇಳಿದಿರಿ. ಇನ್ನೊಂದು ಕಂಪನಿಗೆ ಕೊಡಬೇಕೆಂದು ತೀರ್ಮಾನಮಾಡಿದ್ದನ್ನು ಯಾವ ಕಾರಣದಿಂದ ಬದಲಾಯಿಸಿದಿರಿ? Is it in the interest of general public? What were the compelling reasons for the Chairman or the Board Members to have all these complications? ನಿಮಿಷಕ್ಕೊಂದು ವ್ಯವಹಾರ, ಕಾಲಕ್ಕೊಂದು ವ್ಯವಹಾರ. ಇದಕ್ಕೆ ಕಾರಣವೇನು? ಆದ್ದರಿಂದ ಈಗ 30 ಲಕ್ಷ ರೂಪಾಯಿಗಳ ಅಡ್ವಾನ್ಸ್ ನೀವು ಏನು ಕೊಟ್ಟಿದ್ದೀರೋ ಅದನ್ನು ಇ. ಸಿ. ಸಿ. ಕಂಪನಿಯವರು ಕೊಡಬೇಕಾಗುತ್ತದೆ. ಅದರ ಜೊತೆಗೆ ಅಡ್ವಾನ್ಸ್ ಕೊಟ್ಟಿದ್ದಕ್ಕೆ ಇಂಟರೆಸ್ಟ್ ಕೊಡುವುದಕ್ಕೆ ಅವರು ಮುಂದೆಬಂದಿದ್ದಾರೆ, ಐ. ಎಚ್. ಪಿ. ಸಿ ಯವರು ಆ ರೀತಿ ಬರಲಿಲ್ಲವೆಂದು ಹೇಳಿದಿರಿ. ಆದರೆ ಅವರ ವಿರುದ್ಧವಾಗಿ ನಾನು ಈಗ ಮಾತನಾಡುತ್ತಿಲ್ಲ. ಆ ರೀತಿ ನೋಟಿಫಿಕೇಷನ್‌ನಲ್ಲಿ ಹಾಕಿದ್ದರೆ, ಕಾಂಪಿಟಿಟಿವ್ ಟೆಂಡರ್ ಬರುತ್ತಿದ್ದುವು. ಆದರಿಂದ ಜನರಲ್ ಪಬ್ಲಿಕ್ ಇಂಟರೆಸ್ಟನ್ನು ಸೇಫ್‌ಗಾರ್ಡ್ ಮಾಡಬಹುದಾಗಿತ್ತು. ಯಾರ ಮೇಲೆ ಕ್ರಮ ತೆಗೆದುಕೊಳ್ಳಬೇಕೋ ಅಂಥವರನ್ನು ಬಿಟ್ಟುಬಿಡುವುದು ಅಂದರೆ ಏನು? ಇ. ಸಿ. ಸಿ. ಕಂಪನಿಯವರ ಮೇಲೆ ಮಾನ್ಯ ಮುಖ್ಯಮಂತ್ರಿಗಳಿಗೆ ಇಂಟರೆಸ್ಟ್ ಇದೆಯೆಂದು ನಾನು ಹಿಂದೆಯೇ ಹೇಳಿದ್ದೇನೆ. ಇವತ್ತು ಅದನ್ನು ಪುಷ್ಟೀಕರಿಸುತ್ತಿದ್ದೇನೆ. Our Chief Minister is interested in not taking the prices in t e Agreement but escalation in the prices. ಸ್ಟೀಲ್ ಪ್ರೈಸ್ ಜಾಸ್ತಿಯಾಯಿತೆಂದು ಮಾತನಾಡುವ ಕಾಲದಲ್ಲಿ ಅವರಿಗೆ ಸ್ಟೀಲ್ ಒದಗಿಸಿ ಕೊಡುವುದಕ್ಕೆ ಹೊರಟಿದ್ದಾರೆ. ಆದ್ದರಿಂದ ಈಗ ಬೋರ್ಡಿನ ಪ್ರಾಮಾಣಿಕತೆಯನ್ನು ಮತ್ತು ಈ ಬೋರ್ಡಿನ ಹಿಂದೆ ಇದರ ಬಗ್ಗೆ ಇರತಕ್ಕ ಮಾನ್ಯ ಮುಖ್ಯಮಂತ್ರಿಗಳ ಕೈವಾಡವನ್ನು ಇವತ್ತು ನಾವು ಪ್ರಶ್ನೆ ಮಾಡಬೇಕಾಗಿದೆ. ಆದ್ದರಿಂದ ಬೆಂಗಳೂರು ವಾಟರ್ ಸಪ್ಲೈ ಅಂಡ್ ಸ್ಯೂಯರೇಜ್ ಬೋರ್ಡ್ ಆಕ್ಟಿನ ಸೆಕ್ಷನ್ 7ರ ಪ್ರಕಾರ ಡಿಸ್ಟ್ರಿಕ್ಟ್ ಜಡ್ಜ್ ಆಗಿರುವ ಒಬ್ಬರನ್ನು ಇದರ ಬಗ್ಗೆ ವಿಚಾರಣೆ ನಡೆಸುವುದಕ್ಕೆ ತಕ್ಷಣ ನೇಮಕ ಮಾಡಬೇಕು. ಅವರ ವರದಿ ಬಂದನಂತರ ಇವರಮೇಲೆ ಏನೇನು ಕ್ರಮಗಳನ್ನು ತೆಗೆದುಕೊಳ್ಳಬೇಕೋ ಅವನ್ನು ಕೈಗೊಳ್ಳಬೇಕು. 15 ದಿನಗಳೊಳಗೆ ವರದಿಯನ್ನು ಸಲ್ಲಿಸುವ ಹಾಗೆ ಹುಕುಂ ಮಾಡಬೇಕೆಂದು ನಾನು ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಅದಲ್ಲದೆ ಈಗ ಇವರಿಗೆ ಅಡ್ವಾನ್ಸ್ 30 ಲಕ್ಷ ರೂಪಾಯಿ ಕೊಡಬೇಕೆಂದು ಹೇಳುತ್ತಿದ್ದಾರೆ. ಏಕೆಂದರೆ ಇವರಿಗೆ ಸರ್ಕಾರದ ದುಡ್ಡು ಅಂದರೆ, ಒಂದು ಕೋಳಿಗೆ ನೂರು ರೂಪಾಯಿ ಬಿಲ್ ಹಳ್ಳಿಯಲ್ಲಿ ಮಾಡಿದ ಹಾಗೆ ಕಾಣುತ್ತದೆ. ಹಳ್ಳಿಯಲ್ಲಿ ಸೂಪರ್‌ವೈಸರಿಗೆ ಊಟ ಹಾಕಲು ಒಂದು ಕೋಳಿ ಕೊಯ್ದಿದ್ದರೆ ಅದಕ್ಕೆ ಬಿಲ್ 100 ರೂಪಾಯಿ ಮಾಡುತ್ತಾನೆ. ಏಕೆಂದರೆ, ಅದು ಸರ್ಕಾರದಿಂದ ಬರತಕ್ಕಂತಹ ಹಣ. ಇವತ್ತು 30 ಲಕ್ಷ ರೂಪಾಯಿ ಕೊಟ್ಟರೆ, ಅಲ್ಲಿ ಮೂರು ಕೋಟಿ ರೂಪಾಯಿ ತಿನ್ನಬಹುದು. ಆದ್ದರಿಂದ ಇದರಲ್ಲಿ ತಕ್ಷಣ ಕ್ರಮ ತೆಗೆದುಕೊಳ್ಳಬೇಕು. ಮೊದಲನೆಯದಾಗಿ ಈ ಬೋರ್ಡನ್ನು ಅಬಾಲಿಷ್ ಮಾಡಬೇಕು. ಈಗ ನಡೆದಿರತಕ್ಕ ಕೆಲಸಗಳನ್ನು ಕಾರ್ಪೊರೇಷನಿಗೆ ವಹಿಸಿಕೊಡಬೇಕು. ಮುಂದೆ ಏನು ಇಂಪ್ರೂವ್‌ಮೆಂಟ್ ಮಾಡಬೇಕೆನ್ನುವುದನ್ನು ಸರ್ಕಾರದ ಪಿ. ಡಬ್ಲ್ಯೂ. ಡಿ. ಇಲಾಖೆಯ ಮುಖಾಂತರ ನಡೆಸಬೇಕು ಮತ್ತು ಬೋರ್ಡ್ ಮೆಂಬರ್ಸ್ ಏನಿದ್ದಾರೆ, ಅವರ ರಿಟೈರ್ ಆಗುವುದಕ್ಕೆ ಮೊದಲು ಅವರನ್ನು ಸಸ್ಪೆಂಡ್ ಮಾಡಬೇಕು. ಇದನ್ನು ಕೈಗೊಳ್ಳದಿದ್ದರೆ, ಇವರು ಕೂಡ ಇದರಲ್ಲಿ ಪಾರ್ಟ್‌ನರ್ಸ್ ಇದ್ದಾರೆ, ಈ ದುರ್ವ್ಯವಹಾರದಲ್ಲಿ ತುಂಬಾ ಪಾಲನ್ನು ಇವರು ಹೊಂದಿದ್ದಾರೆ ಎನ್ನುವ ಅಭಿಪ್ರಾಯ ಜನರಲ್ಲಿ ಬರುತ್ತದೆ, ಮತ್ತು ನಮ್ಮಲ್ಲೂ ಆ ಅಭಿಪ್ರಾಯ ಬರುತ್ತದೆ. ಇಷ್ಟು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

SRI H. M. CHANNABASAPPA.—I submit that this being a very important issue involving a big money deal and a very large number of members would like to express their opinion it would be in the best interest of the Government itself that this is pos poned till tomorrow.

MR. DEPUTY SPEAKER.—It has been alrea y discussed for two hours. It was agreed that this should be finished today.

Sri R. DAYANANDA SAGAR.—I would like to charge the ministers as responsible for corruption. Let it not go down in the history that this important issue was not discussed because Government interfered. I suggest you can take it up tomorrow. This involves five crores of rupees and it is not a small affair. Let us have full discussion.

Mr. DEPUTY SPEAKER.—We have taken up this under rule 59. If we postpone, we will be setting-up a bad precedent. It should be finished today. The hon. Member may please begin.

Sri B. P. GANGADHAR.—The Chair may kindly extend the time of discussion on this subject as there are many members desirous of participating.

Mr. DEPUTY SPEAKER.—According to Rule 60, the time for discussion cannot exceed $2\frac{1}{2}$ hours.

†Sri H. M. CHANNABASAPPA.—Mr. Deputy Speaker Sir, Mysore State was once a model for good, efficient and honest administration. But under the regime of Sri Veerendra Patil, Mysore has become model for big fishy money games. It has become a paradise for contractors and middlemen; it has become a paradise for corrupt men. This paradise is known for backing up corrupt men. Mysore has become Contractors' Raj. I am sorry to say that it is very difficult now to retrace our steps. I for one believe and feel that it is difficult to get back to that standard of efficient and honest administration hereafter.

Now this big money deal pertaining to Cauvery Water Supply Scheme was discussed some time in January last. This Government has become thick-skinned, so think-skinned that they have absolutely no regard for honesty in administration and dealings. This Cauvery Water Supply scheme itself was designed with political motives. I do not want to go into the history of that. Immediately after Sri Nijalingappa came to power, he wanted cheap popularity and for that Cauvery Water Supply proposal became a good field to my friend. That is a different matter. For such a man, there were big garlands and he was hailed as one of the saviours of Mysore.

When these people went to the world Bank for loan, they required that an expert commitee should go into the matter. An expert committee was appointed on this account and they have given very big reports; they have stated that pre-stressed concrete pipes of the size required for the height in the lift is quite good enough. Here is the report which says that; and I do not want to go into it unless the House wants me to read it; it will mean lot of repetition. Even for a lift of 1135 ft and for pipes ranging from 60" to 72" in diameter, prestressed concrete pipes are good enough: specially so in the context of the special advantages it has. The first advantage is that it does not require steel which is very scarce in this country. Secondly, it has advantage over steel pipes in that there will be no corrosion. After having been approved by the technical advisers of competence, the Mysore Government invited tenders for two categories of work. One

(SRI H. M. CHANNABASAPPA)

is for civil engineering works and also for fixing and construction of steel pipes and the second is for construction of watere works including civil engineering works with prestressed concrete plus steel pipes and the quotations are before us ; I do not want to trouble this House with details given by a number of people of competence. What happened ? We have spent Rs. 25 lakhs now for the report of this Expert Committee. Should we not have the advantage of having spent Rs. 25 lakhs already for bringing this Report by experts ? The experts stated that prestressed concrete pipes are sufficient and that they can go ahead with it. So the tender for supply of prestressed concrete pipes should have been normally accepted. But the Government called for tenders for steel pipes on the one side and for prestressed concrete pipes on the other.

I have already made out that nearly Rs. 13 crores was the tender of E. C. C. ; while the tender of a French firm was only Rs. 7.98 crores, the diffierence being about Rs. 5 crores. The French firm tendered for prestressed concrete pipes and they offered a guarantee of 10 long years. Mind you, it is one of the foremost firms known all over the world and the firm has executed works in a number of developed countries. When their was scope to save Rs. 5 crores and when there was also scarcity for a material like steel, what did the Government do ? The Government made an attempt to accept the highest tender for Rs. 13 crores as against Rs. 8 crores offered by the French Firm. What was the plea ? The plea was that the Technical Committee advised them to go in for steel pipes. The same Technical Committee, which they quote, has advised prestressed concrete pipes and based on that they have proceeded to call for tenders. I ask this Government in all fairness : when prestressed concrete pipes were not Suitable, why did you call for tenders ? If a combination of prestressed concrete pipes and steel pipes were not suitable and were not technically sound, why did you call for tenders ? That is my question. Here lies the whole secret of it. They thought it would be cheaper. When the tenders came, the French Firm offered a tender of Rs. 8 crores as against Rs. 13 crores offered by E. C. C You committed the biggest crime against the State by trying to accept the highest tender of E. C. C., not because it was the best but because it was a paying concern to some of our own friends on the other side. Believe me when I say that when this deal was discussed the hon. Member Sri Dayanand Sagar made serious charges against the Ministry for corruption and not one word was said to rebut it. The Chief Minister contented himself by saying that this is a matter in which Government interference would not be justified, but the matter would be looked into. At that time there was commotion in the whole of Bangalore, but they were not worried about it. What happened ? I would appeal to hon. Members to look into this. The Czechoslovakian firm offered to supply steel only when E. C. C. is given the tender. Here is a fishy deal. Generally a

business firm should not be bothered as to who purchases their steel. It supply will depend upon the profit they are going to make. What is the thing that is behind the whole game ? A private concern sells steel to anybody who is prepared to purchase it at competitive rates.

8-30 P.M.

In this connection, this particular firm saying that it will supply only if E. C. C. is given the tender looks like a bait to the E. C. C. to secure the contract first. This bait was put through successfully.

SRI M. S. KRISHNAN.—The information that has come to me goes to show that this Czechoslovakian firm had entered into a contract with E. C. C. and they were suppliers of steel to E. C. C. and they are not bound to supply to anybody else.

SRI H. M. CHANNABASAPPA.—It looks as though this contract was entered into with ulterior motive. After all, this is business and whoever pays them more, they will supply to him. Therefore, putting this bait E.C.C. managed to get the contract. But when there was a furore in this House there was a set back on the part of the Board and they dare not confirm the contract. In the meantime what happened ? There was some steep rise in steel prices. The Czechoslovakian firm backed out. All this has got to be read in the context of the letter of intent having been already issued to the E.C.C. firm. When the Czechoslovakian firm was about to enter into agreement with the Mysore Government for supply of steel there was this increase in steel prices and this firm backed out. Then what is to be done ? In the natural course of events the E. C. C. tender had to be quashed and disciplinary action ought to have been taken against this contractor for having backed out and his earnest money deposit should have been forefeited and he should have been placed in the black-list. This question of taking action against the E. C. C. was discussed by the Board. If I may disclose to this House the question of taking action against E.C.C. came up for consideration before the Board on 15th May 1970 and legal advice was also sought on that. When the process of taking action against the E.C.C. was already afoot, other forces began to operate. All the firms which had tendered for steel pipes were requested to come on 15th May 1970 and negotiations started. I would like to ask, what is the moral behind inviting E. C. C. for negotiations when this firm had backed out and at the same time caused embarassment to the Government of Mysore. But instend, they invited E.C.C. also. What happened ? This question of taking action against E.C.C. was kept aside and discussion began with the Indian Hume Pime Company and its tender was considered and the Chief Engineer who is also the Chairman of the Board kept the tender of the I.H.P. in force.

The tender of the I.H. P. was for Rs. 604.84 lakhs and that of E. C. C. for similar kind of work was Rs. 642.42 lakhs. There was

(SRI H. M. CHANNABASAPPA)

a clear difference of nearly Rs. 37. 58 lakhs between the tender of I.H.P. and the tender of E.C.C. for steel pipe conduits. The action of the Chairman of the Board has been applauded by the Board itself for having kept the I.H.P's tender in force. The Chairman of the Board himself has applauded the I.H.P. as competent to carry out this work with speed and thorough efficiency. Did they not know that this Indian Hume Pipe Company was quite efficient when they were to accept the tender of E.C.C.? It is only when E.C.C. was dropped out, he said that the Indian Hume pipe Company was competent and all that. Then some of the technical officers of the Board also went to Bombay and studied the working of this Company and they said that it is competent enough and it is one of the most efficient institutions. Why did this not strike the Board before and why did the Chief Engineer, who is also the head of the institution entrust the work to Indian Hume pipe Company even at the time when the firm's tender was considered for the first time when its tender was Rs. 1 crore less than that of E.C.C.? They cannot keep things secret from the public; the public are vigilant enough and able to read through things. Afterwards what happened? The Board took action to this contract to the India Hume Pipe Company. Let the Minister say whether the Government or the Board did or did not entrust the work to Indian Hume Pipe Company for Rs. 604.48 lakhs as a whole? They themselves have opined that with the value of the steel to be supplied the whole thing will work out to Rs. 10 crores and odd. So the Board decided that the Indian Hume Pipe Company should be invited to take up the work. Later on what happened? The Chairmen was authorised to carry on negotiations with the Indian Hume Pipe Co.; and take decision in pursuance of the decision of the Board. Let the Minister in charge say whether this is correct or not? This Government cannot be allowed to go easily.

After this, the Chairman, in the guise of negotiations, has flouted even the directions of the Board and has negotiated with a firm, E.C.C. which should have in the normal course of things not only been excluded but also black-listed, and induced them to go further, in a seeming attempt to save money, the contract has been fixed on E. C. C., at Rs. 6.14 crores and the value of the steel will go to Rs. 10 to 12 crores depending upon the value of the steel. Sir, without going to the figures, I only Question the moral behind the whole thing. Why you are so much enamoured at E. C. C., who is the middleman in-between the Board and the E. C. C., etc., These are matters which have to be probed into by an independent authority. Sir, much against the recommendation of the Technical Committee appointed specifically for this purpose, we have avoided taking pre-stressed concrete pipes and there by deceived the State by about Rs. 5 crores—today it will go up anywhere near Rs. 12 to 13 crores. By the bungling of this Board, these friends have committed a crime against the State. This is not

These are matters which require to be gone into by a competent authority. The entire files have got to be examined. Today I had a discussion with the Hon'ble Minister for Municipal Administration, and some officers were also there. They did not answer my simple question and they wanted the Chairman to come and answer. My question was, when this Technical Committee of renowned fame, ability, capacity and authority, have said that pre-stressed concret pipes are suitable for this scheme, where was the need to change it. On the advice of the Technical Committee, the Government of Mysore also came to the conclusion that pre-stressed concrete pipes can be used and global tenders were invited. Immediately after the global tenders came and E. C. C. could not be favoured, the same Technical Committee appears to have told them that it should be changed. I want to know why the same Technical Committee gave a different advice.

Sir, you remember that 26 very serious charges had been framed against this Government some ten years back. Another set of charges of carruption, nepotism, faveuritism, etc. , are pending enquiry before this Government. If they are not prepared to take the challenge, it means that they are conceding those charges. I feel that a judicial probe against all the Ministers must take place in this country. As I have already said Mysore has become a paradise for corrupt practices, corrupt politicians and corrupt middlemen. This state of affairs should stop. The Minister may give an explanation that it is an independent body. Still, I charge this Government that it is on that score you have been making Corporations after Corporations, in order to get out of the clutches of rules and procedure, and in order to encourage big contractors you are deliberately encouraging Corporations to take up works involving crores of rupees, which they are not competent to take up. You are indirectly trying to encourage institutions only to your advantage and to the advantage of the contractors of your choice. There are serious allegations that there is somebody in between the Government and the Board and the E.C.C., and this middleman has been making money to your advantage and to the advantage of some of the Board members. It is not only my charge but it is a charge of many members on this Side and it is being dinned into your ears. The people of Mysore cannot tolerate this kind of non-sense going on, and a time will come when these people will have to answer the public. Therefore, I appeal to the Chief Minister—if he has any respect for fairplay—to appoint a Judicial Commission and let the Commission give its verdict in this deal. Otherwise things will have their own way and he will have to pay for it one day or the other.

With these words I conclude.

† SRI R. DAYANANDA SAGAR (Chamarajpet).—Mr. Speaker, Sir I do not want to go into the details My friends have made it very clear. All the points I wanted to speak and stress have been brought to the notice of the House and therefore I do not want to repeat them. I raised a hue and cry in this house about the contract given to the

(SRI R. DAYANAND SAGAR)

Engineering Construction Company. This is the point for consideration. I understand the Cabinet called the two Engineers to explian the position to the Cabinet. As you know Sir, the water supply Board has got only two Engineers-one is the Chairman and the other Engineer, Sri Manchigiah. Sri Manchigaiah is known for his integrity and honesty throughout his service. He said it is not correct to decide to have steel pipes and pre-stressed pipes could be used as opined by an expert Committee. The expert Committee of Nagpur known as Central Pipe Dealing Engineering Institute opined that the pre-stressed Concrete pipes are best because they do not corrode whereas the steel is likely to corrode. Further the neighbouring State, the Tamil Nadus is using this pre-stressed pipes to bring the very same water of Cauvery to Madras. Therefore Sri Manchigiah argued in fitness of things that because it is Rs. 5 crores cheaper than the highest tender, we must approve and agree to the lowest tender of the French Company or the Government of India Undertaking. I do not know what made the Cabinet to over look this opinion.

This is very important. The Board may make a statement or a decision the members of which are known to which side they belong and in whose favour they take decision. The integrity of these members is questionable. But when the matter was before the Cabinet, they should have behaved as responsible people. As the Government is responsible to this House and to the people of the State, these people should have considered all the points. It is a question of saving Rs. 5 crores and they should not have over thrown the opinion of the Engineer Member. The other members of the Board are laymen like myself. The two Engineers have given two opinions-one says the steel pipes and the other says prestressed pipes. The Government should have referred this matter to an Expert Committee. The expert opinion is being taken in this country and elsewhere. Instead of taking the expert opinion, they have gone ahead entrusting this work to Engineering Construction Company. In the case of Expo-70 you have spent Rs. 5 lakhs. In this case it is the loss to the extent of Rs. 5 crores. This excess expenditure is going to enhance the water rate and the citizens of Bangalore will have to bear this burden. As a citizen of Bangalore, I know, we will have to pay Rs. 4 to 5 for every thousand gallons, which is going to be a perpetual burden on the citizens. Therefore, this is not an easy matter. By spending Rs. 5 crores if you gain anything, or if the people are going to be benefited, I would have certainly accepted that point. But this is a disputable point. It is a disputable point among the Engineers themselves in the Board. I understand that the Chief Minister has said, let us go ahead with this increased expenditure. It is not an easy thing to say like this because it is the people's money and it is being wasted which we cannot tolerate. I also understand that Rs. 30 lakhs have been distributed among themselves. This Government has behaved in an irresponsible manner in this century. Even in olden days when the Dewans were in sole charge of Government, which we called the iressponsible Governments, the

people used to be consulted and the expert opinions were taken. They were justifing their action taken. But now there hast been no atempt to justify their action. They are going ahead without any fear and they have given contract to the highest tenderer.

A Czechoslovikian Firm did not supply the steel. These people kept quiet without taking action against them. They should have taken severe action against them. But instead of doing that, they compromised with them. But the people say there is some suspicion in this deal and there is something wrong in it. If there is shame left in the Government, if there is honour left in them, and if they are dignified people, they should have resigned and got out because it is not fair for any Government to stay any longer when they have failed in clarifying the matter. But they are trying to hide the entire matter and trying to share the boty. This not only the instance, but there are hundreds of instances like this. Therefore, they have no moral stand to continue in the Government. Even if they are right, that has to be proved. If it is to be proved, let them appoint a Supreme Court Judge, not an ordinary Judge, because it is a very important case, to go into the case and give his verdict. If they are correct, let them continue otherwise they have no morality to continue. Thank you Sir.

9-00 P.M.

Mr. DEPUTY SPEAKER.—Now, the Hon. Minister to reply.

Sri R. DAYANANDA SAGAR.—Sir, I rise to a point of order. I don't think it is proper for this Minister to reply to this discussion. He is not a Cabinet Minister. This conspiracy has taken place in the cabinet. Therefore, no Minister, other than the Hon. Chief Minister should reply to this discussion.

Mr. DEPUTY SPEAKER.—He is the concerned Minister and he alone has to reply to it.

† ಶ್ರೀ ಬಿ. ಎಂ. ಪಾಟೀಲ್ (ನಗರಾಡಳಿತ ಶಾಖೆಯ ರಾಜ್ಯ ಮಂತ್ರಿಗಳು).—ಮಾನ್ಯ ಮಿತ್ರರಾದ ದಯಾನಂದಸಾಗರ್‌ರವರಿಗೆ ಇಷ್ಟು ಹೇಳುತ್ತೇನೆ: ಇದು ನನಗೆ ಸಂಬಂಧಪಟ್ಟ ವಿಷಯ, ಅವರಿಗೆ ಮುಖ್ಯ ಮಂತ್ರಿಗಳೇ ಉತ್ತರ ಕೊಡಬೇಕೆಂದಿದ್ದರೆ ಇಲ್ಲಿಯವರೆಗೆ ಈ ವಿಷಯದ ಮೇಲೆ ಮಾತನಾಡಬೇಕಾದ ಅವಶ್ಯಕತೆಯೇ ಇರಲಿಲ್ಲ. ನನಗೆ ಸಂಬಂಧಪಟ್ಟ ವಿಷಯವಾದ್ದರಿಂದ ಇದಕ್ಕೆ ನಾನು ಉತ್ತರ ಕೊಡಬೇಕಾಗುತ್ತದೆ. ಅವರು ಮುಖ್ಯ ಮಂತ್ರಿಗಳಿದ್ದಾಗ ಅವರಿಂದ ಬೇಕಾದ ವಿಚಾರ ತಿಳಿದುಕೊಳ್ಳಬಹುದು.

ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ಸನ್ಮಾನ್ಯ ಸದಸ್ಯರು ಅನೇಕರು ವಾಟರ್ ಬೋರ್ಡಿಗೆ ಸಂಬಂಧಪಟ್ಟ ಕಾವೇರಿ ಯೋಜನೆಗೆ ಸಂಬಂಧಿಸಿದ ಟೆಂಡರ್ ವಿಷಯದಲ್ಲಿ ಮಾತನಾಡಿದ್ದಾರೆ. ಒಬ್ಬರು ಟೆಂಡರಿಗೆ ಸಂಬಂಧಪಟ್ಟ ಕೆಲವು ವಿಷಯಗಳನ್ನು ಮಾತ್ರ ಪ್ರಸ್ತಾಪಿಸಿದರು. ಆದರೆ ಸಾಮಾನ್ಯವಾಗಿ ಅವರ ಮಾತಿನ ಧಾಟಿಯನ್ನು ನೋಡಿದರೆ ಯಾವುದೇ ವಿಷಯ ಬರಲಿ ಸರಕಾರದ ಮೇಲೆ ಕರಪ್ಷನ್ ಚಾರ್ಜನ್ನು ಹೊರಿಸುವರು. ಪ್ರಾಮಾಣಿಕತೆಯ ವಿಚಾರದಲ್ಲಿ ಯಾವಾಗಲೂ ಮಾತನಾಡುವ ರೂಢಿ ಬೆಳೆದುಬಂದಿದೆ. ಆದರೆ ಆ ವಿಚಾರ ಮಾತನಾಡುವವರು ತಾವು ಅದನ್ನು ಆಚರಣೆಗೆ ತಂದು ಮಾತನಾಡಬೇಕು. ಆ ಭಾವನೆ ಅವರಲ್ಲಿ ಬೆಳೆದುಬರಬೇಕು. ಯಾವುದೇ ಸಮಸ್ಯೆ ಬಂದರೂ ಆದಕ್ಕೆ ಕಮಿಷನ್ ನೇಮಕಮಾಡಬೇಕು. ಜುಡಿಷಿಯಲ್ ಕಮಿಷನ್ ನೇಮಕ ಮಾಡಬೇಕು ಎಂದು ಮೇಲಿಂದಮೇಲೆ ಒತ್ತಾಯಮಾಡುತ್ತಿದ್ದಾರೆ. ಹೀಗಾದರೆ ಪ್ರತಿಯೊಂದು ವಿಷಯಕ್ಕೂ ಒಂದು ಕಮಿಷನ್ ಮಾಡುವುದಾದರೆ ಪರ್ಮನೆಂಟ್ ಕಮಿಷನ್ ಮಾಡಬೇಕಾಗುವುದು

(ಶ್ರೀ ಬಿ. ಎಂ. ಪಾಟೀಲ್)

ಹಾಗೆ [illegible] ಮಾಡಿ ಯಾವುದೇ ವಿಷಯ ಬಂದರೂ ಆ ಕಮಿಷನ್ನಿಗೆ ರೆಫರ್ ಮಾಡಬೇಕಾಗುವುದು. ಈ ರೀತಿ ಮಾಡಬೇಕೆಂದು ಒತ್ತಾಯಪಡಿಸುವ ಪ್ರವೃತ್ತಿ ಬೆಳೆಯುತ್ತಾ ಇದೆ ಅನ್ನಿಸುವುದು. ಯಾರನ್ನು ನೋಡಿದರೂ ಲಂಚಕೋರರು, ಅಪ್ರಾಮಾಣಿಕರು ಎಂದು ಹೇಳುತ್ತಾ ಹೋದರೆ ಪ್ರಾಮಾಣಿಕತೆಯಿಂದ ಯಾರಾದರೂ ಕೆಲಸಮಾಡುವರೇ ಎಂಬ ಶಂಕೆ ಬರುವುದು. ಉತ್ಪ್ರೇಕ್ಷೆ ಮಾಡುವುದು ಯೋಗ್ಯವಲ್ಲ. ವಾಟರ್ ಬೋರ್ಡಿನ ಬಗ್ಗೆ ಮಾತನಾಡುವಾಗ ಅದರ ಸದಸ್ಯರು ಅಪ್ರಾಮಾಣಿಕರು ಸರಕಾರದಲ್ಲಿರುವ ಮಂತ್ರಿಗಳು ಹಣ ಹಂಚಿಕೊಳ್ಳುತ್ತಿದ್ದಾರೆ, ಅಧಿಕಾರಿಗಳೆಲ್ಲಾ ಲಂಚಕೋರರು ಎಂದು ಮುಂತಾಗಿ ಹೇಳುತ್ತಾ ಇದ್ದರೆ ಇಡೀ ಸೊಸೈಟಿ ಕರಪ್ಟ್ ಆಗಿದೆ ಎಂಬ ಭಾವನೆ ಬರುವುದು. ದಿನವೂ ಈ ಸಭೆಯಲ್ಲಿ ಹೀಗೆ ಮಾತನಾಡುತ್ತಿದ್ದರೆ ಇದರ ಪರಿಣಾಮ ಜನರಮೇಲೆ ಯಾವರೀತಿ ಆಗಬಹುದು, ಜನರಲ್ಲಿ ಎಂಥ ಭಾವನೆ ಬರಬಹುದು ಎಂಬುದಕ್ಕೆ ಗಮನ ಕೊಡಬೇಕು. ಹೀಗೆ ಪ್ರಚಾರ ಮಾಡಿ ಜನರಲ್ಲಿ ಇಲ್ಲದ ಭಾವನೆ ಬರುವುದಕ್ಕೆ ಅವಕಾಶ ಕೊಡಬಾರದು ಎಂದು ಮಾನ್ಯ ಸದಸ್ಯರಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ವಾಟರ್ ಬೋರ್ಡ್ ಸಲುವಾಗಿ ಟೆಂಡರು ಕರೆಯುವಾಗ ಸ್ಟೀಲ್ ಪೈಪ್ಸ್‌ಗೆ ಒಪ್ಪಿಗೆ ಕೊಡುವುದಾದರೆ ಪ್ರಿ ಸ್ಟ್ರೆಸ್ಡ್ ಕಾಂಕ್ರೀಟ್ ಪೈಪ್ಸ್‌ಗೆ ಏಕೆ ಟೆಂಡರು ಕರೆದರು ಎಂದು ಪ್ರಶ್ನೆ ಮಾಡಿದರು. ಇದಕ್ಕೆ ನಾನು ಉತ್ತರ ಕೊಡುತ್ತೇನೆ. ವಾಟರ್ ಬೋರ್ಡು ಕೇವಲ ಸ್ಟೀಲ್ ಪೈಪುಗಳಿಗೆ ಮಾತ್ರ ಟೆಂಡರು ಕರೆದಿದ್ದರೆ ಆಗ ಏನುವಾದ ಮಾಡುತ್ತಿದ್ದರು ?

(ಇಂಟರಪ್‌ಷನ್ಸ್)

ಸ್ಟೀಲ್ ಪೈಪ್ಸ್, ಪ್ರಿಸ್ಟ್ರೆಸ್ಡ್ ಪೈಪ್ಸ್, ಪಾರ್ಟ್‌ಲಿ ಸ್ಟೀಲ್ ಪಾರ್ಟ್‌ಲಿ ಪ್ರಿಸ್ಟ್ರೆಸ್ ಪೈಪುಗಳಿಗೆಲ್ಲಾ ಟೆಂಡರು ಕರೆದರು. ಬರೀ ಸ್ಟೀಲ್ ಪೈಪುಗಳಿಗೆ ಮಾತ್ರ ಟೆಂಡರು ಕರೆದಿದ್ರೆ ಆಗ ವಾಟರ್ ಬೋರ್ಡು ಅದನ್ನೇ ತೆಗೆದುಕೊಳ್ಳಲು ನಿರ್ಧಾರಮಾಡಿತ್ತು ಎಂದು ಹೇಳಬಹುದಾಗಿತ್ತು. ಯಾವುದೇ ಒಂದು ವಿಷಯವಾದರೂ ಕೂಡ ಚೆನ್ನಾಗಿ ಪರಾಮರ್ಶೆಮಾಡಿ ಹೇಳಬೇಕು. ಮೊದಲು ಟೆಂಡರು ಕರೆಯುವಾಗ ಯಾವುದನ್ನು ಉಪಯೋಗಿಸಬೇಕು ಎಂದು ನಿರ್ಧಾರ ಮಾಡಿರಲಿಲ್ಲ. ಟೆಂಡರು ಕರೆದಿರುವುದನ್ನು ನೋಡಿದರೆ ಇದು ಗೊತ್ತಾಗುವುದು. ತಜ್ಞರ ಅಭಿಪ್ರಾಯ ಪಡೆದು ಯಾವುದನ್ನು ಆದಷ್ಟು ತೀವ್ರವಾಗಿ ಕಾರ್ಯಗತ ಮಾಡಲು ಉಪಯೋಗಿಸಬಹುದು, ಯಾವುದು ಬೆಂಗಳೂರಿನ ಹಿತದೃಷ್ಟಿಯಿಂದ ಒಳ್ಳೆಯದು ಎಂಬುದನ್ನೆಲ್ಲಾ ಪರಾಮರ್ಶೆಮಾಡಿ ಒಂದು ನಿರ್ಧಾರಕ್ಕೆ ಬರಬೇಕು ಎಂದು ಆಲ್ಟರ್ನೇಟಿವ್ ಪ್ರಪೋಸಲ್ಸ್ ಪರಿಶೀಲಿಸಿ ಸೂಕ್ತ ಮಾರ್ಗ ಅನುಸರಿಸಲು ಪ್ರಯತ್ನ ಮಾಡಲಾಗಿದೆ.

ಇನ್ನೊಂದು ವಿಷಯ ಪ್ರಿ ಸ್ಟ್ರೆಸ್ಡ್ ಕಾನ್‌ಕ್ರೀಟ್ ಪೈಪ್ಸ್ ಇರಬೇಕೇ, ಸ್ಟೀಲ್ ಪೈಪ್ಸ್ ಇರಬೇಕೇ ಎಂದು ಮಾನ್ಯ ಸದಸ್ಯರು ಕೇಳಿದರು. ಇದರಲ್ಲಿ ಭಿನ್ನಾಭಿಪ್ರಾಯ ಇದೆ. ಅನೇಕ ಕಾನ್‌ಫರೆನ್ಸ್‌ಗಳಲ್ಲಿ ಈ ವಿಷಯ ಚರ್ಚೆಯಾಗಿ ಒಂದು ನಿರ್ದಿಷ್ಟವಾದ ಅಭಿಪ್ರಾಯಕ್ಕೆ ಬರಲು ಸಾಧ್ಯವಾಗಿಲ್ಲ. ಆಯಾ ಪರಿಸ್ಥಿತಿಗನುಗುಣವಾಗಿ ಅಲ್ಲಿರತಕ್ಕ ತಜ್ಞರು ಒಂದು ನಿರ್ಧಾರಕ್ಕೆ ಬರಬೇಕೆಂದ ಮೇಲೆ ಒಂದು ನಿರ್ಧಾರಕ್ಕೆ ಬಂದಿದ್ದಾರೆ. ಬೆಂಗಳೂರಿನಲ್ಲಿ ಪ್ರಿ ಸ್ಟ್ರೆಸ್ಡ್ ಕಾನ್‌ಕ್ರೀಟ್ ಪೈಪ್ಸ್ ಇರಬೇಕು ಎಂದು ಅಭಿಪ್ರಾಯಕ್ಕೆ ಬಂದಮೇಲೆ ಇದನ್ನು ಮಾಡಬೇಕಾದರೆ ಇಂಡಿಯಾದಲ್ಲಿ ಇಷ್ಟು ಹೈಪ್ರೆಷರ್ ಡೈಮನ್‌ಷನ್‌ದು ಯಾವುದಾದರೂ ಒಂದು ಯೋಜನೆ ಕಾರ್ಯಗತವಾಗಿದೆಯೇ ಎಂದು ನೋಡಿದಾಗ, ಇಂತಹ ಯೋಜನೆ ಇಲ್ಲಿಯವರೆಗೂ ಬೇರೆಯೂ ಕಾರ್ಯಗತ ಮಾಡಿಲ್ಲ ಮತ್ತು ಬೇರೆ ರಾಷ್ಟ್ರಗಳಲ್ಲಿ ಯಾವುದಾದರೂ ಮಾಡಿದ್ದಾರೆಯೇ ಎಂಬುದನ್ನು ನೋಡಬೇಕಾಗಿದೆ. ಇಂಡಿಯಾ ದೇಶದಲ್ಲಂತೂ ಇಲ್ಲವೇ ಇಲ್ಲ. ನಾವು ಇಂತಹ ಒಂದು ರಿಸ್ಕ್ ತೆಗೆದುಕೊಳ್ಳಬೇಕೇ, ಬಾರದೇ ಎಂಬ ಪ್ರಶ್ನೆ ಬೋರ್ಡ್ ಮುಂದೆ ಬಂತು. ಅಲ್ಲಿ ಒಂದು ಟೆಕ್ನಿಕಲ್ ಕಮಿಟಿ ಇದೆ, ಅದರಲ್ಲಿ ಇರತಕ್ಕ ಪ್ರಾಜೆಕ್ಟ್ ಇಂಜನಿಯರು ಸಿಲೋನ್ ಮತ್ತು ಇತರ ಕಡೆಗಳಲ್ಲಿ ಕೆಲಸ ಮಾಡಿ ಬಹಳ ಹೆಸರು ವಾಸಿಯಾದವರ ಒಪೀನಿಯನ್ ಸಹ ಈ ರೀತಿ ಇದೆ :—He is a consultant is the world organisation. His merit as an Engineer is recognised by international Organisation like W.H.O. The expert of the Institution of Engineers has also vetted his opinion. ಈ ರೀತಿ ಮಾಡಬೇಕು ಎಂದು ಟೆಕ್ನಿಕಲ್ ಕಮಿಟಿಯವರ ಅಭಿಪ್ರಾಯ ಬಂದನಂತರ ಈ ಒಂದು ನಿರ್ಧಾರ ತೆಗೆದುಕೊಂಡಿದ್ದಾರೆ. ಮಾನ್ಯ ಸದಸ್ಯರು ಟೆಂಡರ್ ಬಗ್ಗೆ ಕೇಳಿದರು, ಲೋಯಸ್ಟ್ ಟೆಂಡರ್‌ನ್ನೇ ಅಕ್ಸೆಪ್ಟ್ ಮಾಡಿದ್ದಾರೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಇಂಡಿಯನ್ ಹ್ಯೂಮ ಪೈಪ್ಸ್ ಕಂಪೆನಿ ಟೆಂಡರ್ಸ್ ಅಕ್ಸೆಪ್ಟ್ ಮಾಡಿದ್ದಾರೆಯೇ ಇಲ್ಲವೇ ?

ಶ್ರೀ ಬಿ. ಎಂ. ಪಾಟೀಲ್.—ಇಂಡಿಯನ್ ಹ್ಯೂಂಪೈಪ್ಸ್ ಅವರದು 648.23 ಲಕ್ಷ ರೂಪಾಯಿ ಟೆಂಡರು, ಇ.ಸಿ.ಸಿ. ಅವರದು 614.07 ಲಕ್ಷ ರೂಪಾಯಿ ಟೆಂಡರು ಬಂದಿತ್ತು. ಸುಮಾರು 34 ಲಕ್ಷ ರೂಪಾಯಿ ಇ.ಸಿ.ಸಿ ಯದ್ದು ಕಡಮೆ ಇದೆ. ಇವರು ಅರ್ನೆಸ್ಟ್ ಮನಿ ಡಿಪಾಸಿಟ್ ಮಾಡಿಲ್ಲ ಎಂದು ಕೆಲವರು ಹೇಳಿದರು, ಅಂಕಿ ಅಂಶ ನನ್ನಲ್ಲಿ ಇದೆ. ಅರ್ನೆಸ್ಟ್ ಮನಿ ಡಿಪಾಸಿಟ್ ಮಾಡಿದ್ದಾರೆ. ಇಂಡಿಯನ್ ಹ್ಯೂಂ ಪೈಪ್ಸ್‌ನವರು ಅಡ್ವಾನ್ಸ್ ಕೊಡಬೇಕೆಂದು ಕಂಡೀಷನ್ ಹಾಕಿದ್ದರು. ಮಾನ್ಯ ಚನ್ನಬಸಪ್ಪನವರಿಗೆ ಪಿ. ಡಬ್ಲ್ಯು. ಡಿ. ಮಿನಿಸ್ಟರಾಗಿ ಸಾಕಾದಷ್ಟು ಅನುಭವ ಇದೆ. ಅವರೂ ಸಹ ಅನೇಕ ಕಾಂಟ್ರಾಕ್ಟ್‌ಗಳನ್ನು ಕೊಟ್ಟಿದ್ದಾರೆ. ಯಾವ ಕಂಟ್ರಾಕ್ಟರಿಗೂ ಅಡ್ವಾನ್ಸ್ ಕೊಟ್ಟಿಲ್ಲ ಎಂಬುದನ್ನು ಅವರು ಒಪ್ಪಿಕೊಂಡರೆ ನಾನು ಅವರು ಹೇಳುವುದನ್ನು ಒಪ್ಪಿಕೊಳ್ಳುತ್ತೇನೆ. ಅಡ್ವಾನ್ಸ್ ಕೊಡಬೇಕಾದಾಗಲೂ ಕೂಡ ಇಂಡಿಯನ್ ಹ್ಯೂಂ ಪೈಪ್ಸ್‌ನವರು ಇಂಟರೆಸ್ಟ್ ಫ್ರೀ ಕೊಡಿ ಎಂದು ಕೇಳಿದರು. ಯಾವುದಾದರೂ ಒಂದು ಟೆಂಡರನ್ನು ಪರಿಶೀಲನೆಮಾಡುವಾಗ ಬೋರ್ಡಿನಲ್ಲಿರುವವರು ತಮಗೆ ಯಾವುದು ಅಡ್ವಾಂಟೇಜ್ ಆಗುತ್ತದೆನ್ನುವುದನ್ನು ನೋಡುತ್ತಾರೆ. ಯಾವುದು ಫೇವರಬಲ್ ಆಗಿ ಇರುತ್ತದೋ ಅದರ ಬಗ್ಗೆ ನೆಗೋಷಿಯೇಷನ್ಸ್ ಮಾಡುತ್ತಾರೆ. ಅನೇಕ ಕಂಪನಿಯವರು ಟೆಂಡರುಗಳನ್ನು ಕೊಟ್ಟಿದ್ದಾರೆ. ಹೀಗಿದ್ದಾಗ ಅವರನ್ನು ಕರೆದು ನೆಗೋಷಿಯೇಟ್ ಮಾಡಿ ಬೋರ್ಡಿಗೆ ಯಾವುದು ಅಡ್ವಾಂಟೇಜಸ್ ಎಂದು ನೋಡಿ ಮಾಡಿದ್ದಾರೆ. ಲೋಯಸ್ಟ್ ಟೆಂಡರನ್ನು ಅಕ್ಸೆಪ್ಟ್ ಮಾಡಿದಾರೆ.

ಶ್ರೀ ಆರ್. ದಯಾನಂದ ಸಾಗರ್.—ತಾವೇ ಅವರಿಗೆ ಸ್ಟೀಲ್ ಕೊಡುತ್ತೇವೆಂದು ಹೇಳಿದ್ದೀರಿ. ಆಮೇಲೆ ಕೊಡಲಿಲ್ಲ. ಆದ್ದರಿಂದ ತಾವು ಬೋರ್ಡಿನವರ ಮೇಲೆ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಬಿ. ಎಂ. ಪಾಟೀಲ್.—ಸ್ಟೀಲ್ ಸಪ್ಲೈ ಮಾಡಬೇಕೆಂದಾಗ್ಗೆ ಜೆಕ್ ಕಂಪನಿಯವರು ಇ.ಸಿ.ಸಿ. ಗೆ ಟೆಂಡರ್ ಸಿಕ್ಕಿದ ಪಕ್ಷದಲ್ಲಿ ಸ್ಟೀಲ್ ಕೊಡುವುದಾಗಿ ಆಫರ್ ಮಾಡಿದ್ದರು. ಅದಕ್ಕೆ ಇ.ಸಿ.ಸಿ. ಯವರಿಗೆ ತಮ್ಮ ಗುಡ್ ಆಫೀಸಸ್ ಯೂಜ್ ಮಾಡಿ, ಜೆಕ್ ಸ್ಟೀಲ್‌ಗೆ ಕೊಡಿಸಬೇಕೆಂದು ವಾಟರ್ ಬೋರ್ಡ್ ಸಲಹೆ ಮಾಡಿತು. ಈ ಸಂದರ್ಭದಲ್ಲಿ ಬೋರ್ಡಿನವರ ಮೇಲೆ ಕ್ರಮ ತೆಗೆದುಕೊಳ್ಳುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.

Sri R. DAYANADA SAGAR.—They are trying to loot people's money. This is unfair. I am prepard to take the consequences.

ಶ್ರೀ ಬಿ. ಎಂ. ಪಾಟೀಲ್.—ಜೆಕ್ ಕಂಪೆನಿಯವರು ಸ್ಟೀಲ್ ಸಪ್ಲೈ ಮಾಡುವ ಆಫರ್ ಹಿಂತೆಗೆದುಕೊಂಡರು. ಸ್ಟೀಲ್ ಸಪ್ಲೈ ಮಾಡಲು ಈ ಕಂಪನಿಯವರ ಮೇಲಾಗಲೀ, ಇ. ಸಿ. ಸಿ. ಯವರ ಮೇಲಾಗಲೀ ಯಾವ ಬಂಧನವೂ ಇರಲಿಲ್ಲ.

Sri R. DAYANANDA SAGAR.—People of the State are loosing five crores. I am worried. This is not fair ಇದು ಕಳ್ಳರ ಸಂತೆ.

ಶ್ರೀ ಬಿ. ಎಂ. ಪಾಟೀಲ್.—ಜೆಕ್ ಸ್ಟೀಲ್ ಕಂಪನಿಯವರು ಇ. ಸಿ. ಸಿ.ಗೆ ಟೆಂಡರ್ ಸಿಕ್ಕಿದ ಪಕ್ಷದಲ್ಲಿ ವಾಟರ್ ಬೋರ್ಡಿಗೆ ಸ್ಟೀಲ್ ಕೊಡಲು ಆಫರ್ ಮಾಡಿದ್ದರು. ಇ.ಸಿ.ಸಿ. ಯವರು ತಮ್ಮ ಗುಡ್ ಆಫೀಸನ್ನು ಉಪಯೋಗಿಸಿ ಸ್ಟೀಲ್ ಕೊಡಿಸಲು ಪ್ರಯತ್ನಿಸಲು ಬೋರ್ಡಿನವರು ಸಲಹೆ ಮಾಡಿದ್ದರು. ಒರಿಜಿನಲ್ ಟೆಂಡರ್ ಪ್ರಕಾರ ನೆಗೋಷಿಯೇಷನ್ಸ್ ಪ್ರಾರಂಭ ಮಾಡಿದರು.

Sri R. DAYANANDA SAGAR.—On 15tn May 1970, the Board has recommended for punnishing E.C.C. for not adhering to condition.

Sri M. S. KRISHNAN.—Sir, the same Engineer has recommended that the Board cannot suppy steel.

ಶ್ರೀ ಆರ್. ದಯಾನಂದಸಾಗರ್.—ಇವರು ಬಹಳ ಅನ್ಯಾಯ ಮಾಡುತ್ತಿದ್ದಾರೆ. ಹಾಗೂ ಮೋಸಮಾಡುತ್ತಿದ್ದಾರೆ.

Sri B. M. PATIL.—If my hon. friend can prove that I am wrong, I am prepared to correct myself, but he should have tolerence to listen to my reply. ಈಗ ಇ.ಸಿ.ಸಿ. ಕಂಪನಿಯವರ ಮೇಲೆ ಕ್ರಮ ತೆಗೆದುಕೊಳಬೇಕೆಂದು

(ಶ್ರೀ ಬಿ. ಎಂ. ಪಾಟೀಲ್)

ಹೇಳಿದ್ದಾರೆ. ಇ. ಸಿ. ಸಿ. ಅವರ ಮೇಲೆ ಕ್ರಮ ಏಕೆ ತೆದುಕೊಳಬೇಕು ? When this was referred to the Law Member an the Board who is an eminent lawyer in the State--he gave the opinion that it may not be possible to take action against the concerned firm. He is also an eminent Advocate. ಅಂತ ಅವರ ಅಭಿಪ್ರಾಯವನ್ನು ತೆಗೆದುಕೊಂಡಿದ್ದಾರೆ. ಅವರಿಗೆ ಸಾಕಷ್ಟು ನಾಲೆಡ್ಜ್ ಇರಲಿಲ್ಲವೆಂದು ಹೇಳುತ್ತಾರೆ. ಆಮೇಲೆ ಈ ಅಡ್ವಾನ್ಸ್ ಏನು ಕೊಡುತ್ತಿದ್ದಾರೆ; ಅದು ಇಂಟರೆಸ್ಟ್ ಬೇರಿಂಗ್ ಅಡ್ವಾನ್ ಇದೆ. ಅದರ ಜೊತೆಗೆ ಬ್ಯಾಂಕ್ ಗ್ಯಾರೆಂಟಿ ಕೊಡುತ್ತಾರೆ. ಮಾನ್ಯ ಸದಸ್ಯರಿಗೆ ಇದರ ಬಗ್ಗೆ ಅನೇಕ ಡೀಟೈಲ್ಸ್ ಸಿಕ್ಕಿಲ್ಲವೆಂದು ಕಾಣುತ್ತದೆ.

ಇನ್ನು ಅನೇಕ ಅಕ್ರಮಗಳು ಅಲ್ಲಿ ನಡೆದಿವೆ ಎಂದು ಮಾನ್ಯ ಸದಸ್ಯರು ಹೇಳಿದರು. ಆದರೆ ಅದು ಸತ್ಯಕ್ಕೆ ದೂರವಾದ ಮಾತು. ಇನ್ನು ವಾಟರ್ ಬೋರ್ಡಿನ ವಿಷಯದಲ್ಲಿ ಮಂತ್ರಿಮಂಡಲ ಹಸ್ತಕ್ಷೇಪ ಮಾಡಿದೆ ಎಂದು ಹೇಳಿದರು. ಆದರೆ ಮುಖ್ಯಮಂತ್ರಿಯಾಗಲಿ, ಅಥವಾ ಇನ್ನಿತರ ಮಂತ್ರಿಯಾಗಲಿ, ಇದರಲ್ಲಿ ಯಾವ ಹಸ್ತಕ್ಷೇಪವನ್ನೂ ಮಾಡಿಲ್ಲ. ವಾಟರ್ ಬೋರ್ಡಿನವರೇ ಒಂದು ನಿರ್ಣಯವನ್ನು ತೆಗೆದುಕೊಂಡಿದ್ದಾರೆ. ಪಾಲಿಸಿ ವಿಚಾರದಲ್ಲಿ ಮಾತ್ರ ಸರ್ಕಾರ ಇಂಟರ್‌ಫಿಯರ್ ಮಾಡಬಹುದು. ಆದರೆ ದಿನನಿತ್ಯದ ಕೆಲಸಕಾರ್ಯಗಳಲ್ಲಿ ಹಸ್ತಕ್ಷೇಪ ಮಾಡುವುದು ಸರಿಯೂ ಅಲ್ಲ, ಮಾಡಿಯೂ ಇಲ್ಲ.

ಈ ರೀತಿ ಬೋರ್ಡಿನವರು ಒಂದು ನಿರ್ಣಯವನ್ನು ತೆಗೆದುಕೊಂಡಿದ್ದಾರೆ. ಬೋರ್ಡಿನವರು ಇದಲ್ಲದೆ ಅನೇಕ ಕೆಲಸಗಳನ್ನು ಮಾಡಿಸುತ್ತಿದ್ದಾರೆ. ಅಲ್ಲಿ ಎಕ್ಸ್‌ಪರ್ಟ್ ಇಂಜಿನಿಯರ್ಸ್ ಇದ್ದಾರೆ, ಅಫೀಷಿಯಲ್ಸ್ ಇದ್ದಾರೆ, ನಾನ್ ಅಫೀಷಿಯಲ್ ಇದ್ದಾರೆ, ಮತ್ತು ಒಳ್ಳೆಯ ನುರಿತ ಅನುಭವಿಗಳು ಇದ್ದಾರೆ. ಬೆಂಗಳೂರು ಜನರಿಗೆ ಈ ವಿಚಾರದಲ್ಲಿ ಎಷ್ಟು ಕುತೂಹಲ ಆಸಕ್ತಿ ಇದೆಯೋ, ಅದಕ್ಕಿಂತಲೂ ಹೆಚ್ಚು ಆಸಕ್ತಿ, ಕುತೂಹಲ ಇದರಲ್ಲಿರುವ ಮಹನೀಯರಿಗೆ ಇದೆಯಲ್ಲದೆ, ಅದಕ್ಕಿಂತ ಕಡಿಮೆ ಏನೂ ಇಲ್ಲ. ಆದ್ದರಿಂದ ಅವರು ಏನು ನಿರ್ಧಾರ ತೆಗೆದುಕೊಂಡಿದ್ದಾರೆ, ಅದು ಬೆಂಗಳೂರಿನ ಜನರ ಹಿತದೃಷ್ಟಿಯಿಂದ ತೆಗೆದುಕೊಂಡಿದ್ದಾರೆಂದು ಹೇಳಬಯಸುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಒಂದು ಕ್ಲಾರಿಫಿಕೇಶನ್. ಮೊದಲು ಇ.ಸಿ.ಸಿ. ಕಂಪೆನಿಯವರು ಬ್ಲ್ಯಾಕ್ ಔಟ್ ಆದಾಗ, ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಎರಡನೆಯದು ಬ್ಲ್ಯಾಕ್ ಔಟ್ ಆದಮೇಲೆ ಈ ಬೋರ್ಡು ನೆಗೋಷಿಯೇಷನಿನಲ್ಲಿ ಪಾತ್ರವಹಿಸಿ, ಅದನ್ನು ಕನ್ಸಿಡರೇಷನಿಗೆ ತೆಗೆದುಕೊಂಡು, ಇಂಡಿಯನ್ ಹ್ಯೂಂ ಪೈಪ್ಸಿಗೆ ಕೊಡಬೇಕೆಂದು ತೀರ್ಮಾನ ಮಾಡಿದ್ದು ಯಾವ ತಾರೀಖಿಗೆ? ಮೂರನೆಯದು ನೀವು 15-5-1970 ರಲ್ಲಿ ನೆಗೋಷಿಯೇಟ್ ಮಾಡುವುದಕ್ಕೆ ಅವರನ್ನು ಕರೆಯಲಿಲ್ಲವೇ? ಜೇಗ್‌ಮೇನ್ ಇನ್ನೂ ಕಡಿಮೆಗೆ ಬಂದರೆ ತೀರ್ಮಾನ ಮಾಡುತ್ತೇವೆಂದು ಹೇಳುವುದಕ್ಕೆ ಕಾರಣವೇನು ? ಈಗ ಏನು 6.1 ಕೋಟಿಗೆ ಇ.ಸಿ.ಸಿ.ಗೆ. ಕೊಟ್ಟಿದ್ದೀರಿ, ಅದಕ್ಕಿಂತ ಕಡಿಮೆ ಅಂದರೆ 5½ ಕೋಟಿಗೆ ಮಾಡುತ್ತೇವೆ ಎಂದು ನಾಳೆ ಯಾರಾದರೂ ಬಂದರೆ ನೀವು ನೆಗೋಷಿಯೇಟ್ ಮಾಡುತ್ತೀರಾ ? ಇದಕ್ಕೆ ಏನಾದರೂ ನೀತಿ ನಿಯಮ ಇದೆಯೇ ? ಇಲ್ಲದಿದ್ದರೆ, ನಿಮಗೆ ಬೇಕಬೇಕಾದ ಹಾಗೆ, ಅನುಕೂಲವಾಗುವ ಹಾಗೆ ಮಾಡಿಕೊಂಡಿದ್ದೀರಾ ?

ಶ್ರೀ ಬಿ. ಎಂ. ಪಾಟೀಲ್.--ಮಾನ್ಯ ಸದಸ್ಯರು ಅನೇಕ ಪ್ರಶ್ನೆಗಳನ್ನು ಕೇಳಿದ್ದಾರೆ. ನೆಗೋಷಿಯೇಷನ್ ಅಗ್ರಿಮೆಂಟು ಆಗುವ ಮೊದಲೇ, ನೀತಿನಿಯಮದ ಪ್ರಕಾರ ಮಾಡಿದ್ದಾರೆ. ಅದು ಸರಿಯಿಲ್ಲದಿದ್ದರೆ, ಕೋರ್ಟಿನಲ್ಲಿ ಛಾಲೆಂಜ್ ಮಾಡುತ್ತಿದ್ದರು. ಅವರು ಅದನ್ನು ಹಾಗೆ ಛಾಲೆಂಜ್ ಏನೂ ಮಾಡಿಲ್ಲ. ಇ.ಸಿ.ಸಿ.ಯವರ ಮೇಲೆ ಏಕೆ ಕ್ರಮ ತೆಗೆದುಕೊಳ್ಳಲಿಲ್ಲವೆಂಬುದಕ್ಕೆ ಮೊದಲೇ ಉತ್ತರ ಕೊಟ್ಟಿದ್ದೇನೆ. ಇ.ಸಿ.ಸಿ.ಯವರು ಸ್ಪೀಲ್‌ಸಪ್ಲೈ ಮಾಡುತ್ತೇವೆಂದು ಹೇಳಿಲ್ಲ, ಉಳಿದ ಪ್ರಶ್ನೆಗಳಿಗೆ ಮೊದಲೇ ಉತ್ತರಿಸಿದ್ದೇನೆ.

Mr. DEPUTY SPEAKER.—The House will now adjourn and meet tomorrow at 9-00 A.M.

The House adjourned at Forty minutes past Nine of the Clock to meet again at Nine of the Clock on Tuesday the 29th September 1970.